24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 134 | ನವದೆಹಲಿ | ಬೆಲೆ ₹10 | ನವಂಬರ್ 11, 2026, ಬುಧವಾರ

ಒಳಪುಟಗಳಲ್ಲಿ

ಗಡಿ ಕಾವಲಿಗೆ ರೊಬೋಟಿಕ್ ಹೇಸರಗತ್ತೆಗಳ ನಿಯೋಜನೆ - ಭಾರತೀಯ ಸೇನೆಯಿಂದ ಹೊಸ ಪ್ರಯೋಗ: ಜಮ್ಮು-ಕಾಶ್ಮೀರದಲ್ಲಿ ಹೈಟೆಕ್ ಕಣ್ಗಾವಲು - ಪು.4

ನ.13ರಂದು ಮೈಸೂರಿಗೆ ಪ್ರಧಾನಿ ಮೋದಿ - ಪು.5

ಲೈಂಗಿಕ ದೌರ್ಜನ್ಯದಿಂದ ಮಕ್ಕಳನ್ನು ರಕ್ಷಿಸಿ: ಶಾರದಾ ಕಲ್ಮಲಕರ್ ಕರೆ - ಪು.6



ವಾಯುಮಾಲಿನ್ಯ ನಿಯಂತ್ರಿಸಲು ಕೇಂದ್ರ ಸರ್ಕಾರ ವಿಫಲ: ಮಲ್ಲಿಕಾರ್ಜುನ ಖರ್ಗೆ ಟೀಕೆ

ನವದೆಹಲಿ, ನ.10: ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ವಾಯುಮಾಲಿನ್ಯ ತೀವ್ರಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರದ ಬಿಜೆಪಿ ಸರ್ಕಾರದ ವಿರುದ್ಧ ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ್ ಖರ್ಗೆ ವಾಗ್ದಾಳಿ ನಡೆಸಿದ್ದಾರೆ.

12 ವರ್ಷದಿಂದಲೂ ಪ್ರಧಾನಿಯಿಂದ ಕೇವಲ ಭರವಸೆಯಷ್ಟೇ, ಕ್ರಮವಿಲ್ಲ

ಮಾಲಿನ್ಯ ವಿಚಾರದಲ್ಲಿ ಭಾರತ ವಿಶ್ವಗುರು ಆಗುತ್ತಿದೆಯೇ ಎಂದು ಪ್ರಶ್ನೆ

ಭಾರತ ವಾಯುಮಾಲಿನ್ಯ ವಿಚಾರದಲ್ಲಿಯೇ ವಿಶ್ವಗುರು ಆಗುತ್ತಿದೆಯೇ ಎಂದು ಪ್ರಶ್ನಿಸಿರುವ ಅವರು, ಕಳೆದ 12 ವರ್ಷಗಳಿಂದ ಪ್ರಧಾನಿ ನರೇಂದ್ರ ಮೋದಿ ಮಾಲಿನ್ಯ ನಿಯಂತ್ರಣದ ವಿಚಾರದಲ್ಲಿ ಕೇವಲ ಭರವಸೆಗಳನ್ನು ನೀಡುತ್ತಿದ್ದಾರೆ ಎಂದು ಟೀಕಿಸಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಖರ್ಗೆ, ವಾಯುಮಾಲಿನ್ಯ ನಿಯಂತ್ರಣಕ್ಕೆ ಕೈಗೊಂಡಿರುವ ಕ್ರಮಗಳ ಬಗ್ಗೆ ಪ್ರಶ್ನೆಗಳನ್ನು ಎತ್ತಿದ್ದಾರೆ. ದೆಹಲಿಯ 59 ವಾಯು ಗುಣಮಟ್ಟ ಮಾಪನ ಕೇಂದ್ರಗಳ ಪೈಕಿ 36 ಕೇಂದ್ರಗಳಲ್ಲಿ ಪಿಎಂ 2.5 ಅಂಕಿ-ಅಂಶಗಳು ಕಾಣೆಯಾಗಿರುವುದನ್ನು ಉಲ್ಲೇಖಿಸಿದ್ದಾರೆ. ಮಾಲಿನ್ಯ ನಿಯಂತ್ರಣಕ್ಕೆ ಪರಿಣಾಮಕಾರಿ ಕ್ರಮಗಳ ಬದಲಿಗೆ ಪ್ರಚಾರ, ಭರವಸೆ ಮತ್ತು ಪರಸ್ಪರ ಆರೋಪ-ಪ್ರತ್ಯಾರೋಪಗಳು ನಡೆಯುತ್ತಿವೆ ಎಂದು ಆರೋಪಿಸಿದ್ದಾರೆ.


ಮಾಲಿನ್ಯ ನಿಯಂತ್ರಣಕ್ಕೆ ಮೀಸಲಿಟ್ಟಿರುವ ಹಣದ ಬಳಕೆಯ ಬಗ್ಗೆಯೂ ಖರ್ಗೆ ಪ್ರಶ್ನಿಸಿದ್ದಾರೆ. ದೆಹಲಿಯ ಪರಿಸರ ಪರಿಹಾರ ನಿಧಿಯ 1,154 ಕೋಟಿ ಬಳಕೆಯಾಗದೆ ಉಳಿದಿದೆ. ರಾಷ್ಟ್ರೀಯ ಸ್ವಚ್ಛ ವಾಯು ಕಾರ್ಯಕ್ರಮದಡಿ ಬಿಡುಗಡೆಯಾದ ಅನುದಾನದಲ್ಲಿ ದೆಹಲಿ ಸರ್ಕಾರ ಡಿಸೆಂಬರ್ 2025ರವರೆಗೆ ಕೇವಲ ಶೇ.17ರಷ್ಟನ್ನು ಮಾತ್ರ ಬಳಸಿದೆ ಎಂದು ಆರೋಪಿಸಿದ್ದಾರೆ.



ಇದೇ ವೇಳೆ, ದೆಹಲಿ-ಎನ್‌ಸಿಆರ್‌ನಲ್ಲಿ ವಾಹನಗಳಿಂದ ಉಂಟಾಗುತ್ತಿರುವ ಮಾಲಿನ್ಯ ನಿಯಂತ್ರಣಕ್ಕೆ ಸಂಬಂಧಿಸಿದಂತೆ ದೆಹಲಿ, ಹರಿಯಾಣ, ಉತ್ತರ ಪ್ರದೇಶ ಮತ್ತು ರಾಜಸ್ಥಾನ ಸರ್ಕಾರಗಳು ಎರಡು ವಾರಗಳಲ್ಲಿ ಕೈಗೊಂಡಿರುವ ಕ್ರಮಗಳು ಹಾಗೂ ಮುಂದಿನ ಯೋಜನೆಗಳ ಕುರಿತು ವಿವರವಾದ ಉತ್ತರ ಸಲ್ಲಿಸುವಂತೆ ಸುಪ್ರೀಂ ಕೋರ್ಟ್ ಸೂಚಿಸಿರುವುದನ್ನು ಖರ್ಗೆ ಪ್ರಸ್ತಾಪಿಸಿದ್ದಾರೆ.

5 ವರ್ಷದಲ್ಲಿ 1.69 ಲಕ್ಷಕ್ಕೂ ಹೆಚ್ಚು ಸಾವು

ಮಾಲಿನ್ಯದಿಂದ ಉಂಟಾಗುತ್ತಿರುವ ಸಾವುಗಳ ಅಂಕಿಅಂಶಗಳನ್ನೂ ಪ್ರಸ್ತಾಪಿಸಿರುವ ಮಲ್ಲಿಕಾರ್ಜುನ ಖರ್ಗೆ ಅವರು, 2023ರಲ್ಲಿ ದೆಹಲಿಯಲ್ಲಿ ಕಣಗಳ ಮಾಲಿನ್ಯದಿಂದ ಅಂದಾಜು 17,188 ಸಾವುಗಳು ಸಂಭವಿಸಿವೆ ಎಂದು ತಿಳಿಸಿದ್ದಾರೆ. ಅದೇ ರೀತಿ, 2021ರಲ್ಲಿ ದೇಶಾದ್ಯಂತ ವಾಯುಮಾಲಿನ್ಯ ಸಂಬಂಧಿತ ಕಾರಣಗಳಿಂದ ಐದು ವರ್ಷದೊಳಗಿನ 1.69 ಲಕ್ಷಕ್ಕೂ ಹೆಚ್ಚು ಮಕ್ಕಳು ಮೃತಪಟ್ಟಿದ್ದಾರೆ ಎಂದು ಉಲ್ಲೇಖಿಸಿದ್ದಾರೆ.



ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಬೆಂಗಳೂರಿನ ಸದಾಶಿವನಗರ ನಿವಾಸದಲ್ಲಿ ಮಂಗಳವಾರ ಭೇಟಿಮಾಡಿ ದೀಪಾವಳಿ ಹಬ್ಬದ ಶುಭಾಶಯ ಕೋರಿದರು.

ರಾಜ್ಯದಲ್ಲಿ ನಾಗರಿಕ ವಿಮಾನಯಾನ ಬೆಳವಣಿಗೆ ಗುರಿಯೊಂದಿಗೆ ಸಮಗ್ರ ನೀತಿ

- ಮುಂದಿನ ಸಂಪುಟ ಸಭೆಯಲ್ಲಿ ಮಂಡನೆ: ಸಚಿವ ಎಂ.ಬಿ. ಪಾಟೀಲ್
- ವಿಮಾನ ನಿಲ್ದಾಣಗಳನ್ನು ನಿರ್ವಹಿಸಲು ಅಗತ್ಯವಾದ ಅಂಶಗಳ ಪರಿಗಣನೆ

ಬೆಂಗಳೂರು, ನ.10: ನಾಗರಿಕ ವಿಮಾನಯಾನದ ಬೆಳವಣಿಗೆಯ ಗುರಿಯೊಂದಿಗೆ ರಾಜ್ಯ ಸರ್ಕಾರ ಸಮಗ್ರ ನೀತಿ ರೂಪಿಸಿದ್ದು, ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಮಂಡಿಸಲಾಗುವುದು ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ್ ಹೇಳಿದ್ದಾರೆ.



ಬೆಂಗಳೂರಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರವೇ ನಿರ್ವಹಿಸಲಿರುವ ವಿಮಾನ ನಿಲ್ದಾಣಗಳಿಗೆ ಸಂಬಂಧಿಸಿದ ಅನುದಾನ, ವಿಜಿಎಫ್, ಸಮರ್ಥ ಕಾರ್ಯಾಚರಣೆ ಸೇರಿದಂತೆ ಹಲವು ಅಂಶಗಳನ್ನು ಈ ನೀತಿಯಲ್ಲಿ ಪರಿಗಣಿಸಲಾಗಿದೆ. ಇದು ಇಡೀ ದೇಶಕ್ಕೆ ಮಾದರಿಯಾಗಬಹುದು ಎಂದಿದ್ದಾರೆ.

ನಾವು ವಿಮಾನ ನಿಲ್ದಾಣಗಳನ್ನು ಸಾವಿರಾರು ಕೋಟಿ ಸುರಿದು ನಿರ್ಮಿಸಿ, ಅವುಗಳನ್ನು ಕೇಂದ್ರ ಸರ್ಕಾರಕ್ಕೆ ಬಿಟ್ಟುಕೊಡುವುದು ಸರಿಯಲ್ಲ. ಹೀಗಾಗಿ ಶಿವಮೊಗ್ಗ, ರಾಯಚೂರು, ವಿಜಯಪುರ ವಿಮಾನ ನಿಲ್ದಾಣಗಳನ್ನು ನಾವೇ ನಿರ್ವಹಿಸುತ್ತಿದ್ದೇವೆ.

ಸ್ಥಗಿತಗೊಂಡಿದ್ದ ಕಲಬುರಗಿ ವಿಮಾನ ನಿಲ್ದಾಣಕ್ಕೆ ಕೆಕೆಆರ್‌ಡಿಬಿ ವತಿಯಿಂದ ಶೇಕಡ 80 ಮತ್ತು ರಾಜ್ಯ ಸರ್ಕಾರದಿಂದ ಶೇಕಡ 20ರಷ್ಟು ಹಣ ಕೊಟ್ಟು ಮತ್ತೆ ವೈಮಾನಿಕ ಸೇವೆ ಆರಂಭಿಸಿದ್ದೇವೆ. ರಾಫ್ತಾರೇಂದ್ರ ಅವರಿಗೆ ಸಾಮರ್ಥ್ಯ ಇದ್ದರೆ ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಹೀಗೆ ಹಣ ತರಲಿ ನೋಡೋಣ ಎಂದು ಸವಾಲು ಹಾಕಿದ್ದಾರೆ.

ಅಳತೆಗೂ ಮೀರಿ ಪೆಟ್ರೋಲ್‌ನಲ್ಲಿ ಎಥೆನಾಲ್: ನಿತಿನ್ ಗಡ್ಕರಿ ಕಾರಣ

ಎಥೆನಾಲ್ ಉತ್ಪಾದನೆಗೆ ವಿಪರೀತ ಉತ್ತೇಜನ ಕೊಟ್ಟ ಕೇಂದ್ರ ಸರ್ಕಾರ ಅದರ ಖರೀದಿಗೆ ಮುಂದಾಗಿಲ್ಲ. ದೇಶದ ನಾಲ್ಕೈದು ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಪೈಲಟ್ ಸ್ವರೂಪದಲ್ಲಿ ತಂದು, ಅದರ ಸಾಧಕ – ಬಾಧಕಗಳನ್ನು ನೋಡಬೇಕಿತ್ತು. ಪೆಟ್ರೋಲಿನಲ್ಲಿ ಅಳತೆ ಮೀರಿ ಎಥೆನಾಲ್ ಸೇರಿಸಿ ಕೇಂದ್ರ ಸರ್ಕಾರ ಅನಾಹುತ ಮಾಡುತ್ತಿದೆ. ಇದಕ್ಕೆ ಹೆದ್ದಾರಿ ಸಚಿವ ನಿತಿನ್ ಗಡ್ಕರಿಯವರೇ ಕಾರಣರಾಗಿದ್ದಾರೆ. ಇದರ ಬಗ್ಗೆ ಸಮಗ್ರ ತನಿಖೆ ಆಗಬೇಕು ಎಂದು ಎಂ.ಬಿ. ಪಾಟೀಲ್ ಒತ್ತಾಯಿಸಿದ್ದಾರೆ.

ವಿಮಾನ ಸೇವೆ ಸ್ಥಗಿತಕ್ಕೆ ಉಡಾನ್-2 ನೀತಿಯ ದೋಷಗಳೇ ಕಾರಣ

ಶಿವಮೊಗ್ಗ ವಿಮಾನ ನಿಲ್ದಾಣದಿಂದ ವಿಮಾನ ಸೇವೆ ಸ್ಥಗಿತವಾಗಿರುವುದಕ್ಕೆ ಕೇಂದ್ರ ಸರ್ಕಾರದ ಉಡಾನ್-2 ನೀತಿಯ ದೋಷಗಳೇ ಕಾರಣ. ಅವರು ಮಂಗಳೂರು ವಿಮಾನ ನಿಲ್ದಾಣವನ್ನು ಅದಾನಿಗೆ ಕೊಟ್ಟರು. ಈಗ ಹುಬ್ಬಳ್ಳಿ ವಿಮಾನ ನಿಲ್ದಾಣದ ಖಾಸಗೀಕರಣ ಮಾಡುತ್ತಿದ್ದಾರೆ. ಕಲಬುರಗಿ ವಿಮಾನ ನಿಲ್ದಾಣಕ್ಕೆ ರಾಜ್ಯ 1,000 ಕೋಟಿ ರೂ. ಖರ್ಚು ಮಾಡಿ, ಕೇಂದ್ರದ ಸುಪರ್ದಿಗೆ ಕೊಟ್ಟಿವೆ. ಅದರಿಂದ ರಾಜ್ಯಕ್ಕೆ ನಯಾಪೈಸೆಯೂ ಬರುತ್ತಿಲ್ಲ. ರಾಜ್ಯ ಸರ್ಕಾರದ ಮೇಲೆ ಆರೋಪ ಮಾಡುತ್ತಿರುವ ಸಂಸದ ರಾಫ್ತಾರೇಂದ್ರ ಇವೆಲ್ಲವನ್ನೂ ತಿಳಿದುಕೊಳ್ಳಬೇಕು. ಉಡಾನ್ ಯೋಜನೆಯನ್ನು ಮೂರು ವರ್ಷಗಳಿಂದ ಐದು ವರ್ಷಗಳಿಗೆ ವಿಸ್ತರಿಸಬೇಕು. ಇದಾದ ಮೇಲೆ 50:50 ವೆಚ್ಚ ಅನುಪಾತದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಇದನ್ನು ನಂತರದ ಐದು ವರ್ಷ ನಡೆಸಿದರೆ ಒಳ್ಳೆಯ ಫಲಿತಾಂಶ ಬರುತ್ತದೆ ಎಂಬ ಸಲಹೆಯನ್ನು ಕೊಟ್ಟಿದ್ದೆವು. ಆದರೆ ಕೇಂದ್ರ ಸರ್ಕಾರ ಇದಕ್ಕೆ ಬೆಲೆ ಕೊಡಲಿಲ್ಲ. ಪರಿಣಾಮವಾಗಿ ಇಂದು ದೇಶದಲ್ಲಿ 17 ವಿಮಾನ ನಿಲ್ದಾಣಗಳು ಸ್ಥಗಿತಗೊಂಡಿವೆ ಎಂದರು.

38 ಕೋಟಿ ರೂ.ವೆಚ್ಚದಲ್ಲಿ ಹಂಪಿ ಸ್ಮಾರಕಗಳ ರಕ್ಷಣೆ, ಪುನರುಜ್ಜೀವನ

ಸಿಎಸ್‌ಆರ್ ಅನುದಾನದ ಬಳಕೆ, ರಾಷ್ಟ್ರೀಯ ಸಂಸ್ಕೃತಿ ನಿಧಿ ಅಡಿ ಯೋಜನೆ ಜಾರಿ

ಬೆಂಗಳೂರು, ನ.10: ವಿಶ್ವಪ್ರಸಿದ್ಧ ಹಂಪಿಯ ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ ಮತ್ತು ಪುನರುಜ್ಜೀವನಕ್ಕೆ ಕೇಂದ್ರ ಸರ್ಕಾರ 38 ಕೋಟಿ ರೂ. ವೆಚ್ಚದ ಸಮಗ್ರ ಯೋಜನೆ ರೂಪಿಸಿದೆ ಎಂದು ತಿಳಿದುಬಂದಿದೆ.

ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿದ್ದ ಹಂಪಿಯ ಪ್ರಮುಖ ದೇವಾಲಯಗಳು, ಮಂಟಪಗಳು ಹಾಗೂ ಐತಿಹಾಸಿಕ ಕಟ್ಟಡಗಳನ್ನು ಸಂರಕ್ಷಿಸುವುದು ಈ ಯೋಜನೆಯ ಉದ್ದೇಶವಾಗಿದೆ. ಕೇಂದ್ರ ಸಂಸ್ಕೃತಿ ಸಚಿವಾಲಯದ ವತಿಯಿಂದ ಈ ಯೋಜನೆ ಕೈಗೆತ್ತಿಕೊಳ್ಳಲಾಗುತ್ತಿದೆ.

ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ನೀಡುವ ಸಿಎಸ್‌ಆರ್ ಅನುದಾನ ಹಾಗೂ ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿ (ಎಂಪಿಎಲ್‌ಎಡಿಎಸ್) ಮೂಲಕ ಯೋಜನೆಗೆ ಹಣ ಒದಗಿಸಲಾಗುತ್ತದೆ.

ರಾಷ್ಟ್ರೀಯ ಸಂಸ್ಕೃತಿ ನಿಧಿ (ಎನ್‌ಸಿಎಫ್) ಅಡಿಯಲ್ಲಿ ಈ ಯೋಜನೆ ಜಾರಿಯಾಗಲಿದ್ದು, ಒಟ್ಟು 38 ಕೋಟಿ ರೂ. ಅನುದಾನ ಲಭ್ಯವಾಗಲಿದೆ. ಇದರಲ್ಲಿ 19 ಕೋಟಿ ರೂ. ಸಂಸದರ ನಿಧಿಯಿಂದ ಬರಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಯೋಜನೆಯ ಅನುಷ್ಠಾನಕ್ಕೂ ಮುನ್ನ ಪಾರಂಪರಿಕ ಸ್ಮಾರಕಗಳ ಸಂರಕ್ಷಣೆಯಲ್ಲಿ ಪರಿಣತಿ ಹೊಂದಿರುವ ವಾಸ್ತುಶಿಲ್ಪ ತಜ್ಞರನ್ನು ಸಚಿವಾಲಯ ನೇಮಿಸಲಿದೆ. ಅವರು ಆಯ್ದ ಸ್ಮಾರಕಗಳ ಸ್ಥಿತಿಗತಿ ಪರಿಶೀಲನೆ, ಹಾನಿಯ ಮೌಲ್ಯಮಾಪನ, ಸಂರಕ್ಷಣಾ ಕಾರ್ಯಗಳ ಯೋಜನೆ ಹಾಗೂ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲಿದ್ದಾರೆ.

ಯಾವ ಸ್ಮಾರಕದಲ್ಲಿ ಯಾವ ರೀತಿಯ ಕೆಲಸ ಮಾಡಬೇಕು, ಎಷ್ಟು ಪ್ರಮಾಣದಲ್ಲಿ ಕಾಮಗಾರಿ ಕೈಗೊಳ್ಳಬೇಕು ಮತ್ತು ಯಾವ ಅನುದಾನದಲ್ಲಿ ಯಾವ ಕೆಲಸ ನಡೆಯಬೇಕು ಎಂಬುದನ್ನು ಸ್ಪಷ್ಟವಾಗಿ ಗುರುತಿಸುವುದು ಈ ಪ್ರಕ್ರಿಯೆಯ ಉದ್ದೇಶವಾಗಿದೆ. ಕಾಮಗಾರಿಗಳ ನಿಖರ ವ್ಯಾಪ್ತಿ ಮತ್ತು ಸ್ವರೂಪವನ್ನು ರಾಷ್ಟ್ರೀಯ ಸಂಸ್ಕೃತಿ ನಿಧಿ ಹಾಗೂ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ಎಎಸ್‌ಐ) ಸಮಾಲೋಚನೆ ನಡೆಸಿ ಅಂತಿಮಗೊಳಿಸಲಿವೆ.



ಯೋಜನೆಯ ವಿವರ

- ವಿರೂಪಾಕ್ಷ ದೇವಾಲಯದ ಉತ್ತರ ಮತ್ತು ದಕ್ಷಿಣ ಭಾಗದಲ್ಲಿರುವ ಬಜಾರ್‌ಗಳ ಸಂರಕ್ಷಣೆ
- ವಿಜಯ ವಿಠಲ ದೇವಾಲಯದ ಸಮೀಪ ಶ್ರೀ ಭಾಷ್ಯಕಾರ ಗುಡಿಯ ಪಶ್ಚಿಮ ಭಾಗದಲ್ಲಿರುವ ಕುಸಿದುಬಿದ್ದ ಮಂಟಪದ ಪುನರುಜ್ಜೀವನ
- ಹೇಮಕೂಟ ಬೆಟ್ಟದಲ್ಲಿರುವ ಜೈನ ದೇವಾಲಯಗಳ ಸಂರಕ್ಷಣೆ
- ಸಿಂಗನಾಯಕನಹಳ್ಳಿಯಲ್ಲಿರುವ ಸರಸ್ವತಿ ದೇವಾಲಯದ ಸಂರಕ್ಷಣೆ


ದೇಶದ 3697 ಸ್ಮಾರಕಗಳ ಸಂರಕ್ಷಣೆಗೆ ಕೇಂದ್ರ ಕ್ರಮ

ಇದರ ಹೊರತಾಗಿಯೂ ಎಎಸ್‌ಐ (ಪುರಾತತ್ವ ಸರ್ವೇಕ್ಷಣಾ ಇಲಾಖೆ) ತನ್ನ ವ್ಯಾಪ್ತಿಯಲ್ಲಿರುವ ದೇಶದ 3,697 ಸ್ಮಾರಕಗಳ ಸಂರಕ್ಷಣಾ ಕಾರ್ಯವನ್ನು ನಿಯಮಿತವಾಗಿ ಕೈಗೊಳ್ಳುತ್ತಿದೆ. 2021ರಿಂದ 2026ರ ಅವಧಿಯಲ್ಲಿ ರಾಷ್ಟ್ರೀಯ ಸಂಸ್ಕೃತಿ ನಿಧಿಗೆ 24 ಕೋಟಿ ದೇಣಿಗೆ ಬಂದಿದೆ ಎಂದು ಕೇಂದ್ರ ಸಂಸ್ಕೃತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಕಳೆದ ಮಾರ್ಚ್‌ನಲ್ಲಿ ರಾಜ್ಯಸಭೆಗೆ ನೀಡಿದ ಉತ್ತರದಲ್ಲಿ ತಿಳಿಸಿದ್ದಾರೆ. ರಾಷ್ಟ್ರೀಯ ಸಂಸ್ಕೃತಿ ನಿಧಿಯಡಿ ನಡೆಯುವ ಯೋಜನೆಗಳ ಪ್ರಗತಿಯನ್ನು ಯೋಜನಾ ಅನುಷ್ಠಾನ ಸಮಿತಿ (ಪಿಐಸಿ) ಪರಿಶೀಲಿಸುತ್ತದೆ. ದಾನಿಗಳು ಮತ್ತು ಕಾಮಗಾರಿ ಅನುಷ್ಠಾನ ಸಂಸ್ಥೆಗಳೊಂದಿಗೆ ಮಾಡಿಕೊಂಡಿರುವ ಒಪ್ಪಂದಗಳ ಪ್ರಕಾರ ಯೋಜನೆಗಳ ಕಾಲಮಿತಿಯನ್ನು ನಿಗದಿಪಡಿಸಲಾಗುತ್ತದೆ.





ನಿತ್ಯ ಪಂಚಾಂಗ 11.11.2026 ಬುಧವಾರ



ಶ್ರೀ ಪರಾಭವ ನಾಮ ಸಂವತ್ಸರ, ದಕ್ಷಿಣಾಯನ ಶರದ್‌ಋತು/ ಚಾಂದ್ರಮಾನ ಆಶ್ವಯುಜ–ಕಾರ್ತಿಕ ಮಾಸ

ಕಾರ್ತಿಕ ಶುದ್ಧ, ಬಿದಿಗೆ, ಅನುರಾಧ ನಕ್ಷತ್ರಭಾವ ಬಿದಿಗೆ, ಹಾಸನಾಂಬ ದೇಗುಲ ಬಾಗಿಲು ಹಾಕುವುದು, ಯಮ ದ್ವಿತೀಯಾ, ಚಂದ್ರಾಪುರ ಜಾತ್ರೆ

ದಿನ	ರಾಹುಕಾಲ	ಯಮಗಂಡ	ಗುಳಿಕಕಾಲ
ಭಾನು	4.30 – 6.00	12.00 – 1.30	3.00 – 4.30
ಸೋಮ	7.30 – 9.00	10.30 – 12.00	1.30 – 3.00
ಮಂಗಳ	3.00 – 4.30	9.00 – 10.30	12.00 – 1.30
ಬುಧ	12.00 – 1.30	7.30 – 9.00	10.30 – 12.00
ಗುರು	1.30 – 3.00	6.00 – 7.30	9.00 – 10.30
ಶುಕ್ರ	10.30 – 12.00	3.00 – 4.30	7.30 – 9.00
ಶನಿ	9.00 – 10.30	1.30 – 3.00	6.00 – 7.30

ಅಭಿವೃದ್ಧಿ ಕಡೆಗಣನೆ: ಜಾಹೀರಾತಿಗಾಗಿ ಬರೋಬ್ಬರಿ 473 ಕೋಟಿ ರೂ. ವ್ಯರ್ಥ



ಕರ್ನಾಟಕ ಸರ್ಕಾರದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆಕ್ರೋಶ

ಬೆಂಗಳೂರು, ನ.10: ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಸಂಪೂರ್ಣವಾಗಿ ಕಡೆಗಣಿಸಿರುವ ಕಾಂಗ್ರೆಸ್ ಸರ್ಕಾರ ಕಳೆದ ಮೂರು ವರ್ಷಗಳಲ್ಲಿ ಜಾಹೀರಾತುಗಳಿಗಾಗಿ ಬರೋಬ್ಬರಿ 473 ಕೋಟಿ ರೂಪಾಯಿಗಳನ್ನು ಪೋಲು ಮಾಡಿದೆ ಎಂದು ಬಿಜೆಪಿ ರಾಜ್ಯ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಟೀಕಿಸಿದ್ದಾರೆ.

ಕೆಟ್ಟ ರಸ್ತೆಗಳು, ನಿರುದ್ಯೋಗ, ರೈತರ ಸಂಕಷ್ಟ ಹಾಗೂ ಗುತ್ತಿಗೆದಾರರ ಬಾಕಿ ಬಿಲ್‌ಗಳಂತಹ ತುರ್ತು ಸಮಸ್ಯೆಗಳನ್ನು ಬಗೆಹರಿಸುವ ಬದಲು, ಸರ್ಕಾರವು ಕೇವಲ ತಮ್ಮ ಪ್ರಚಾರಕ್ಕಾಗಿ ಪ್ರತಿದಿನ 43 ಲಕ್ಷ ರೂಪಾಯಿಗಳಿಗೂ ಅಧಿಕ ಹಣವನ್ನು ಖರ್ಚು ಮಾಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಹಾಲಿನ ದರ, ಬಸ್ ಪ್ರಯಾಣ ದರ, ವಿದ್ಯುತ್ ಶುಲ್ಕ ಸೇರಿದಂತೆ ಅಗತ್ಯ ವಸ್ತುಗಳ ಬೆಲೆಗಳು ನಿರಂತರವಾಗಿ ಏರಿಕೆಯಾಗುತ್ತಿದ್ದರೂ, ಸರ್ಕಾರಕ್ಕೆ ಜನರ ಕಷ್ಟಗಳ ಬಗ್ಗೆ ಕಾಳಜಿ ಇಲ್ಲ ಎಂದು ದೂರಿದ್ದಾರೆ. ಅಭಿವೃದ್ಧಿ ಕಾರ್ಯಗಳ ವಿಷಯ ಬಂದಾಗ ಅನುದಾನದ ಕೊರತೆ ಎಂದು ಹೇಳುವ ಸರ್ಕಾರಕ್ಕೆ ಪ್ರಚಾರ ಮಾಡಲು ಮಾತ್ರ ಹಣದ ಕೊರತೆ ಕಾಡುವುದಿಲ್ಲ ಎಂದು ಕಿಡಿಕಾರಿದ ವಿಜಯೇಂದ್ರ, ಸಾರ್ವಜನಿಕರ ಹಣವನ್ನು ರಾಜಕೀಯ ಸ್ವಯಂ ಪ್ರಚಾರಕ್ಕಲ್ಲದೆ ಜನರ ಕಲ್ಯಾಣಕ್ಕಾಗಿ ಬಳಸಬೇಕು ಎಂದು ಆಗ್ರಹಿಸಿದ್ದಾರೆ.

ದಾಖಲೆ ಪರಿಶೀಲಿಸದೆ ಡಿಸಿ ವಿರುದ್ಧ ಆರೋಪ: ಎಚ್‌ಡಿಕೆ ವಿರುದ್ಧ ಪ್ರಿಯಾಂಕ್ ಖರ್ಗೆ ವಾಗ್ದಾಳಿ

ಬೆಂಗಳೂರು, ನ.10: ಹಾಸನ ಜಿಲ್ಲಾಧಿಕಾರಿ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡಿರುವ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ವಿರುದ್ಧ ಸಚಿವ ಪ್ರಿಯಾಂಕ್ ಖರ್ಗೆ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಅಪರಿಚಿತ ವ್ಯಕ್ತಿಯೊಬ್ಬರು ನೀಡಿದ ದಾಖಲೆಗಳನ್ನು ಆಧರಿಸಿ ಪತ್ರಿಕಾಗೋಷ್ಠಿ ನಡೆಸುವ ಮೊದಲು ಅವುಗಳ ಸತ್ಯಾಸತ್ಯತೆಯನ್ನು ಪರಿಶೀಲಿಸಬೇಕಿತ್ತು ಎಂದಿದ್ದಾರೆ.

ಕುಮಾರಸ್ವಾಮಿ ಅವರೇ ದಾಖಲೆಗಳನ್ನು ನೀಡಿದ ವ್ಯಕ್ತಿಯ ವಿಶ್ವಾಸಾರ್ಹತೆ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದಾರೆ. ಹಾಗಿದ್ದರೂ ಆ ದಾಖಲೆಗಳನ್ನು ಪರಿಶೀಲಿಸದೆ ಪತ್ರಿಕಾಗೋಷ್ಠಿ ನಡೆಸಿದ್ದು ಏಕೆ. ದಾಖಲೆಗಳು ನಿಜವೇ ಅಥವಾ ಸುಳ್ಳೇ ಎಂಬುದನ್ನು ಖಚಿತಪಡಿಸಿ ಕೊಳ್ಳುವ ಜವಾಬ್ದಾರಿ ಅವರಿಗಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದೂರು ದಾಖಲಾಗಿದ್ದು, ಎಫ್‌ಐಆರ್ ಕೂಡ ದಾಖಲಾಗಿದೆ. ಮೊಬೈಲ್ ಫೋನ್‌ಗಳು ಮತ್ತು ಅವುಗಳಲ್ಲಿರುವ ಚಾಟ್‌ಗಳನ್ನು ಪರಿಶೀಲಿಸಿದ ಬಳಿಕ ಹಲವು ವಿಚಾರಗಳು ಬಹಿರಂಗವಾಗಬಹುದು. ದಾಖಲೆಗಳು ಎಲ್ಲಿಂದ



ಬಂದವು, ಅವುಗಳ ಮೂಲ ಯಾವುದು ಮತ್ತು ಅವುಗಳ ಸತ್ಯಾಸತ್ಯತೆ ಏನು ಎಂಬುದನ್ನು ತನಿಖೆಯಿಂದ ತಿಳಿದುಕೊಳ್ಳಬೇಕಿದೆ ಎಂದು ಖರ್ಗೆ ಹೇಳಿದ್ದಾರೆ.

ಚಾಕು ಕಳಿಸಿದ್ದನ್ನು ಸಮರ್ಥಿಸುವುದಿಲ್ಲ

ಬಿಜೆಪಿ ನಾಯಕ ಛಲವಾದಿ ನಾರಾಯಣ ಸ್ವಾಮಿ ಅವರಿಗೆ ಚಾಕು ಪಾರ್ಸಲ್ ಕಳುಹಿಸಿರುವ ಪ್ರಕರಣದ ಬಗ್ಗೆ ಪ್ರತಿಕ್ರಿಯಿಸಿದ ಪ್ರಿಯಾಂಕ್ ಖರ್ಗೆ, ಕಾಂಗ್ರೆಸ್ ನಾಯಕರ ವಿರುದ್ಧದ ಹೇಳಿಕೆಗೆ ಪ್ರತಿಕ್ರಿಯೆಯಾಗಿ ಈ ಘಟನೆ ನಡೆದಿದೆ. ಆದರೆ, ಯುವ ಕಾಂಗ್ರೆಸ್ ಕಾರ್ಯಕರ್ತರು ಚಾಕುಗಳನ್ನು ಕಳುಹಿಸಿರುವುದನ್ನು ಸಮರ್ಥಿಸುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಇಂತಹ ಕೆಲಸ ಮಾಡಬಾರದಿತ್ತು. ಅದೇ ರೀತಿ ನಾರಾಯಣಸ್ವಾಮಿ ಅವರೂ ಇಂತಹ ಹೇಳಿಕೆ ನೀಡಬಾರದಿತ್ತು. ತಮ್ಮ ಹೇಳಿಕೆಗೆ ಅವರು ಕ್ಷಮೆ ಕೇಳಿದ್ದಾರೆಯೇ ಎಂದು ಖರ್ಗೆ ಪ್ರಶ್ನಿಸಿದರು. ಈ ಘಟನೆಯನ್ನು ಮುಂದಿಟ್ಟು ಕೊಂಡು ಕಾಂಗ್ರೆಸ್ ಪಕ್ಷವನ್ನು 'ಚಾಕು ಸಂಸ್ಕೃತಿ'ಯ ಪಕ್ಷ ಎಂದು ಕರೆಯುವುದನ್ನು ಅವರು ವಿರೋಧಿಸಿದರು.

ಇಲಾಖೆ ಬಗ್ಗೆ ಗೃಹ ಸಚಿವರಿಗೆ ಜ್ಞಾನ, ಜವಾಬ್ದಾರಿ ಇಲ್ಲ: ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಟೀಕೆ

ಬೆಂಗಳೂರು, ನ.10: ಈಗ ಹಳ್ಳಿ ಜನರೇ ಪ್ರಿಯಾಂಕ್ ಖರ್ಗೆ ಗೃಹಮಂತ್ರಿ ಅಲ್ಲ, ಗುಗ್ಗು ಮಂತ್ರಿ ಅಂತ ಹೇಳುತ್ತಿದ್ದಾರೆ ಎಂದು ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ವ್ಯಂಗ್ಯವಾಡಿದ್ದಾರೆ.

ಮೈಸೂರಿನಲ್ಲಿ ಕೇರಳ ಪೊಲೀಸರಿಂದ ಡ್ರಗ್ಸ್ ದಂಧೆಯ ಅಡ್ಡೆ ಮೇಲೆ ದಾಳಿ ವಿಚಾರವಾಗಿ ಮಾಧ್ಯಮಗಳ ಜತೆ ಮಾತನಾಡಿದ ಅವರು, ಗೃಹ ಸಚಿವರಿಗೆ ಜವಾಬ್ದಾರಿ ಹಾಗೂ ತಮ್ಮ ಇಲಾಖೆ ಬಗ್ಗೆ ಜ್ಞಾನವಿಲ್ಲ. ಕೇರಳದ ಪೊಲೀಸರು ರಾಜ್ಯಕ್ಕೆ ಬಂದು ಡ್ರಗ್ಸ್‌ಜಾಲ ಹಿಡಿದಿದ್ದಾರೆ. ಸ್ಥಳೀಯ ಪೊಲೀಸರಿಗೆ, ಗೃಹ ಸಚಿವರಿಗೆ ಗೊತ್ತೇ ಇಲ್ಲ. ಹಿಂದೆ ಮಹಾರಾಷ್ಟ್ರ, ಗುಜರಾತ್



ಪೊಲೀಸರು ಬಂದು ಡ್ರಗ್ಸ್ ದಂಧೆ ಪತ್ತೆ ಮಾಡಿದರೂ ಇವರಿಗೆ ಗೊತ್ತಾಗಲೇ ಇಲ್ಲ. ಅಂದಮೇಲೆ ಪ್ರಿಯಾಂಕ್ ಖರ್ಗೆ ಅವರನ್ನು ಗುಗ್ಗು ಮಂತ್ರಿ ಅಂತ ಜನ ಹೇಳೋದು ಸರಿ ಇದೆ ಎನಿಸುತ್ತದೆ. ಆರೆಸ್ಸೆಸ್ ಉಸ್ತುವಾರಿ ಮಾಡೋದು ಜಾಸ್ತಿಯಾಗಿ ಇಲಾಖೆ ಕಡೆ ಗಮನ ಕೊಡ್ತಿಲ್ಲ. ಆರೆಸ್ಸೆಸ್ ಉಸ್ತುವಾರಿ ಆಗಬೇಡಿ ಗೃಹ ಸಚಿವರೇ ಎಂದು ಟೀಕಿಸಿದರು.

ಬರ ಪರಿಹಾರಕ್ಕೆ ಅಪಹಾಸ್ಯ

ಪರಿಹಾರ ವಿಚಾರದಲ್ಲಿ ಸಣ್ಣ ರೈತರಿಗೆ ತಾರತಮ್ಯ ಆರೋಪ ವಿಚಾರವಾಗಿ ಮಾತನಾಡಿ, ಸರ್ಕಾರ ಈ ರೀತಿಯಾಗಿ ಕಳಪೆ ಪರಿಹಾರ ಕೊಡುತ್ತೆ ಅಂತ ನಾವು ನಿರೀಕ್ಷೆ ಮಾಡಿರಲಿಲ್ಲ. ಗುಂಟೆಗೆ 85 ರೂ. ಅಂದರೆ ಎಕರೆಗೆ 3400 ರೂ. ಆಗುತ್ತದೆ. ಆದರೆ ಸರ್ಕಾರ ಎಕರೆಗೆ 2500 ರೂ. ನಿಗದಿ ಮಾಡಿದೆ. ಸಣ್ಣ ಜಮೀನಿರೋ ರೈತರಿಗೆ 400–500 ಬರುತ್ತದೆ. ರೈತರಿಗೆ ಅಪಹಾಸ್ಯ ಮಾಡ್ತಿದೆ ಸರ್ಕಾರ. ರೈತರನ್ನು ಸರ್ಕಾರ ಭಿಕ್ಷುಕರು ಅನ್ಕೊಂಡಿದೆಯಾ, ರೈತರಿಗೆ ಸ್ವಾಭಿಮಾನ ಇಲ್ವಾ ಎಂದು ಪ್ರಶ್ನಿಸಿದರು. ಗೃಹಲಕ್ಷ್ಮಿ ಗ್ಯಾರಂಟಿ ವಿಚಾರದಲ್ಲೂ ಸರ್ಕಾರ ಮಹಿಳೆಯರಿಗೆ ಅಪಮಾನ ಮಾಡ್ತಿದೆ. ಗ್ಯಾರಂಟಿಗಳ ವಿಚಾರದಲ್ಲಿ ಸರ್ಕಾರ ನಿರ್ಲಕ್ಷ್ಯ. ಎಲ್ಲರಿಗೂ ಉಚಿತ ಅಂತ ಹೇಳಿ ದುಂಡಾವರ್ತಿ ಮಾಡ್ತಿದೆ. ಚುನಾವಣೆ ಗೆಲ್ಲಬೇಕಿತ್ತು, ಅಮ್ಮಾ, ಅಪ್ಪಾ ಅಂತ ಅಧಿಕಾರಕ್ಕೆ ಬಂದ್ರು. ಚುನಾವಣೆ ಮುಗಿದ ಮೇಲೆ ಏನ್ ಮಾಡ್ಕೋತೀರ ಮಾಡ್ಕೊಳ್ಳಿ ಅನ್ನೋ ಧೋರಣೆ. ಇದು ದಗಾಕೋರ ಸರ್ಕಾರ. ಇದೇ ರೀತಿ ಈಗ ರೈತರನ್ನೂ ಸರ್ಕಾರ ಅಪಮಾನ ಮಾಡ್ತಿದೆ. ರೈತರ ವಿಚಾರದಲ್ಲಿ ಸರ್ಕಾರದ ನಡೆ ಖಂಡನೀಯ ಎಂದು ಛಲವಾದಿ ನಾರಾಯಣಸ್ವಾಮಿ ಕಿಡಿಕಾರಿದರು.

ನನ್ನ ಮುಂದಿನ ರಾಜಕೀಯ ನಡೆ ಎಚ್‌ಡಿಕೆ ನಿರ್ಧಾರದ ಮೇಲಿದೆ, ಈಗಲೂ ಜೆಡಿಎಸ್‌ನಲ್ಲೇ ಇದ್ದೇನೆ: ಜಿ.ಟಿ. ದೇವೇಗೌಡ

ಹಾಸನ, ನ.10: ಈ ಹಿಂದೆ ತಮಗೆ ಬಿಜೆಪಿಯಿಂದ ಉಪಮುಖ್ಯಮಂತ್ರಿ (ಡಿಸಿಎಂ) ಸ್ಥಾನದ ಆಫರ್ ಬಂದಿತ್ತು. ಮತ್ತು ಕಾಂಗ್ರೆಸ್‌ನಿಂದಲೂ ಮಂತ್ರಿ ಸ್ಥಾನದ ಅವಕಾಶವಿತ್ತು. ಆದರೆ, ಜೆಡಿಎಸ್ ಪಕ್ಷ ಬಿಡಲಿಲ್ಲ. ಈಗಲೂ ಜೆಡಿಎಸ್‌ನಲ್ಲೇ ಇದ್ದೇನೆ, ಅದೇ ಪಕ್ಷದ ಚಿಹ್ನೆಯಿಂದ ಗೆದ್ದು ಬಂದಿದ್ದೇನೆ. ಕರೆದರೆ ಹೋಗಲು ಸಿದ್ಧ ಎಂದು ಶಾಸಕ ಹಾಗೂ ಮಾಜಿ ಸಚಿವ ಜಿ.ಟಿ. ದೇವೇಗೌಡ ಹೇಳಿದ್ದಾರೆ. ಹಾಸನಾಂಬೆ ದೇವಾಲಯಕ್ಕೆ ಭೇಟಿನೀಡಿ ದರ್ಶನ ಪಡೆದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಈಗಲೂ ಜೆಡಿಎಸ್‌ನಲ್ಲೇ ಇದ್ದೇನೆ. ಆದರೆ ಪಕ್ಷದ ಕಡೆಯಿಂದ ಆಹ್ವಾನ ಅಥವಾ ಯಾವುದೇ ಮಾತುಕತೆ ಇಲ್ಲದಿರುವುದರಿಂದ ಸಂಪೂರ್ಣವಾಗಿ ಚಾಮುಂಡೇಶ್ವರಿ ಕ್ಷೇತ್ರದ ಜನರ ಸೇವೆ ಮತ್ತು ಕ್ಷೇತ್ರದ ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡಿದ್ದೇನೆ. ತಾವು ಪಕ್ಷದಲ್ಲಿ ಮುಂದುವರಿಯುವುದು ಹಾಗೂ ಮುಂದಿನ ರಾಜಕೀಯ ನಡೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ನಿರ್ಧಾರದ ಮೇಲೆ ನಿಂತಿದೆ ಎಂದಿದ್ದಾರೆ.

ಪಕ್ಷದಲ್ಲಿ ಸದ್ಯ ಕಡೆಗಣನೆಗೆ ಒಳಗಾಗಿದ್ದರೂ, ರಾಜ್ಯದಲ್ಲಿ ಯಾರೇ ಮುಖ್ಯಮಂತ್ರಿ ಇರಲಿ, ಅವರ ವಿಶ್ವಾಸ ಪಡೆದು ಕ್ಷೇತ್ರದ ಅಭಿವೃದ್ಧಿ ಮಾಡುವುದಷ್ಟೇ ತಮ್ಮ ಸದ್ಯದ ಪ್ರಮುಖ ಗುರಿ ಎಂದು ಹೇಳಿದ್ದಾರೆ.

ಇಡೀ ದೇಶದ ಕ್ಯಾನ್ಸರ್ ರೋಗಿಗಳಿಗೆ ತಲುಪುತ್ತಿದೆ ಕರ್ನಾಟಕದ ವರದಿಯ ಫಲ

ಕ್ಯಾನ್ಸರ್ ಔಷಧಗಳಿಗೆ ಅಧಿಕ ಬೆಲೆ ಕೇಳಿದರೆ ದೂರು ನೀಡಿ: ಸಚಿವ ಯು.ಟಿ. ಖಾದರ್ ಮನವಿ

ಬೆಂಗಳೂರು, ನ.10: ರಾಜ್ಯದಾದ್ಯಂತ ಕ್ಯಾನ್ಸರ್ ಔಷಧಗಳಿಗೆ ಅಧಿಕ ಹಣ ಕೇಳಿದರೆ ಆರೋಗ್ಯ ಇಲಾಖೆಗೆ ದೂರು ನೀಡಿ ಎಂದು ಸಚಿವ ಯು.ಟಿ. ಖಾದರ್ ಜನತೆಗೆ ಮನವಿ ಮಾಡಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಈ ಬಗ್ಗೆ ಮಾಹಿತಿ ಹಂಚಿಕೊಂಡಿರುವ ಅವರು, ಔಷಧಿಗೆ ಅಧಿಕ ಹಣಕ್ಕೆ ಬೇಡಿಕೆ ಅಥವಾ ಔಷಧಿ ಕೊಡಲು ನಿರಾಕರಿಸಿದರೆ, ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯ ಕ್ಯೂಆರ್ ಕೋಡ್ ಮೂಲಕ ದೂರು ನೀಡಿ ಅಥವಾ ಎನ್‌ಪಿಪಿಎ ಸಹಾಯವಾಣಿ 1800–111–255ಗೆ ಕರೆ ಮಾಡುವಂತೆ ತಿಳಿಸಿದ್ದಾರೆ.

ಕ್ಯಾನ್ಸರ್ ಔಷಧಿಗಳ ಹೆಸರಿನಲ್ಲಿ ರೋಗಿಗಳ ಸುಲಿಗೆ ನಡೆಯುತ್ತಿದೆ ಎಂಬ ದೂರಿನ ಹಿನ್ನೆಲೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ ತನಿಖೆ ನಡೆಸಿ ವರದಿ ನೀಡಿತು. ಆ ವರದಿಯ ಫಲ ಕರ್ನಾಟಕಕ್ಕೆ ಮಾತ್ರವಲ್ಲ, ಇಡೀ ದೇಶದ ಕ್ಯಾನ್ಸರ್ ರೋಗಿಗಳಿಗೆ ತಲುಪುತ್ತಿದೆ ಎಂದಿದ್ದಾರೆ.

ತನಿಖೆಯಲ್ಲಿ 253 ಕ್ಯಾನ್ಸರ್ ಔಷಧಿಗಳ ಖರೀದಿ ವೆಚ್ಚ ಮತ್ತು ಎಂಆರ್‌ಪಿ ನಡುವೆ ಭಾರಿ ಅಂತರ ಪತ್ತೆಯಾಯಿತು.



ಮುಖ್ಯಮಂತ್ರಿಗಳ ನಿರ್ದೇಶನದಂತೆ, ಸೆ.23ರಂದು ಕೇಂದ್ರ ಆರೋಗ್ಯ ಸಚಿವರು ಹಾಗೂ ಎನ್‌ಪಿಪಿಎಗೆ ಪತ್ರ ಬರೆದು, ಔಷಧಿಗಳ ಬೆಲೆಯ ಅಂತರ ವರದಿಯನ್ನು ಸಲ್ಲಿಸಿದ್ದೆವು. ಇದೀಗ ಎನ್‌ಪಿಪಿಎ 137 ಕ್ಯಾನ್ಸರ್ ಔಷಧಿಗಳ ಸುಮಾರು 1,366 ವಿವಿಧ ಔಷಧ ಉತ್ಪನ್ನಗಳ ಬೆಲೆಯನ್ನು ಪರಿಷ್ಕರಿಸಿದೆ ಎಂದು ಯು.ಟಿ. ಖಾದರ್ ತಿಳಿಸಿದ್ದಾರೆ.

42,000 ಇದ್ದ ಬೆವಾಸಿಜುಮಾಬ್ 400 ಎಂಜಿ ಇಂಜೆಕ್ಷನ್ ಈಗ 13,136ಕ್ಕೆ ಸಿಗಲಿದೆ. ಪಾಲ್ಬೊಸಿಕ್ಲಿಬ್ ಒಂದು ಸೈಕಲ್ ಬೆಲೆ 9,787ರಿಂದ 3,147ಕ್ಕೆ ಇಳಿದಿದೆ. ನವೆಂಬರ್ 9ರಿಂದಲೇ ಪರಿಷ್ಕೃತ ದರಗಳು ಜಾರಿಗೆ ಬಂದಿದೆ. ಪ್ರತಿಯೊಬ್ಬ ರೋಗಿಯ ಬಿಲ್‌ನಲ್ಲೂ ಪರಿಷ್ಕೃತ ದರಗಳು ಕಾಣಬೇಕು. ರಾಜ್ಯದ ಎಲ್ಲಾ ಔಷಧ ತಯಾರಕರು, ವಿತರಕರು, ಔಷಧಾಲಯಗಳು, ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಂಗಳು ಇದನ್ನು ಪಾಲಿಸಬೇಕೆಂದು ಆರೋಗ್ಯ ಇಲಾಖೆ ಅಡಿಯಲ್ಲಿರುವ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ ಆದೇಶ ನೀಡಿದೆ ಎಂದು ಯು.ಟಿ. ಖಾದರ್ ತಿಳಿಸಿದ್ದಾರೆ.

ಆದೇಶ ಪಾಲನೆ ಬಗ್ಗೆಯೂ ತಪಾಸಣೆ

ಆದೇಶ ಸರಿಯಾಗಿ ಪಾಲನೆ ಆಗುತ್ತಿದೆಯೇ ಎಂದು ಔಷಧ ನಿಯಂತ್ರಣ ಇಲಾಖೆ ರಾಜ್ಯಾದ್ಯಂತ ತಪಾಸಣೆ ನಡೆಸಲಿದೆ. ನಿಯಮ ಮೀರಿದವರ ವಿರುದ್ಧ ಕ್ರಮ ಜರುಗಿಸಲಾಗುವುದು. ರೋಗಿಗಳು ಮತ್ತು ಅವರ ಕುಟುಂಬದವರು ಔಷಧಿ ಖರೀದಿಸುವಾಗ ಪ್ಯಾಕ್ ಮೇಲಿನ ಹೊಸ ಬೆಲೆ ನೋಡಿ, ಬಿಲ್ ಮತ್ತು ಪ್ರಿಸ್ಕ್ರಿಪ್ಷನ್ ಇಟ್ಟುಕೊಳ್ಳಿ. "ಫಾರ್ಮಾ ಸಹಿ ದಾಮ್" ಆಪ್ ಅಥವಾ ಎನ್‌ಪಿಪಿಎ ವೆಬ್‌ಸೈಟ್‌ನಲ್ಲೂ ಬೆಲೆ ಪರಿಶೀಲಿಸಬಹುದು ಎಂದು ಖಾದರ್ ವಿವರಿಸಿದ್ದಾರೆ.

35 ತಹಸೀಲ್ದಾರ್‌ಗಳ ವರ್ಗಾವಣೆ: ರಾಜ್ಯ ಸರ್ಕಾರದ ಆದೇಶ

ಬೆಂಗಳೂರು, ನ.10: ಕರ್ನಾಟಕ ಸರ್ಕಾರ ಕಂದಾಯ ಇಲಾಖೆಯು ರಾಜ್ಯದ ವಿವಿಧ ತಾಲೂಕುಗಳ 35 ತಹಸೀಲ್ದಾರ್‌ಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ವಿವಿಧ ಸ್ಥಳಗಳಿಗೆ ವರ್ಗಾವಣೆ ಮಾಡಿದೆ. ಹಲವರಿಗೆ ಹೊಸ ಸ್ಥಳನಿಯುಕ್ತಿಗೊಳಿಸಿ ಅಧಿಸೂಚನೆ ಹೊರಡಿಸಿದೆ. ವರ್ಗಾವಣೆಗೊಂಡಿರುವ ಅಧಿಕಾರಿಗಳು ತಕ್ಷಣವೇ ನಿಯೋಜಿತ ಸ್ಥಳಗಳಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡು, ಚಾರ್ಜ್ ಟ್ರಾನ್ಸ್‌ಫರ್ ಸರ್ಟಿಫಿಕೇಟ್ ವರದಿಯನ್ನು ಸರ್ಕಾರಕ್ಕೆ ಕಳುಹಿಸಿಕೊಡುವಂತೆ ಕಂದಾಯ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿಗಳು ಸೂಚನೆ ನೀಡಿದ್ದಾರೆ. ಈ ಕೆಳಕಂಡಂತೆ ಅಧಿಕಾರಿಗಳ ಹೆಸರಿನ ಮುಂದೆ ಇರುವ ಸ್ಥಳಕ್ಕೆ ನಿಯೋಜಿಸಲಾಗಿದೆ.

ವರ್ಗಾವಣೆ ವಿವರ

ಟಿ.ಆರ್. ನಟರಾಜ್– ವಿಶೇಷ ತಹಶೀಲ್ದಾರ್, ವಿಶೇಷ ಭೂಸ್ವಾಧೀನಾಧಿಕಾರಿಗಳ ಕಚೇರಿ, ಎತ್ತಿನಹೊಳೆ ಯೋಜನೆ, ದೊಡ್ಡಬಳ್ಳಾಪುರ

ರಾಮಚಂದ್ರಪ್ಪ – ತಹಶೀಲ್ದಾರ್ ಗ್ರೇಡ್–1, ಭಟ್ಕಳ ತಾಲೂಕು, ಉತ್ತರ ಕನ್ನಡ ಜಿಲ್ಲೆ

ಉಮಾಕಾಂತ ಹಳ್ಳಿ – ತಹಶೀಲ್ದಾರ್ ಗ್ರೇಡ್–1, ಕಲಬುರಗಿ ತಾಲೂಕು

ಸವಿತಾ ಹಂಪಿಹೊಳಿ – ತಹಶೀಲ್ದಾರ್ ಗ್ರೇಡ್–2, ಪ್ರಾದೇಶಿಕ ಆಯುಕ್ತರ ಕಚೇರಿ, ಬೆಳಗಾವಿ ವಿಭಾಗದ ಹುದ್ದೆಯಲ್ಲಿ ಮುಂದುವರಿಕೆ

ಎಂ.ಆಶಾ– ತಹಶೀಲ್ದಾರ್ ಗ್ರೇಡ್–2, ಗುಡಿಬಂಡೆ ತಾಲೂಕು, ಚಿಕ್ಕಬಳ್ಳಾಪುರ ಜಿಲ್ಲೆ

ಶರಣಬಸವ ಆರ್. ಹೊಸಮನಿ – ತಹಶೀಲ್ದಾರ್ ಗ್ರೇಡ್–2, ಹುಮನಾಬಾದ್ ತಾಲೂಕು

ರವಿರಾಜ ದೀಕ್ಷಿತ್ – ತಹಶೀಲ್ದಾರ್ ಗ್ರೇಡ್–1, ಅಂಕೋಲಾ ತಾಲೂಕು, ಉತ್ತರ ಕನ್ನಡ ಜಿಲ್ಲೆ

ಡಿ.ಟಿ. ವಾಲ್ಮೀಕಿ– ತಹಶೀಲ್ದಾರ್ ಗ್ರೇಡ್–2, ಗದಗ ತಾಲೂಕು ಕಚೇರಿ, ಗದಗ ಜಿಲ್ಲೆ

ಸುರೇಶ ತೊನಸಳ್ಳಿಕರ್ – ವಿಶೇಷ ತಹಶೀಲ್ದಾರ್, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಕಲಬುರಗಿ

ಅರುಣ್ ಎಚ್. ದೇಸಾಯಿ – ತಹಶೀಲ್ದಾರ್ ಗ್ರೇಡ್–1, ಹೊಸಪೇಟೆ ತಾಲೂಕು, ವಿಜಯನಗರ ಜಿಲ್ಲೆ

ಅರುಂಧತಿ – ತಹಶೀಲ್ದಾರ್ ಗ್ರೇಡ್–2, ಮುಳಬಾಗಿಲು ತಾಲೂಕು, ಕೋಲಾರ ಜಿಲ್ಲೆ

ಎಸ್.ಬಿ. ಕೂಡಲಗಿ – ತಹಶೀಲ್ದಾರ್ ಗ್ರೇಡ್–1, ಕಡಬ ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ

ರುಕಿಯಾ ಬೇಗಂ – ತಹಶೀಲ್ದಾರ್ ಗ್ರೇಡ್–1, ಎಚ್.ಡಿ. ಕೋಟೆ ತಾಲೂಕು, ಮೈಸೂರು ಜಿಲ್ಲೆ

ಶೋಭಾ ಎನ್.– ತಹಶೀಲ್ದಾರ್ ಗ್ರೇಡ್–2, ಚಿಂತಾಮಣಿ ತಾಲೂಕು ಕಚೇರಿ, ಚಿಕ್ಕಬಳ್ಳಾಪುರ ಜಿಲ್ಲೆ

ಪ್ರಶಾಂತ ಎಸ್. ಚನಗೊಂಡ – ತಹಶೀಲ್ದಾರ್ ಗ್ರೇಡ್–1, ತಿಕೋಟಾ ತಾಲೂಕು, ವಿಜಯಪುರ ಜಿಲ್ಲೆ

ರಾಜು ಮೂವರಕರ್ – ತಹಶೀಲ್ದಾರ್ ಗ್ರೇಡ್–1, ಶಿಗ್ಗಾಂವ ತಾಲೂಕು, ಹಾವೇರಿ ಜಿಲ್ಲೆ

ಎಸ್.ಎಫ್. ಬೊಮ್ಮಣ್ಣವರ – ತಹಶೀಲ್ದಾರ್ ಗ್ರೇಡ್–2, ಬಾಗಲಕೋಟೆ ತಾಲೂಕು ಕಚೇರಿ, ಬಾಗಲಕೋಟೆ ಜಿಲ್ಲೆ

ಪ್ರಕಾಶ ಎಂ.ಕಲ್ಲೊಳ್ಳಿ – ತಹಶೀಲ್ದಾರ್ ಗ್ರೇಡ್–1, ಜೋಯಿಡಾ ತಾಲೂಕು, ಉತ್ತರ ಕನ್ನಡ ಜಿಲ್ಲೆ

ನಾಗನಾಥ ತರಗೆ – ತಹಶೀಲ್ದಾರ್ ಗ್ರೇಡ್–1, ಚಿತ್ತಾಪೂರ ತಾಲೂಕು, ಕಲಬುರಗಿ ಜಿಲ್ಲೆ

ರೇಣುಕುಮಾರ್ ವೈ.ಎಂ. – ತಹಶೀಲ್ದಾರ್ ಗ್ರೇಡ್–1, ಅರಕಲಗೂಡು ತಾಲೂಕು, ಹಾಸನ ಜಿಲ್ಲೆ

ಆರ್.ಎಸ್.ವಳಸಂಗ – ತಹಶೀಲ್ದಾರ್ ಗ್ರೇಡ್–2, ತಿಕೋಟಾ ತಾಲೂಕು ಕಚೇರಿ, ವಿಜಯಪುರ ಜಿಲ್ಲೆ

ಸುರೇಶ ರಾಣಪ್ಪ – ತಹಶೀಲ್ದಾರ್ ಗ್ರೇಡ್–1, ದೇವದುರ್ಗ ತಾಲೂಕು, ರಾಯಚೂರು ಜಿಲ್ಲೆ

ಆನಂದ ಆರ್.ಕೊಲ್ಹಾರ – ತಹಶೀಲ್ದಾರ್ ಗ್ರೇಡ್–1, ದೇವರಹಿಪ್ಪರಗಿ ತಾಲೂಕು, ವಿಜಯಪುರ ಜಿಲ್ಲೆ

ಪ್ರಮಾವತಿ ರಾಮಚಂದ್ರ ರಾಠೋಡ್– ತಹಶೀಲ್ದಾರ್ ಗ್ರೇಡ್–1, ಹುಲಸೂರು ತಾಲೂಕು, ಕಲಬುರಗಿ ಜಿಲ್ಲೆ

ಪ್ರಕಾಶ್ ಟಿ.ಎಂ. – ತಹಶೀಲ್ದಾರ್ ಗ್ರೇಡ್–2, ಸುಳ್ಯ ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ

ವೆಂಕನಗೌಡ – ತಹಶೀಲ್ದಾರ್ ಗ್ರೇಡ್–2, ಆಳಂದ ತಾಲೂಕು, ಕಲಬುರಗಿ ಜಿಲ್ಲೆ

ತಿರುಪತಿ– ತಹಶೀಲ್ದಾರ್ ಗ್ರೇಡ್–1, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ

ಪಲ್ಲವಿ ಬೆಳಕೆರೆ – ಉಪ ಪ್ರಾಚಾರ್ಯರು, ಜಿಲ್ಲಾ ತರಬೇತಿ ಸಂಸ್ಥೆ, ಬೀದರ್

ಬಿ. ರಾಜಶೇಖರ – ತಹಶೀಲ್ದಾರ್ ಗ್ರೇಡ್–2, ರಾಯಚೂರು ತಾಲೂಕು ಕಚೇರಿ

ಕಲಾವತಿ ಎಂ. – ತಹಶೀಲ್ದಾರ್ ಗ್ರೇಡ್–2, ಬೆಂಗಳೂರು ದಕ್ಷಿಣ ಉಪವಿಭಾಗಾಧಿಕಾರಿಗಳ ಕಚೇರಿ

ಜಗನ್ನಾಥ್ ಎಸ್.ಕೆ. – ತಹಶೀಲ್ದಾರ್ ಗ್ರೇಡ್–1, ಚಿಕ್ಕನಾಯಕನಹಳ್ಳಿ ತಾಲೂಕು, ತುಮಕೂರು ಜಿಲ್ಲೆ

ಸಂತೋಷ ಹಿರೇಮಠ – ತಹಶೀಲ್ದಾರ್ ಗ್ರೇಡ್–1, ಹುಬ್ಬಳ್ಳಿ ಗ್ರಾಮೀಣ ತಾಲೂಕು, ಧಾರವಾಡ ಜಿಲ್ಲೆ

ಅನೂಪ್ ಸಂಜೋಗ್ ಎಂ.ಆರ್. – ತಹಶೀಲ್ದಾರ್ ಗ್ರೇಡ್–1, ಶಿವಮೊಗ್ಗ ತಾಲೂಕು, ಶಿವಮೊಗ್ಗ ಜಿಲ್ಲೆ

ಮೋಹನ ಕುಮಾರಿ– ತಹಶೀಲ್ದಾರ್ ಗ್ರೇಡ್–1, ಹಾರೋಹಳ್ಳಿ ತಾಲೂಕು, ಬೆಂಗಳೂರು ದಕ್ಷಿಣ

ಪ್ರದೀಪ್ ಆರ್.– ತಹಶೀಲ್ದಾರ್ ಗ್ರೇಡ್–2, ತರೀಕೆರೆ ತಾಲೂಕು, ಚಿಕ್ಕಮಗಳೂರು ಜಿಲ್ಲೆ

ಧರ್ಮಸ್ಥಳ: ಡಾ.ವೀರೇಂದ್ರ ಹೆಗ್ಗಡೆಯವರಿಗೆ ಸಿಐಎಸ್‌ಎಫ್ ವತಿಯಿಂದ ಗೌರವ ಸ್ಮರಣಿಕೆ



ಧರ್ಮಸ್ಥಳ, ನ..10: ಕೇಂದ್ರ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್) ವತಿಯಿಂದ 2026ರ ಫೆಬ್ರವರಿ ತಿಂಗಳಲ್ಲಿ 'ಸುರಕ್ಷಿತ ತಟ್, ಸಮೃದ್ಧ ಭಾರತ್ (ಸುರಕ್ಷಿತ ಕರಾವಳಿ, ಸಮೃದ್ಧ ಭಾರತ) ಎಂಬ ಧ್ಯೇಯವಾಕ್ಯದೊಂದಿಗೆ ಸಿಐಎಸ್‌ಎಫ್ ಸೈಕ್ಲೋಥಾನ್ ಆಯೋಜಿಸಲಾಗಿತ್ತು.

ಕರಾವಳಿ ಭದ್ರತೆ, ರಾಷ್ಟ್ರೀಯ ಏಕತೆ ಹಾಗೂ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಆಯೋಜಿಸಲಾದ ಈ ಸೈಕಲ್ ಜಾಥಾದಲ್ಲಿ ಸಿಐಎಸ್‌ಎಫ್‌ನ 80 ಸೈಕಲ್ ಸವಾರರು ಭಾಗವಹಿಸಿ, ಭಾರತದ ಸಂಪೂರ್ಣ ಪಶ್ಚಿಮ ಕರಾವಳಿಯನ್ನು ಒಳಗೊಂಡಂತೆ ಸಂಚರಿಸಿದ್ದರು.

ಈ ಸೈಕ್ಲೋಥಾನ್ ಅಂಗವಾಗಿ ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರಿಗೆ ಪ್ರೀತಿ, ಗೌರವ ಹಾಗೂ ಮೆಚ್ಚುಗೆಯ ಸಂಕೇತವಾಗಿ ಸಿಐಎಸ್‌ಎಫ್ ವತಿಯಿಂದ ಸ್ಮರಣಿಕೆಯನ್ನು ಸಮರ್ಪಿಸಲಾಯಿತು.

ಮಂಗಳೂರಿನ ನವಮಂಗಳೂರು ಬಂದರು ಪ್ರಾಧಿಕಾರ (ಎನ್‌ಎಂಪಿಎ) ಸಿಐಎಸ್‌ಎಫ್ ಘಟಕದ ಉಪ ಕಮಾಂಡೆಂಟ್ ಆರ್. ಪಿ. ಪಾಠಕ್ ಅವರು ಡಾ. ಡಿ. ವೀರೇಂದ್ರ ಹೆಗ್ಗಡೆಯವರಿಗೆ ಸ್ಮರಣಿಕೆಯನ್ನು ಹಸ್ತಾಂತರಿಸಿದರು.

ದೆಹಲಿಯ ಬ್ಯಾಂಕ್ ಆಫ್ ಬರೋಡಾಗೆ ಬಾಂಬ್ ಬೆದರಿಕೆ

ನವದೆಹಲಿ, ನ.10: ರಾಷ್ಟ್ರ ರಾಜಧಾನಿ ದೆಹಲಿಯ ಸಂಸತ್ ಮಾರ್ಗದಲ್ಲಿರುವ ಬ್ಯಾಂಕ್ ಆಫ್ ಬರೋಡಾ ಶಾಖೆಗೆ ಬಾಂಬ್ ಬೆದರಿಕೆ ಕರೆ ಬಂದಿದ್ದು, ಭದ್ರತಾ ಪಡೆಗಳು ತೀವ್ರ ತಪಾಸಣೆ ನಡೆಸಿವೆ.

ಬೆಳಗ್ಗೆ 11.35ರ ಸುಮಾರಿಗೆ ಬ್ಯಾಂಕ್‌ಗೆ ಬಾಂಬ್ ಬೆದರಿಕೆ ಬಂದಿರುವ ಕುರಿತು ಪೊಲೀಸರಿಗೆ ಹಾಗೂ ಅಗ್ನಿಶಾಮಕ ದಳಕ್ಕೆ ಮಾಹಿತಿ ಲಭಿಸಿದೆ. ತಕ್ಷಣವೇ ಸ್ಥಳಕ್ಕೆ ಧಾವಿಸಿದ ಪೊಲೀಸ್ ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿ ಬ್ಯಾಂಕ್ ಆವರಣದಲ್ಲಿ ಪರಿಶೀಲನೆ ಆರಂಭಿಸಿದ್ದಾರೆ.

ಬ್ಯಾಂಕ್ ಕಟ್ಟಡದ ಒಳಭಾಗ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅನುಮಾನಾಸ್ಪದ ವಸ್ತುಗಳು ಮತ್ತು ಸ್ಫೋಟಕಗಳಿಗಾಗಿ ಶೋಧ ಕಾರ್ಯ ನಡೆಸಲಾಗಿದೆ. ಆದರೆ ಪರಿಶೀಲನೆ ವೇಳೆ ಯಾವುದೇ ಅನುಮಾನಾಸ್ಪದ ವಸ್ತುಗಳು ಪತ್ತೆಯಾಗಿಲ್ಲ ಎಂದು ವರದಿಯಾಗಿದೆ. ಬೆದರಿಕೆ ಕರೆಮಾಡಿದ ವ್ಯಕ್ತಿ ಯಾರು ಮತ್ತು ಯಾವ ಉದ್ದೇಶದಿಂದ ಕರೆಮಾಡಿದ್ದಾನೆ ಎಂಬುದನ್ನು ಪತ್ತೆಹಚ್ಚಲು ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ನ.21: ಧರ್ಮ ಸಮನ್ವಯದ ಹಾರಕೂಡ ಸಂತನಿಗೆ ಜನ್ಮೋತ್ಸವ: ಕೇಂದ್ರ ಸಚಿವ ವಿ.ಸೋಮಣ್ಣ ಉದ್ಘಾಟನೆ

64ನೇ ಹುಟ್ಟುಹಬ್ಬ ಸಂಭ್ರಮ 71ನೇ ಕನ್ನಡ ರಾಜ್ಯೋತ್ಸವ ಬೀದರ್‌ನಿಂದ ವಿಶೇಷ ರೈಲು

ಕಲಬುರಗಿ, ನ.10: ಹಾರಕೂಡ ಶ್ರೀ ಚನ್ನಬಸವೇಶ್ವರ ಸಂಸ್ಥಾನ ಹಿರೇಮಠದ ಪೀಠಾಧಿಪತಿ ಧರ್ಮ ಸಮನ್ವಯದ ಸಂತ ಡಾ. ಚನ್ನವೀರ ಶಿವಾಚಾರ್ಯ ಸ್ವಾಮೀಜಿಯವರ 64ನೇ ಜನ್ಮೋತ್ಸವ ಹಾಗೂ 71ನೇ ರಾಜ್ಯೋತ್ಸವ ಕಾರ್ಯಕ್ರಮವನ್ನು ನವೆಂಬರ್ 21ರಂದು ದೆಹಲಿಯಲ್ಲಿ ರೈಲ್ವೆ ಹಾಗೂ ಜಲ ಶಕ್ತಿ ಖಾತೆಯ ರಾಜ್ಯ ಸಚಿವ ವಿ. ಸೋಮಣ್ಣ ಉದ್ಘಾಟಿಸಲಿದ್ದಾರೆ.

ನವೆಂಬರ್ 21ರಂದು ದೆಹಲಿಯ ಜನಪಥ ರಸ್ತೆಯಲ್ಲಿರುವ ಅಂಬೇಡ್ಕರ್ ಇಂಟರ್ ನ್ಯಾಷನಲ್ ಸೆಂಟರ್ ನಲ್ಲಿ ಬೆಳಿಗ್ಗೆ 11 ಗಂಟೆಗೆ ನವದೆಹಲಿಯ ಸಂತ ಸೇವಾಲಾಲ್ ಮಹಾರಾಜ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಏರ್ಪಡಿಸಲಾದ 64ನೇ ಜನ್ಮೋತ್ಸವ ಹಾಗೂ 71 ನೇ ರಾಜ್ಯೋತ್ಸವ ಕಾರ್ಯಕ್ರಮವನ್ನು ಕೇಂದ್ರ ಸಚಿವರು ಉದ್ಘಾಟಿಸಲಿದ್ದು ಬೀದರ್ ಸಂಸದ ಸಾಗರ್ ಖಂಡ್ರೆ, ಶಾಸಕರಾದ ಅವಿನಾಶ್ ಜಾಧವ್, ಶರಣು ಸಲಗರ್, ಮಾಜಿ ಸಂಸದ ಭಗವಂತ ಖೂಬಾ, ಹಿರಿಯ ಪತ್ರಕರ್ತ ಎಂ.ಬಿ ಮರಮ್‌ಕಲ್, ಉದ್ಯಮಿ ಧನರಾಜ ತಾಳಂಪಳ್ಳಿ, ಆಲ್ ಇಂಡಿಯಾ ಬಂಜಾರ ಸೇವಾ ಸಂಘದ ಶಂಕರ್ ಪವಾರ್ ಭಾಗವಹಿಸಲಿದ್ದಾರೆ ಎಂದು ಮಾಜಿ ಸಂಸದ ಹಾಗೂ ಸಮಾರಂಭದ ಅಧ್ಯಕ್ಷ ಡಾ. ಉಮೇಶ್ ಜಾಧವ್ ಸುದ್ದಿಗಾರರಿಗೆ



ತಿಳಿಸಿದ್ದಾರೆ.

ಹಾರಕೂಡ ಶ್ರೀಗಳ ಭಕ್ತರು ಮತ್ತು ಅಭಿಮಾನಿಗಳಿಗೆ ದಿಲ್ಲಿಗೆ ತೆರಳಲು ಅನುಕೂಲ ವಾಗುವಂತೆ ನವಂಬರ್ 19 ರಂದು ರಾತ್ರಿ 10 ಗಂಟೆಗೆ ಬೀದರ್ ರೈಲ್ವೆ ನಿಲ್ದಾಣದಿಂದ ಹಜರತ್ ನಿಜಾಮುದ್ದೀನ್ ಜಂಕ್ಷನ್ (ದೆಹಲಿ) ತನಕ ವಿಶೇಷ ರೈಲು ಸೌಲಭ್ಯ ನೀಡಲು ಕೇಂದ್ರ ರೈಲ್ವೆ ಇಲಾಖೆ ಒಪ್ಪಿಗೆ ನೀಡಿ ಟಿಕೆಟ್ ಕಾಯ್ದಿರಿಸುವಿಕೆ ಆರಂಭಗೊಂಡಿದೆ. ನವಂಬರ್ 22ರಂದು ವಿಶೇಷ ರೈಲು ಬೆಳಿಗ್ಗೆ 6 ಗಂಟೆಗೆ ದಿಲ್ಲಿಯಿಂದ ಹೊರಟು ವಾಪಸ್ ಬೀದರ್ ಗೆ ಆಗಮಿಸಲಿದೆ. ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ದೆಹಲಿಯಲ್ಲಿ ಕಾಶಿನಾಥ್ ಬಿರಾದಾರ್ (ಮೊಬೈಲ್ 8588823456) ಅವರನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದು ಎಂದು ಡಾ. ಜಾಧವ್ ತಿಳಿಸಿದ್ದಾರೆ.

ಬೀದರ್-ಹಜರತ್ ನಿಜಾಮುದ್ದೀನ್ (ದೆಹಲಿ) ನಡುವೆ ವಿಶೇಷ ರೈಲು ವೇಳಾಪಟ್ಟಿ

ಬೀದರ್‌ನಿಂದ ದೆಹಲಿಯ ಹಜರತ್ ನಿಜಾಮುದ್ದೀನ್ (ರೈಲಿನಲ್ಲಿ ಸಂಖ್ಯೆ 07083) ರೈಲು ವಿಶೇಷ ರೈಲುಗಾಡಿ ನವೆಂಬರ್ 19 ರಂದು ರಾತ್ರಿ 10 ಗಂಟೆಗೆ ಬೀದರ್‌ನಿಂದ ಹೊರಟು ಜಹಿರಾಬಾದ್ ವಿಕಾರಾಬಾದ್, ಸಿಕಂದರಬಾದ್ ರಾಮಗುಂಡಮ್, ನಾಗ್ಪುರ ಜಂಕ್ಷನ್, ಇಟಾರ್ಸಿ, ಭೋಪಾಲ್, ಆಗ್ರಾ, ಮಥುರಾ ಮೂಲಕ ನವೆಂಬರ್ 20ರಂದು ರಾತ್ರಿ 8:40ಕ್ಕೆ ದೆಹಲಿಗೆ ತಲುಪಲಿದೆ.

ನ. 22ರಂದು ದೆಹಲಿಯ ಹಜರತ್ ನಿಜಾಮುದ್ದೀನ್ ರೈಲು ನಿಲ್ದಾಣದಿಂದ (ರೈಲು ಸಂಖ್ಯೆ07084) ಮುಂಜಾನೆ 8.40ಕ್ಕೆ ಹೊರಟು ನ.24ರಂದು ಮುಂಜಾನೆ 4 ಗಂಟೆಗೆ ಬೀದರ್ ರೈಲು ನಿಲ್ದಾಣ ತಲುಪಲಿದೆ. ಈಗಲೇ ಟಿಕೆಟ್ ಕಾಯ್ದಿರಿಸುವಿಕೆ ಆರಂಭಗೊಂಡಿದ್ದು ಟಿಕೆಟ್ ಕಾಯ್ದಿರಿಸುವಿಕೆಯ ಬಗ್ಗೆ ಹೆಚ್ಚಿನ ಮಾಹಿತಿಗೆ ಕುಪೇಂದ್ರ ಬಿರಾದಾರ್ (ಮೊಬೈಲ್ 9148886249) ಅವರನ್ನು ಸಂಪರ್ಕಿಸಬಹುದು. ಶ್ರೀಗಳ ಜನ್ಮ ಜಯಂತಿ ಮತ್ತು ರಾಜ್ಯೋತ್ಸವ ಕಾರ್ಯಕ್ರಮಕ್ಕಾಗಿ ಬೀದರ್ ಮತ್ತು ದೆಹಲಿ ನಡುವೆ ವಿಶೇಷ ರೈಲು ಸೌಲಭ್ಯ ಒದಗಿಸಿ ಭಕ್ತರಿಗೆ ಅನುಕೂಲ ಮಾಡಿಕೊಟ್ಟ ಪ್ರಧಾನಮಂತ್ರಿ ನರೇಂದ್ರ ಮೋದಿ, ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಮತ್ತು ವಿ. ಸೋಮಣ್ಣ ಅವರಿಗೆ ಜಾಧವ್ ಧನ್ಯವಾದ ಸಲ್ಲಿಸಿದ್ದಾರೆ.

Managing Editor : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com
Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20
Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

ವಿಶ್ವದ 50 ಅತ್ಯಂತ ಹೆಚ್ಚು ವಾಯುಮಾಲಿನ್ಯ ನಗರಗಳ ಪೈಕಿ ಭಾರತದಲ್ಲೇ 49

ಮೊದಲ ಮೂರು ಸ್ಥಾನದಲ್ಲಿ ರಾಜಸ್ಥಾನದ ಶ್ರೀಗಂಗಾನಗರ, ಪಂಜಾಬ್‌ನ ಬಟಿಂಡಾ, ಹರಿಯಾಣ ಸಿರ್ಸಾ ನಗರ

ನವದೆಹಲಿ, ನ.10: ವಿಶ್ವದ ಅತ್ಯಂತ ಹೆಚ್ಚು ವಾಯುಮಾಲಿನ್ಯಯುಕ್ತ ನಗರಗಳ ಪಟ್ಟಿಯಲ್ಲಿ ಭಾರತ ಮೊದಲ ಸ್ಥಾನದಲ್ಲಿದೆ. ವಿಶ್ವದ 50 ಅತ್ಯಂತ ಮಲಿನ ನಗರಗಳ ಪೈಕಿ 49 ನಗರಗಳು ಭಾರತದಲ್ಲೇ ಇವೆ ಎಂದು ಎಕ್ಯೂಐ.ಇನ್ ದತ್ತಾಂಶ ಬಹಿರಂಗಪಡಿಸಿದೆ. ರಾಜಸ್ಥಾನದ ಶ್ರೀಗಂಗಾನಗರ ವಿಶ್ವದ ಅತ್ಯಂತ ಮಲಿನ ನಗರ ಎಂಬ ಕುಖ್ಯಾತಿಗೆ ಪಾತ್ರವಾಗಿದ್ದು, ಇಲ್ಲಿ ವಾಯು ಗುಣಮಟ್ಟ ಸೂಚ್ಯಂಕ (ಎಕ್ಯೂಐ) 821ಕ್ಕೆ ತಲುಪಿದೆ.

ಪಂಜಾಬ್‌ನ ಬಟಿಂಡಾ 629 ಎಕ್ಯೂಐನೊಂದಿಗೆ ಎರಡನೇ ಸ್ಥಾನದಲ್ಲಿದ್ದರೆ, ಹರಿಯಾಣದ ಸಿರ್ಸಾ 544 ಎಕ್ಯೂಐನೊಂದಿಗೆ ಮೂರನೇ ಸ್ಥಾನದಲ್ಲಿದೆ. ಹರಿಯಾಣದ ಹಿಸಾರ್‌ನಲ್ಲಿ 516 ಮತ್ತು ಪಂಜಾಬ್‌ನ ಫರೀದ್ ಕೋಟ್‌ನಲ್ಲಿ 506 ಎಕ್ಯೂಐ ದಾಖಲಾಗಿದೆ.



24ನೇ ಸ್ಥಾನದಲ್ಲಿ ದೆಹಲಿ

ರಾಷ್ಟ್ರ ರಾಜಧಾನಿ ದೆಹಲಿ ವಿಶ್ವದ ಅತ್ಯಂತ ಮಲಿನ ನಗರಗಳ ಪಟ್ಟಿಯಲ್ಲಿ 24ನೇ ಸ್ಥಾನದಲ್ಲಿದೆ. ದೆಹಲಿಯಲ್ಲಿ 393 ಎಕ್ಯೂಐ ದಾಖಲಾಗಿದೆ. ಪಾಕಿಸ್ತಾನದ ಲಾಹೋರ್ ಈ ಪಟ್ಟಿಯಲ್ಲಿ ಸ್ಥಾನ ಪಡೆದ ಭಾರತದ ಹೊರಗಿನ ಏಕೈಕ ನಗರವಾಗಿದ್ದು, 430 ಎಕ್ಯೂಐನೊಂದಿಗೆ 14ನೇ ಸ್ಥಾನದಲ್ಲಿದೆ.

ಉತ್ತರ ಭಾರತದ ಹಲವು ನಗರಗಳಲ್ಲಿ ವಾಯುಮಾಲಿನ್ಯ ಅಪಾಯಕಾರಿ ಮಟ್ಟಕ್ಕೆ ತಲುಪಿರುವುದು ಈ ಅಂಕಿಅಂಶಗಳಿಂದ ಸ್ಪಷ್ಟವಾಗಿದೆ.

ದೀಪಾವಳಿ ಸಂದರ್ಭದಲ್ಲಿ ಪಟಾಕಿ ಸಿಡಿತ, ವಾಹನಗಳ ಹೊಗೆ ಹಾಗೂ ಕೃಷಿ ತ್ಯಾಜ್ಯ ಸುಡುವಿಕೆಯಿಂದ ವಾಯುಮಾಲಿನ್ಯ ಹೆಚ್ಚಳವಾಗಿದೆ. ವಿಶೇಷವಾಗಿ ಪಂಜಾಬ್ ಮತ್ತು ಹರಿಯಾಣದಲ್ಲಿ ಬೆಳೆ ಅವಶೇಷ ಸುಡುವಿಕೆ ವಾಯುಮಾಲಿನ್ಯಕ್ಕೆ ಪ್ರಮುಖ ಕಾರಣಗಳಲ್ಲಿ ಒಂದಾಗಿದೆ. ಚಳಿಗಾಲದ ಆರಂಭದೊಂದಿಗೆ ವಾತಾವರಣದಲ್ಲಿ ಮಾಲಿನ್ಯಕಾರಕ ಕಣಗಳು ಹರಡದೆ ಉಳಿಯುತ್ತಿರುವುದರಿಂದ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿದೆ.

ಕನಿಷ್ಠ 5 ಸಾವಿರ ರೂ. ಬೆಳೆಹಾನಿ ಪರಿಹಾರ ಖಾತರಿಗೆ ಸರ್ಕಾರ ಬದ್ಧ

ಬೆಂಗಳೂರು, ನ.10: ತೀವ್ರ ಬರಗಾಲದಿಂದ ತತ್ತರಿಸಿರುವ ಅರ್ಹ ರೈತರೆಲ್ಲರಿಗೂ ಕೃಷಿಭೂಮಿಯ ವಿಸ್ತೀರ್ಣವನ್ನು ಲೆಕ್ಕಿಸದೆ ಮೊದಲ ಹಂತದಲ್ಲಿ ಕನಿಷ್ಠ 5,000 ರೂ. ಬೆಳೆಹಾನಿ ಪರಿಹಾರವನ್ನು ಖಾತರಿಪಡಿಸಲು ಸರ್ಕಾರ ಬದ್ಧವಾಗಿದೆ ಎಂದು ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಸ್ಪಷ್ಟಪಡಿಸಿದ್ದಾರೆ.

ಕಡಿಮೆ ಜಮೀನು ಹೊಂದಿದ್ದಾರೆ ಎಂಬ ಒಂದೇ ಕಾರಣಕ್ಕೆ ಯಾವುದೇ ಸಣ್ಣ ಮತ್ತು ಅತಿ ಸಣ್ಣ ರೈತರು ಪರಿಹಾರ ಸೌಲಭ್ಯದಿಂದ ವಂಚಿತರಾಗುವುದಿಲ್ಲ ಎಂದು ಅವರು ಭರವಸೆ ನೀಡಿದ್ದಾರೆ.

ಪ್ರತಿಪಕ್ಷಗಳು ಗೊಂದಲ ಮೂಡಿಸುವುದು ಸರಿಯಲ್ಲ: ಮೊದಲ ಕಂತಿನ ಮಧ್ಯಂತರ ಮೊತ್ತವನ್ನೇ ಅಂತಿಮ ಪರಿಹಾರವೆಂದು ಬಿಂಬಿಸಿ ರೈತರಲ್ಲಿ ಗೊಂದಲ ಮೂಡಿಸುವುದು ಸರಿಯಲ್ಲ. ವಿರೋಧ ಪಕ್ಷಗಳ ಮುಖಂಡರು ರೈತರ ಸಂಕಷ್ಟವನ್ನು ರಾಜಕೀಯ ಲಾಭಕ್ಕಾಗಿ ದುರುಪಯೋಗಪಡಿಸಿಕೊಳ್ಳದೆ ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕು ಎಂದು ಡಾ.ಜಿ. ಪರಮೇಶ್ವರ್ ವಿನಂತಿಸಿದ್ದಾರೆ.



■ ಕೃಷಿಭೂಮಿ ವಿಸ್ತೀರ್ಣ ಲೆಕ್ಕಿಸದೆ ಕ್ರಮ, ಯಾವುದೇ ಸಣ್ಣ ರೈತರೂ ಸೌಲಭ್ಯದಿಂದ ವಂಚಿತರಾಗಲ್ಲ: ಡಿಸಿಎಂ ಡಾ.ಜಿ. ಪರಮೇಶ್ವರ್ ಭರವಸೆ

ಪರಿಹಾರ ಪ್ರಕ್ರಿಯೆಯಲ್ಲಿ ಸಂಪೂರ್ಣ ಪಾರದರ್ಶಕತೆ ಕಾಯ್ದುಕೊಳ್ಳಲು ಮತ್ತು ಬಾಕಿ ಕಂತುಗಳನ್ನು ಶೀಘ್ರವಾಗಿ ತಲುಪಿಸಲು ಕಂದಾಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ನಿಯಮಗಳು ರೈತರ ನೆರವಿಗೆ ಧಾವಿಸಬೇಕೇ ಹೊರತು ಅವರಿಗೆ ಅಡ್ಡಿಯಾಗಬಾರದು ಎಂದು ಅಧಿಕಾರಿಗಳಿಗೆ ತಾಕೀತು ಮಾಡಲಾಗಿದೆ.

2,000 ಅಂತಿಮ ಪರಿಹಾರವಲ್ಲ: ಗೊಂದಲಕ್ಕೆ ಸ್ಪಷ್ಟನೆ

ಬರ ಪರಿಹಾರದ ಮೊದಲ ಕಂತಿನಲ್ಲಿ ಕೆಲ ರೈತರ ಖಾತೆಗಳಿಗೆ ನಿಗದಿತ 2,500 ಬದಲಿಗೆ 2,000 ಜಮೆಯಾಗಿರುವುದಕ್ಕೆ ಸಂಬಂಧಿಸಿದಂತೆ ವ್ಯಕ್ತವಾಗಿರುವ ಆತಂಕ ಹಾಗೂ ಗೊಂದಲಗಳಿಗೆ ತೆರೆ ಎಳೆದಿರುವ ಡಾ. ಜಿ. ಪರಮೇಶ್ವರ್, ಇದು ಅಂತಿಮ ಪರಿಹಾರವಲ್ಲ. 2026ರ ಅಕ್ಟೋಬರ್ 23 ರಂದು ಹೊರಡಿಸಲಾದ ಸರ್ಕಾರಿ ಆದೇಶದ ಅನ್ವಯ ಅರ್ಹ ರೈತರಿಗೆ ತಲಾ 2,500 ಮೊದಲ ಕಂತಿನ ಪರಿಹಾರ ಬಿಡುಗಡೆಗೆ ಅನುಮೋದನೆ ಸಿಕ್ಕಿತ್ತು. ಅದರಂತೆ ನವೆಂಬರ್ 5ರಂದು ಯಾದಗಿರಿ ಜಿಲ್ಲೆಯ 1,06,462 ರೈತರಿಗೆ ಒಟ್ಟು 17.43 ಕೋಟಿ ಪರಿಹಾರ ವಿತರಣೆಗೆ ಚಾಲನೆ ನೀಡಲಾಗಿತ್ತು. ಆದರೆ ಕೇಂದ್ರ ಸರ್ಕಾರದ ಎಸ್‌ಡಿಆರ್‌ಎಫ್/ಎನ್‌ಡಿಆರ್‌ಎಫ್ ನಿಯಮಾವಳಿ ಲೆಕ್ಕಾಚಾರದಿಂದಾಗಿ ಕೆಲವರ ಖಾತೆಗೆ ಕಡಿಮೆ ಮೊತ್ತ ಜಮೆಯಾಗಿತ್ತು. ಕೇಂದ್ರದ ಮಾನದಂಡಗಳ ಪ್ರಕಾರ ಮಳೆಯಾಶ್ರಿತ ಬೆಳೆಗೆ ಕನಿಷ್ಠ 1,500, ನೀರಾವರಿ ಬೆಳೆಗೆ 2,600 ಹಾಗೂ ಬಹುವಾರ್ಷಿಕ ಬೆಳೆಗೆ 3,200 ನಿಗದಿಯಾಗಿದೆ. ಆದರೆ ಅರ್ಧ ಎಕರೆ ಇರಲಿ ಅಥವಾ ಹೆಚ್ಚು ಜಮೀನಿರಲಿ, ಬರಗಾಲದ ನೋವು ಎಲ್ಲರಿಗೂ ಸಮಾನವಾಗಿರುವುದರಿಂದ ರಾಜ್ಯ ಸರ್ಕಾರ ಕೇಂದ್ರದ ಮಾನದಂಡಗಳನ್ನು ಮೀರಿ ನಿರ್ಧಾರ ಕೈಗೊಂಡಿದೆ. ಮೊದಲ ಕಂತಿನಲ್ಲಿ 2,000 ಪಡೆದ ರೈತರಿಗೆ ಮುಂದಿನ ಕಂತಿನಲ್ಲಿ 3,000 ಹಾಗೂ ಈಗಾಗಲೇ 2,500 ಪಡೆದವರಿಗೆ ಉಳಿದ 2,500 ಹಣವನ್ನು ಖಾತೆಗೆ ಜಮೆ ಮಾಡಿ ಒಟ್ಟು 5,000 ತಲುಪಿಸುವುದನ್ನು ಖಚಿತಪಡಿಸಲಾಗುತ್ತದೆ ಎಂದು ಸ್ಪಷ್ಟಪಡಿಸಿದರು.

ಶ್ವೇತಭವನದಲ್ಲಿ ಟ್ರಂಪ್ ದೀಪಾವಳಿ ಸಂಭ್ರಮ



ವಾಷಿಂಗ್ಟನ್, ನ.10: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಶುಕ್ರವಾರ ಶ್ವೇತಭವನದಲ್ಲಿ ದೀಪಾವಳಿ ಆಚರಣೆಯಲ್ಲಿ ಪಾಲ್ಗೊಂಡು ದೀಪ ಬೆಳಗಿಸಿದರು. ಭಾರತೀಯ ಮೂಲದ ಗಣ್ಯರ ಸಮ್ಮುಖದಲ್ಲಿ ನಡೆದ ಈ ಸಂಭ್ರಮಾಚರಣೆಯಲ್ಲಿ ಭಾರತೀಯ ಸಂಸ್ಕೃತಿಯ ಸೊಗಡು ಮೇಳೈಸಿತು.

ಅಮೆರಿಕದಲ್ಲಿರುವ ಭಾರತೀಯ ಸಮುದಾಯದ ಪ್ರಮುಖರು ಶ್ವೇತಭವನದ ಓವಲ್ ಕಚೇರಿಯಲ್ಲಿ ನಡೆದ ದೀಪಾವಳಿ ಆಚರಣೆಯಲ್ಲಿ ಭಾಗವಹಿಸಿದ್ದರು. ಅಮೆರಿಕದಲ್ಲಿನ ಭಾರತದ ರಾಯಭಾರಿ ವಿನಯ್ ಮೋಹನ್ ಕ್ವಾತ್ರಾ, ಎಫ್‌ಬಿಐ ನಿರ್ದೇಶಕ ಕಾಶ್ ಪಟೇಲ್, ಖ್ಯಾತ ಬಾಣಸಿಗ ವಿಕಾಸ್ ಖನ್ನಾ, ಉದ್ಯಮಿ ವಿಶಾಲ್ ಗೋಂಡಾಲ್, ಐಬಿಎಂ ಸಿಇಒ ಅರವಿಂದ್ ಕೃಷ್ಣ ಹಾಗೂ ಅಮೆರಿಕದ ರಾಷ್ಟ್ರೀಯ ಆರೋಗ್ಯ ಸಂಸ್ಥೆಗಳ ನಿರ್ದೇಶಕ ಜಯ್ ಭಟ್ಟಾಚಾರ್ಯ ಮತ್ತಿತರ ಗಣ್ಯರು ಹಾಜರಿದ್ದರು.

ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೊಂದಿಗೆ ದೀಪಾವಳಿ ಆಚರಿಸಿದ್ದು ಗೌರವದ ಸಂಗತಿ. ಲಕ್ಷಾಂತರ ಮಂದಿ ಧೈರ್ಯ, ಭಕ್ತಿ ಮತ್ತು ಶಕ್ತಿಗಾಗಿ ಪಠಿಸುವ ತುಳಸಿದಾಸರ ಹನುಮಾನ್ ಚಾಲೀಸಾ ಪ್ರತಿಯನ್ನು ಅವರಿಗೆ ನೀಡಿದ್ದು ಹೆಮ್ಮೆಯ ಕ್ಷಣ' ಎಂದು ಅವರು ತಿಳಿಸಿದ್ದಾರೆ.

ಭಾರತ–ಅಮೆರಿಕ ಸ್ನೇಹಕ್ಕಾಗಿ ಪ್ರಾರ್ಥನೆ: ದೀಪ ಬೆಳಗಿಸುವ ಸಂದರ್ಭದಲ್ಲಿ ಭಾರತ ಮತ್ತು ಅಮೆರಿಕ ನಡುವಿನ ಸ್ನೇಹ ಮತ್ತಷ್ಟು ಬಲಗೊಳ್ಳಲಿ ಹಾಗೂ ಕತ್ತಲೆಯ ಮೇಲೆ ಬೆಳಕು ಜಯ ಸಾಧಿಸಲಿ ಎಂದು ಪ್ರಾರ್ಥಿಸಿದ್ದಾಗಿ ಗೋಂಡಾಲ್ ಹೇಳಿದ್ದಾರೆ.

'ಜುಗ್ ಜುಗ್ ಜಿಯೋ' ಆಶೀರ್ವಾದ: ಭಾರತೀಯ ಸಂಪ್ರದಾಯದ 'ಜುಗ್ ಜುಗ್ ಜಿಯೋ' ಎಂಬ ಆಶೀರ್ವಾದವನ್ನೂ ಗೋಂಡಾಲ್ ಹಂಚಿಕೊಂಡಿದ್ದಾರೆ. 'ಜುಗ್ ಜುಗ್ ಜಿಯೋ ಎಂದರೆ ಯುಗಯುಗಗಳ ಕಾಲ ಬದುಕು ಎಂಬ ಅರ್ಥ. ಶಾಂತಿ, ಸಮೃದ್ಧಿ, ಉತ್ತಮ ಆರೋಗ್ಯ ಮತ್ತು ದೀರ್ಘಾಯುಷ್ಯ ಎಲ್ಲರಿಗೂ ದೊರೆಯಲಿ ಎಂಬ ಆಶಯ ಇದರ ಹಿಂದಿದೆ. ಜಗತ್ತಿನ ಎಲ್ಲರಿಗೂ ದೀಪಾವಳಿ ಶುಭಾಶಯಗಳು. ಜುಗ್ ಜುಗ್ ಜಿಯೋ' ಎಂದು ಹೇಳಿದ್ದಾರೆ.

ಟ್ರಂಪ್‌ಗೆ ಹನುಮಾನ್ ಚಾಲೀಸಾ ಉಡುಗೊರೆ

ಶ್ವೇತಭವನದ ದೀಪಾವಳಿ ಆಚರಣೆಯಲ್ಲಿ ಪಾಲ್ಗೊಂಡ ಭಾರತೀಯ ಉದ್ಯಮಿ ಹಾಗೂ ಜಿ ಒಕ್ಯೂಐ ಸ್ಥಾಪಕ ವಿಶಾಲ್ ಗೋಂಡಾಲ್, ಟ್ರಂಪ್‌ಗೆ ತುಳಸಿದಾಸರ ಹನುಮಾನ್ ಚಾಲೀಸಾ ಪ್ರತಿಯನ್ನು ಉಡುಗೊರೆಯಾಗಿ ನೀಡಿದರು. ಈ ಕುರಿತು ಶನಿವಾರ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಗೋಂಡಾಲ್, 'ಓವಲ್ ಕಚೇರಿಯಲ್ಲಿ ಬೆಳಕಿನ ಹಂಚಿಕೆಯ ಕ್ಷಣ' ಎಂದು ಸಂಭ್ರಮ ಬಣ್ಣಿಸಿದ್ದಾರೆ.

ದೋಷಾರೋಪಣೆ ವಿರುದ್ಧ ಅಮೆರಿಕ ರಕ್ಷಣಾ ಸಚಿವ ಹೆಗ್ಸೆತ್ ಅಸಮಾಧಾನ

ವಾಷಿಂಗ್‌ಟನ್, ನ.10: ಯುನೈಟೆಡ್ ಸ್ಟೇಟ್ಸ್‌ನ ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್ ತಮ್ಮ ವಿರುದ್ಧದ ದೋಷಾರೋಪಣೆ ಪ್ರಯತ್ನವನ್ನು ವಿರೋಧಿಸಿದ್ದಾರೆ.

ಈ ಪ್ರಯತ್ನ ದೇಶ "ತನ್ನದೇ ಆದ ಯೋಧರನ್ನು ಶಿಕ್ಷಿಸುತ್ತದೆ" ಎಂಬ ಸಂದೇಶವನ್ನು ಅಮೆರಿಕದ ಶತ್ರುಗಳಿಗೆ ರವಾನಿಸುತ್ತದೆ ಎಂದು ಹೆಗ್ಸೆತ್ ಹೇಳಿದ್ದಾರೆ.



ಮೇ ನಂತರದ ತಮ್ಮ ಮೊದಲ ಮಾಧ್ಯಮ ಗೋಷ್ಠಿಯಲ್ಲಿ ಅವರು "ಅಮೆರಿಕನ್ ಗಣರಾಜ್ಯದ 250 ವರ್ಷಗಳ ಇತಿಹಾಸ ದಲ್ಲಿ ಯಾವುದೇ ರಕ್ಷಣಾ ಕಾರ್ಯದರ್ಶಿ ಯನ್ನು ಕಾನೂನುಬದ್ಧ ಮಿಲಿಟರಿ ಕಾರ್ಯಾಚರಣೆಗಳನ್ನು ನಡೆಸಿದ್ದಕ್ಕಾಗಿ ದೋಷಾರೋಪಣೆ ಮಾಡಲಾಗಿಲ್ಲ"ಎಂದು ಹೇಳಿದರು. ಇತ್ತೀಚೆಗೆ ನಡೆದ ಮಧ್ಯಂತರ ಚುನಾವಣೆಗಳಲ್ಲಿ ರಿಪಬ್ಲಿಕನ್ನರು ಹೀನಾಯ ಸೋಲನ್ನು ಎದುರಿಸಿದ ನಂತರ ಕೆಂಟುಕಿಯ ಮಾಸ್ಸಿ ಸಲ್ಲಿಸಿದ ನಿರ್ಣಯ, ಹೆಗ್ಸೆತ್ ಅವರನ್ನು ಟ್ರಂಪ್ ಆಡಳಿತದಿಂದ ತೆಗೆದುಹಾಕಲು ಮತದಾನಕ್ಕೆ ವೇದಿಕೆಯನ್ನು ಸಿದ್ಧಪಡಿಸಿದೆ.ಮಾಸ್ಸಿಯನ್ನು ಗುರಿಯಾಗಿಸಿಕೊಂಡು ಹೆಗ್ಸೆತ್ ಮಂಗಳವಾರ "ನೀತಿ ಭಿನ್ನಾಭಿಪ್ರಾಯಗಳ" ಬಗ್ಗೆ "ಅತೃಪ್ತ ಮತ್ತು ಸೋತ" ಕಾಂಗ್ರೆಸ್ಸಿಗರಿಂದ ತಮ್ಮ ವಿರುದ್ಧದ ಕ್ರಮ ಮುನ್ನಡೆಸಲ್ಪಡುತ್ತಿದೆ ಎಂದು ಹೇಳಿದ್ದರು.

ಗ್ಯಾರಂಟಿ ಯೋಜನೆಗಳ ಹೆಸರಲ್ಲಿ ಬೆಲೆ ಏರಿಕೆ ಬರೋಬ್ಬರಿ 60 ಸಾವಿರ ಕೋಟಿ ದರೋಡೆ

ಬೆಲೆ ಏರಿಸಿ ಕರ್ನಾಟಕ ಸರ್ಕಾರ ಸಂಗ್ರಹಿಸುತ್ತಿರುವ ಹಣ ಎಷ್ಟು

ಅಧಿಕೃತ ಅಂಕಿ–ಅಂಶಗಳ ಪ್ರಕಾರ ರಾಜ್ಯ ಸರ್ಕಾರ ವಿವಿಧ ಇಲಾಖೆಗಳು ಹಾಗೂ ಸೇವೆಗಳ ಮೇಲೆ ದರ ಹೆಚ್ಚಿಸಿ ಸಂಗ್ರಹಿಸುತ್ತಿರುವ ವಾರ್ಷಿಕ ಮೊತ್ತ ಎಷ್ಟು ಎಂಬುದನ್ನು ಸಚಿವ ಪ್ರಲ್ಹಾದ್ ಜೋಶಿ ತಿಳಿಸಿದ್ದಾರೆ.

- ವಿದ್ಯುತ್ ದರ (2 ಬಾರಿ ಹೆಚ್ಚಳ): 12,000 ಕೋಟಿ ಹೆಚ್ಚುವರಿ ಸಂಗ್ರಹ
- ಏಕ ಶುಲ್ಕ ನಿವೇಶನ ಶುಲ್ಕ ಹೆಚ್ಚಳ: 15,000 ಕೋಟಿ
- ಪೆಟ್ರೋಲ್ ಹಾಗೂ ಡೀಸೆಲ್ ದರ ಏರಿಕೆ: 6,000 ಕೋಟಿ
- ಮದ್ಯದ ಮೇಲಿನ ಅಬಕಾರಿ ಸುಂಕ: 4,500 ಕೋಟಿ
- ವಾಹನ ನೋಂದಣಿ (ಇವಿ ಸೇರಿ %15 ತೆರಿಗೆ ಏರಿಕೆ): 3,712 ಕೋಟಿ
- ಆಸ್ತಿ ಸ್ಟ್ಯಾಂಪ್ ಡ್ಯೂಟಿ ಏರಿಕೆ (1% ರಿಂದ 2%): 3,000 ಕೋಟಿ
- ಆಸ್ತಿಗಳ ಮಾರ್ಗಸೂಚಿ ದರ ಹೆಚ್ಚಳ: 2,000 ಕೋಟಿ
- ಕೆಎಸ್‌ಆರ್‌ಟಿಸಿ ಬಸ್ ದರ ಹೆಚ್ಚಳ: 1,000 ಕೋಟಿ
- ಪಂಚಾಯಿತಿ ಇ–ಖಾತಾ ಶುಲ್ಕ: 1,000 ಕೋಟಿ
- ನಮ್ಮ ಮೆಟ್ರೋ ದರ ಹೆಚ್ಚಳ: 450 ಕೋಟಿ
- ವೃತ್ತಿಪರ ತೆರಿಗೆ ಹಾಗೂ ಶೈಕ್ಷಣಿಕ ಶುಲ್ಕ: 27 ಕೋಟಿ

ಹುಬ್ಬಳ್ಳಿ, ನ.10: ಕರ್ನಾಟಕದಲ್ಲಿ ಹಾಲಿನ ದರ ಹಾಗೂ ಬಸ್ ಪ್ರಯಾಣ ದರ ಏರಿಸಿ ಜನರ ಮೇಲೆ ಸರ್ಕಾರ ಹೊರೆ ಹಾಕಿದೆ ಎಂದು ಬಗ್ಗೆ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ದೂರಿದ್ದಾರೆ. ಹಾಗೂ ಕೇಂದ್ರ ಹಾಗೂ ರಾಜ್ಯ ಸರ್ಕಾರ ವಿಧಿಸಿರುವ ಪೆಟ್ರೋಲ್ ಹಾಗೂ ಡಿಸೇಲ್ ದರದ ಬಗ್ಗೆ ಮಾಹಿತಿ ನೀಡಿದ್ದಾರೆ.



■ ಕರ್ನಾಟಕ ಸರ್ಕಾರದ ವಿರುದ್ಧ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ವಾಗ್ದಾಳಿ

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉಚಿತ ಗ್ಯಾರಂಟಿ ಯೋಜನೆಗಳನ್ನು ನೀಡುತ್ತಿದ್ದೇವೆ ಎಂದು ಹೇಳಿಕೊಂಡು ರಾಜ್ಯದ ಕಾಂಗ್ರೆಸ್ ಸರ್ಕಾರವು ಬೆಲೆ ಏರಿಕೆ ಹಾಗೂ ವಿವಿಧ ಶುಲ್ಕಗಳ ಹೆಚ್ಚಳದ ಮೂಲಕ ಸಾರ್ವಜನಿಕರಿಂದ ವಾರ್ಷಿಕ ಬರೋಬ್ಬರಿ 60,000 ಕೋಟಿ ರೂಪಾಯಿಗೂ ಹೆಚ್ಚು ಹಣವನ್ನು ದರೋಡೆ ಮಾಡುತ್ತಿದೆ ಎಂದು ತೀವ್ರ ವಾಗ್ದಾಳಿ ನಡೆಸಿದ್ದಾರೆ. ಹಬ್ಬಗಳ ಸಮಯದಲ್ಲೇ ಹಾಲು, ಬಸ್ ದರ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲೂ ಬೆಲೆ ಹೆಚ್ಚಿಸಿ ಸರ್ಕಾರ ಜನಸಾಮಾನ್ಯರಿಗೆ 'ದೀಪಾವಳಿ ಉಡುಗೊರೆ' ನೀಡಿದೆ ಎಂದು ವ್ಯಂಗ್ಯವಾಡಿದರು.

ಪೆಟ್ರೋಲ್–ಡೀಸೆಲ್ ಮೇಲಿನ ರಾಜ್ಯ ತೆರಿಗೆಯೇ ಕೇಂದ್ರಕ್ಕಿಂತ ದುಪ್ಪಟ್ಟು.: ಪೆಟ್ರೋಲ್ ಮೇಲೆ ಕೇಂದ್ರದ ತೆರಿಗೆ ಕೇವಲ 10.90 ರೂ.ಇದ್ದರೆ, ರಾಜ್ಯ ಸರ್ಕಾರದ ತೆರಿಗೆ 26 ರೂ. ಇದೆ. ಡೀಸೆಲ್ ಮೇಲೆ ಕೇಂದ್ರದ ತೆರಿಗೆ 7.80 ರೂ. ಇದ್ದರೆ, ರಾಜ್ಯ ಸರ್ಕಾರ 21.17 ರೂ. ತೆರಿಗೆ ವಿಧಿಸುತ್ತಿದೆ. ಕೇಂದ್ರ ಸರ್ಕಾರ ಯುದ್ಧದ ಪರಿಸ್ಥಿತಿಯಲ್ಲಿ 3 ಹೆಚ್ಚಿಸಿದ್ದನ್ನು ಹೊರತುಪಡಿಸಿ ದರ ಏರಿಸಿಲ್ಲ. ವಿಮಾನ ಇಂಧನ ಮೇಲಿನ ತೆರಿಗೆಯೂ ದೇಶದಲ್ಲೇ ಕರ್ನಾಟಕದಲ್ಲೇ ಗರಿಷ್ಠ ಮಟ್ಟದಲ್ಲಿದೆ. ಇಷ್ಟೇ ಅಲ್ಲದೆ, ಗಣಿ ರಾಯಲ್ಟಿ, ಕಟ್ಟಡ ದಂಡ, ಜನನ–ಮರಣ ನೋಂದಣಿ ಶುಲ್ಕ, ಕೆಎಸ್‌ಆರ್‌ಟಿಸಿ ಲಗೇಜ್ ದರ ಹಾಗೂ ಟ್ರಾನ್ಸ್‌ಫಾರ್ಮರ್ ವೈಫಲ್ಯದ ದುರಸ್ತಿ ವೆಚ್ಚವನ್ನು 25,000 ರೂ.ನಿಂದ 3ರಿಂದ 5 ರೂ. ಲಕ್ಷ ರೂ.ಗೆ ಏರಿಸಿ ಬಡವರ ಜೇಬಿಗೆ ಕನ್ನ ಹಾಕಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪಾಕಿಸ್ತಾನದ ಅಣೆಕಟ್ಟು ಕಾಮಗಾರಿ ವೇಳೆ ಮತ್ತೆ ಭೂಕುಸಿತ

ಚೀನಾ ಕಂಪನಿಗಳ ಯೋಜನೆಗೆ ಹಿನ್ನಡೆ

■ ಯೋಜನೆ ಪ್ರಗತಿಯಲ್ಲಿ ವಿಳಂಬ

■ 2026ರ ಬದಲು 2028ರ ಜೂನ್‌ಗೆ ಪೂರ್ಣಗೊಳಿಸುವ ಗುರಿ

ಇಸ್ಲಾಮಾಬಾದ್, ನ.10: ಪಾಕಿಸ್ತಾನದಲ್ಲಿ ಚೀನಾ ನಿರ್ಮಿಸುತ್ತಿರುವ ಬಹುಕೋಟಿ ವೆಚ್ಚದ ತರ್ಬೆಲಾ ಅಣೆಕಟ್ಟು ವಿಸ್ತರಣಾ ಯೋಜನೆಗೆ ಮತ್ತೊಂದು ಹಿನ್ನಡೆಯಾಗಿದೆ.

ಪಾಕಿಸ್ತಾನದ ತರ್ಬೆಲಾ ಅಣೆಕಟ್ಟಿನ ಐದನೇ ಹಂತದ ವಿಸ್ತರಣಾ ಜಲವಿದ್ಯುತ್ ಯೋಜನೆಯ ಕಾಮಗಾರಿ ವೇಳೆ ಈ ಘಟನೆ ಸಂಭವಿಸಿದೆ. 1,530 ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯದ ಈ ಯೋಜನೆಗೆ ಚೀನಾ ಕಂಪನಿಗಳೂ ಕೈಜೋಡಿಸಿವೆ. ಇದರಿಂದ ಕಾರ್ಮಿಕರನ್ನು ತುರ್ತಾಗಿ ಸ್ಥಳಾಂತರಿಸಲಾಗಿದ್ದು, ಕಾಮಗಾರಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಈ ಘಟನೆಯ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಘಟನೆ ಕುರಿತು ಮಾಹಿತಿ ನೀಡಿರುವ ಪಾಕಿಸ್ತಾನದ ಜಲ ಮತ್ತು ವಿದ್ಯುತ್ ಅಭಿವೃದ್ಧಿ ಪ್ರಾಧಿಕಾರ (ವಾಪ್ಡಾ), ಎಲ್ಲಾ ಕಾರ್ಮಿಕರನ್ನು ಸುರಕ್ಷಿತವಾಗಿ ಸ್ಥಳಾಂತರಿಸಲಾಗಿದೆ. ಘಟನೆಯಲ್ಲಿ ಯಾರಿಗೂ ಗಾಯವಾಗಿಲ್ಲ ಅಥವಾ ಸಾವು ಸಂಭವಿಸಿಲ್ಲ ಎಂದು ತಿಳಿಸಿದೆ.

ಮುಖ್ಯ ಸುರಂಗ, ವಿದ್ಯುತ್ ಉತ್ಪಾದನಾ ಘಟಕ, ನೀರು ಹೊರಹರಿಯುವ ಮಾರ್ಗ ಹಾಗೂ ಸ್ವಿಚ್‌ಯಾರ್ಡ್‌ಗೆ ಯಾವುದೇ ಹಾನಿಯಾಗಿಲ್ಲ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

2026ರ ಬದಲು 2028ಕ್ಕೆ ಪೂರ್ಣಗೊಳಿಸುವ ಗುರಿ: ಚೀನಾ ಕಂಪನಿಗಳು ಭಾಗಿಯಾಗಿರುವ ಈ ಜಲವಿದ್ಯುತ್ ಯೋಜನೆಯನ್ನು ಆರಂಭದಲ್ಲಿ 2026ರ ವೇಳೆಗೆ ಪೂರ್ಣಗೊಳಿಸುವ ಗುರಿ ಹೊಂದಲಾಗಿತ್ತು. ಆದರೆ ಸರಣಿ ಅವಘಡಗಳು ಮತ್ತು ಕಾಮಗಾರಿ ವಿಳಂಬದಿಂದಾಗಿ ಇದೀಗ 2028ರ ಜೂನ್‌ಗೆ ಪೂರ್ಣಗೊಳಿಸುವ ಹೊಸ ಗುರಿ ನಿಗದಿಪಡಿಸಲಾಗಿದೆ. ಈ ಯೋಜನೆಗೆ ವಿಶ್ವಬ್ಯಾಂಕ್ ಮತ್ತು ಏಷ್ಯನ್ ಇನ್‌ಫ್ರಾಸ್ಟ್ರಕ್ಚರ್ ಇನ್ವೆಸ್ಟ್‌ಮೆಂಟ್ ಬ್ಯಾಂಕ್‌ಗಳು ಸಾಲದ ರೂಪದಲ್ಲಿ ಭಾಗಶಃ ಹಣಕಾಸು ನೆರವು ನೀಡುತ್ತಿವೆ.

ಇದೇ ಮೊದಲೇನಲ್ಲ

ತರ್ಬೆಲಾ ಅಣೆಕಟ್ಟು ಯೋಜನೆಯಲ್ಲಿ ಈ ರೀತಿಯ ಅವಘಡ ಸಂಭವಿಸುತ್ತಿರುವುದು ಇದೇ ಮೊದಲಲ್ಲ. ಕೆಲವು ತಿಂಗಳ ಹಿಂದೆಯಷ್ಟೇ ಇದೇ ಯೋಜನೆಯಲ್ಲಿ ನೀರು ತಡೆಗಟ್ಟಲು ನಿರ್ಮಿಸಿದ್ದ ತಾತ್ಕಾಲಿಕ ಅಣೆಕಟ್ಟು (ಕಾಫರ್‌ಡ್ಯಾಮ್) ಕುಸಿದಿತ್ತು. ಈ ಘಟನೆ ಕುರಿತು ಸರ್ಕಾರ ನಡೆಸಿದ ತನಿಖೆಯಲ್ಲಿ ಅನುಮತಿಯಿಲ್ಲದೆ ವಿನ್ಯಾಸ ಬದಲಾವಣೆ ಮಾಡಿರುವುದು ಹಾಗೂ ಗುತ್ತಿಗೆದಾರರು, ಸಲಹೆಗಾರರು ಮತ್ತು ವಾಪ್ಡಾ ನಡುವಿನ ಒಪ್ಪಂದದ ಲೋಪಗಳು ಅವಘಡಕ್ಕೆ ಕಾರಣವಾಗಿವೆ ಎಂದು ತಿಳಿದುಬಂದಿತ್ತು.





ಗಡಿ ಕಾವಲಿಗೆ ರೊಬೋಟಿಕ್ ಹೇಸರಗತ್ತೆಗಳ ನಿಯೋಜನೆ

ಭಾರತೀಯ ಸೇನೆಯಿಂದ ಹೊಸ ಪ್ರಯೋಗ: ಜಮ್ಮು-ಕಾಶ್ಮೀರದಲ್ಲಿ ಹೈಟೆಕ್ ಕಣ್ಗಾವಲು

ಶ್ರೀನಗರ, ನ.10: ದೇಶದ ಗಡಿ ಭದ್ರತೆಯನ್ನು ಮತ್ತಷ್ಟು ಬಲಪಡಿಸಲು ಭಾರತೀಯ ಸೇನೆ ಅತ್ಯಾಧುನಿಕ ತಂತ್ರಜ್ಞಾನದ ಮೊರೆ ಹೋಗಿದ್ದು, ಗಡಿ ಕಾಯಲು ರೋಬೋಟ್‌ಗಳ ನಿಯೋಜನೆ ಮಾಡಲಾಗಿದೆ. ಜಮ್ಮು–ಕಾಶ್ಮೀರದ ಅಖ್ನೂರ್ ಪ್ರದೇಶದಲ್ಲಿ ಗಡಿ ಕಾವಲುಗಾಗಿ ರೋಬೋಟಿಕ್ ಹೇಸರಗತ್ತೆಗಳನ್ನು (ರೊಬೋಟಿಕ್ ಮ್ಯೂಲ್ಸ್) ನಿಯೋಜಿಸಲಾಗಿದ್ದು, ಈ ಮೂಲಕ ಗಡಿ ರಕ್ಷಣೆಯಲ್ಲಿ ಹೊಸ ತಂತ್ರಜ್ಞಾನಕ್ಕೆ ಸೇನೆ ಆದ್ಯತೆ ನೀಡಿದೆ.



ರೋಬೋಟಿಕ್ ಹೇಸರಗತ್ತೆಗಳ ವಿಶೇಷ

* ಅತ್ಯಾಧುನಿಕ ತಂತ್ರಜ್ಞಾನದ ಮೂಲಕ ಗಡಿ ಪ್ರದೇಶಗಳ ಮೇಲೆ ನಿಗಾ
* ಶತ್ರುಗಳ ಚಲನವಲನ ಪತ್ತೆಹಚ್ಚಿ ಮಾಹಿತಿ ರವಾನೆ
* ಗುಪ್ತ ಕಾರ್ಯಾಚರಣೆಗೆ ನೆರವು: ಹೊಂಚುದಾಳಿ ಸೇರಿ ಸೇನೆಯ ಕಾರ್ಯಾಚರಣೆಗೆ ಸಹಕಾರ
* ದುರ್ಗಮ ಬೆಟ್ಟ, ಕಲ್ಲುಬಂಡೆ ಸೇರಿದಂತೆ ಸವಾಲಿನ ಪ್ರದೇಶಗಳಲ್ಲೂ ಸಂಚರಿಸಬಲ್ಲ ಸಾಮರ್ಥ್ಯ
* ಗಡಿ ಭದ್ರತೆಗೆ ಸೂಕ್ತ ಮಾಹಿತಿಯನ್ನು ತ್ವರಿತವಾಗಿ ಒದಗಿಸಲು ನೆರವು

ಈ ರೋಬೋಟಿಕ್ ಹೇಸರಗತ್ತೆಗಳು ಕಠಿಣ ಭೌಗೋಳಿಕ ಪ್ರದೇಶಗಳಲ್ಲೂ ಸುಲಭವಾಗಿ ಸಂಚರಿಸುವ ಸಾಮರ್ಥ್ಯ ಹೊಂದಿವೆ. ಗಡಿ ಪ್ರದೇಶಗಳಲ್ಲಿ ಕಣ್ಗಾವಲು ನಡೆಸುವುದು, ಶತ್ರುಗಳ ಚಲನವಲನಗಳನ್ನು ಪತ್ತೆ ಹಚ್ಚುವುದು ಮತ್ತು ಸೈನಿಕರಿಗೆ ನೈಜ ಸಮಯದ ಗುಪ್ತಚರ ಮಾಹಿತಿ ಒದಗಿಸುವುದು ಇವುಗಳ ಪ್ರಮುಖ ಕೆಲಸವಾಗಿದೆ.

ಗಡಿ ಪ್ರದೇಶಗಳಲ್ಲಿ ಕಠಿಣ ಹವಾಮಾನ ಮತ್ತು ದುರ್ಗಮ ಭೂಪ್ರದೇಶದ ನಡುವೆ ಕಾರ್ಯನಿರ್ವಹಿಸುವುದು ಸೈನಿಕರಿಗೆ ದೊಡ್ಡ ಸವಾಲಾಗಿದೆ. ಇಂತಹ ಸಂದರ್ಭಗಳಲ್ಲಿ ರೋಬೋಟಿಕ್ ಸಾಧನಗಳ ಬಳಕೆ ಸೇನೆಯ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ನೆರವಾಗಲಿದೆ. ಆಧುನಿಕ ತಂತ್ರಜ್ಞಾನವನ್ನು ಸೇನಾ ಕಾರ್ಯಾಚರಣೆಗಳೊಂದಿಗೆ ಸಂಯೋಜಿಸುವ ಮೂಲಕ ಭಾರತದ ಗಡಿ ರಕ್ಷಣಾ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಲು ಭಾರತೀಯ ಸೇನೆ ಮುಂದಾಗಿದೆ. ಆಧುನಿಕ ತಂತ್ರಜ್ಞಾನ ಮತ್ತು ಸೇನಾ ಸನ್ನದ್ಧತೆಯನ್ನು ಒಟ್ಟುಗೂಡಿಸುವ ಮೂಲಕ ಭಾರತದ ಗಡಿ ರಕ್ಷಣಾ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವುದು ಈ ಕ್ರಮದ ಉದ್ದೇಶವಾಗಿದೆ.



ನಿವೃತ್ತ ಸರ್ಕಾರಿ ಅಧಿಕಾರಿಗಳೂ ಚುನಾವಣಾ ನೀತಿಸಂಹಿತೆ ವ್ಯಾಪ್ತಿಗೆ ಸೇರ್ಪಡೆ

ಪ್ರಚಾರ, ಮತಯಾಚನೆಯಲ್ಲಿ ಭಾಗವಹಿಸುವಂತಿಲ್ಲ: ಚುನಾವಣಾ ಆಯೋಗದಿಂದ ಐದು ರಾಜ್ಯಗಳಿಗೆ ಸೂಚನೆ

ನವದೆಹಲಿ, ನ.10: ಚುನಾವಣಾ ಸಂದರ್ಭದಲ್ಲಿ ಸರ್ಕಾರಿ ನೌಕರರಿಗೆ ಅನ್ವಯಿಸುವ ಮಾದರಿ ನೀತಿಸಂಹಿತೆಯ ನಿರ್ಬಂಧಗಳನ್ನು ನಿವೃತ್ತ ಸರ್ಕಾರಿ ಅಧಿಕಾರಿಗಳಿಗೂ ವಿಸ್ತರಿಸಿ ಚುನಾವಣಾ ಆಯೋಗ ಮಹತ್ವದ ಆದೇಶ ಹೊರಡಿಸಿದೆ. ಸರ್ಕಾರಿ ಸೇವೆಯಿಂದ ನಿವೃತ್ತರಾದ ಬಳಿಕವೂ ರಾಜ್ಯ ಸರ್ಕಾರ ಅಥವಾ ಕೇಂದ್ರಾಡಳಿತ ಪ್ರದೇಶಗಳ ಆಡಳಿತದಲ್ಲಿ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ಚುನಾವಣಾ ಅವಧಿಯಲ್ಲಿ ರಾಜಕೀಯವಾಗಿ ತಟಸ್ಥವಾಗಿರಬೇಕು ಎಂದು ಆಯೋಗ ಸ್ಪಷ್ಟಪಡಿಸಿದೆ. ನಿವೃತ್ತ ಅಧಿಕಾರಿಗಳು ಯಾವುದೇ ರಾಜಕೀಯ ಪಕ್ಷದ ಚುನಾವಣಾ ಪ್ರಚಾರದಲ್ಲಿ ಭಾಗವಹಿಸುವಂತಿಲ್ಲ. ಅಭ್ಯರ್ಥಿಗಳ ಪರವಾಗಿ ಮತಯಾಚನೆ ಮಾಡುವುದಕ್ಕೂ ಅವಕಾಶವಿಲ್ಲ. ಅಲ್ಲದೆ, ತಮ್ಮ ಹೆಸರು, ಹುದ್ದೆ ಅಥವಾ ಅಧಿಕಾರವನ್ನು ಬಳಸಿಕೊಂಡು ಯಾವುದೇ ವ್ಯಕ್ತಿ, ರಾಜಕೀಯ ಪಕ್ಷ ಅಥವಾ ಗುಂಪಿನ ಪರವಾಗಿ ಕೆಲಸ ಮಾಡುವಂತಿಲ್ಲ ಎಂದು ಸೂಚಿಸಲಾಗಿದೆ.

ಈ ಸಂಬಂಧ ಗೋವಾ, ಮಣಿಪುರ, ಪಂಜಾಬ್, ಉತ್ತರ ಪ್ರದೇಶ ಮತ್ತು ಉತ್ತರಾಖಂಡ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳು ಹಾಗೂ ಮುಖ್ಯ ಚುನಾವಣಾಧಿಕಾರಿಗಳಿಗೆ ಚುನಾವಣಾ ಆಯೋಗ ಪತ್ರ ಬರೆದಿದೆ. ಈ ಐದು ರಾಜ್ಯಗಳಲ್ಲಿ ಮುಂದಿನ ವರ್ಷದ ಆರಂಭದಲ್ಲಿ ವಿಧಾನಸಭಾ ಚುನಾವಣೆ ನಡೆಯುವ ನಿರೀಕ್ಷೆಯಿದೆ. ಸರ್ಕಾರದ ಅನುದಾನದಿಂದ ಸಂಪೂರ್ಣವಾಗಿ ಅಥವಾ ಭಾಗಶಃ ಕಾರ್ಯನಿರ್ವಹಿಸುವ ಸಂಸ್ಥೆಗಳು, ಸಮಿತಿಗಳು, ನಿಗಮಗಳು ಮತ್ತು ಆಯೋಗಗಳಿಗೂ ಮಾದರಿ ನೀತಿ ಸಂಹಿತೆಯ ನಿಯಮಗಳು ಅನ್ವಯವಾಗುತ್ತವೆ. ಅವುಗಳ ಉದ್ಯೋಗಿಗಳೂ ಈ ನಿಯಮಗಳನ್ನು ಪಾಲಿಸಬೇಕಾಗುತ್ತದೆ ಎಂದು ಆಯೋಗ ತಿಳಿಸಿದೆ. ಸೇವೆಯಲ್ಲಿರುವ ಸರ್ಕಾರಿ ನೌಕರರಿಗೆ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುವುದಕ್ಕೆ ಈಗಾಗಲೇ ನಿರ್ಬಂಧಗಳಿವೆ. ಆದರೆ ನಿವೃತ್ತಿಯ ನಂತರ ಸರ್ಕಾರದಿಂದ ವಿವಿಧ ಹುದ್ದೆಗಳಿಗೆ ನೇಮಕಗೊಂಡ ಅಥವಾ ಮರುನೇಮಕಗೊಂಡ ಅಧಿಕಾರಿಗಳ ರಾಜಕೀಯ ನಡವಳಿಕೆ ಕುರಿತು ನಿರ್ದಿಷ್ಟ ನಿಯಮಗಳ ಕೊರತೆ ಇತ್ತು. ಈ ಹಿನ್ನೆಲೆಯಲ್ಲಿ ಆಯೋಗ ಹೊಸ ನಿರ್ದೇಶನ ನೀಡಿದೆ.

ಪ್ರಸಿದ್ಧ ಕೊಂಕಣಿ ಸಂಗೀತ ಸಂಯೋಜಕ ಲಾರೆನ್ಸ್ ಸಲ್ಡಾನ್ಹಾ ಅವರಿಗೆ ಪ್ರಥಮ ವಿಶ್ವ ಕೊಂಕಣಿ ಸಂಗೀತ ಶ್ರೇಷ್ಠತಾ ಪ್ರಶಸ್ತಿ ಪ್ರದಾನ



ಮುಂಬಯಿ, ನ.10: ಕರ್ನಾಟಕ ಕರಾವಳಿಯ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕು ಸಿದ್ದಕಟ್ಟೆ ಮೂಲತಃ ಮುಂಬಯಿ ನೆಲೆವಾಸಿ ಪ್ರಸಿದ್ಧ ಕೊಂಕಣಿ ಸಂಗೀತ ಸಂಯೋಜಕ, ಗಾಯಕ ಹಾಗೂ ಸಾಂಸ್ಕೃತಿಕ ಸಾಧಕ ಲಾರೆನ್ಸ್ ಸಲ್ಡಾನ್ಹಾ ಅವರಿಗೆ ಕೊಂಕಣಿ ಸಂಗೀತ ಕ್ಷೇತ್ರದಲ್ಲಿನ ಅಪಾರ ಕೊಡುಗೆಯನ್ನು ಗುರುತಿಸಿ ಪ್ರತಿಷ್ಠಿತ ಪ್ರಥಮ ವಿಶ್ವ ಕೊಂಕಣಿ ಸಂಗೀತ ಶ್ರೇಷ್ಠತಾ ಪ್ರಶಸ್ತಿ ಪ್ರದಾನಿಸಿ ಗೌರವಿಸಲಾಯಿತು.

ಮಂಗಳೂರುನಲ್ಲಿನ ಕುದ್ಮುಲ್ ರಂಗರಾವ್ ಸ್ಮಾರಕ ಪುರಭವನದಲ್ಲಿ 'ಮಾಂಡ್ ಸೊಭಾಣ್' ಸಂಸ್ಥೆಯು 'ಮಾಂಡ್ ಸೊಭಾಣ್' ಸಂಸ್ಥಾಪಕ, ಕೊಂಕಣಿ ಹೋರಾಟಗಾರ ಸ್ವರ್ಗೀಯ ಎರಿಕ್ ಒಜಾರಿಯೊ ಅವರಿಗೆ ವಿಶೇಷ ಗೌರವಾಗಿ ಸಮರ್ಪಿತ (ನ.03ರಿಂದ ನ.15ರ ವರೆಗೆ 12 ದಿನಗಳು, 12 ಗಂಟೆಗಳು, 12 ನಿಮಿಷಗಳ ನಿರಂತರ ಗಾಯನ ಮ್ಯಾರಥಾನ್) ಪ್ರಥಮ ವಿಶ್ವ ಕೊಂಕಣಿ ಸಂಗೀತ ಮಹಾ ಸಮ್ಮೇಳನ ಐತಿಹಾಸಿಕ ಗಿನ್ನೆಸ್ ವಿಶ್ವ ದಾಖಲೆ ಕಾರ್ಯಕ್ರಮದ ಗೌರವ ಪ್ರದಾನ ಸಮಾರಂಭದಲ್ಲಿ (ಕಳೆದ ಶನಿವಾರ) ಕರ್ನಾಟಕ ವಿಧಾನ ಪರಿಷತ್ತ್‌ನ ಸದಸ್ಯ (ಎಂಎಲ್‌ಸಿ) ಐವನ್ ಡಿಸೋಜಾ, ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಜೋಕಿಂ ಸ್ಟ್ಯಾನಿ ಆಲ್ವಾರಿಸ್, ಮಾಂಡ್ ಸೊಭಾಣ್ ಅಧ್ಯಕ್ಷ ಲೂಯಿಸ್ ಜೆ.ಪಿಂಟೊ, ಮಾಂಡ್ ಸೊಭಾಣ್ ಕಲಾಂಗಣ್‌ನ ಪಿರ್ಜೆಂತ್ ರೋಯ್ ಕ್ಯಾಸ್ತೆಲಿನೋ, ಸಮಾವೇಶದ ಸಂಚಾಲಕಿ ಐರಿನ್ ರೆಬೆಲ್ಲೊ ಮತ್ತಿತರ ಗಣ್ಯರು ಉಪಸ್ಥಿತರಿದ್ದು ಲಾರೆನ್ಸ್ ಸಲ್ಡಾನ್ಹಾ ಅವರಿಗೆ ಶಾಲು ಹೊದಿಸಿ, ಫಲಪುಷ್ಪ, ಪ್ರಶಸ್ತಿ ಪತ್ರ, ಸ್ಮಮಣಿಕೆ ಫಲಕ ಪ್ರದಾನಿಸಿ ಗೌರವಿಸಿ ಅಭಿನಂದಿಸಿದರು.

1969ರಲ್ಲಿ ಆಕಾಶವಾಣಿಯ ಸಂಗೀತ ಕಾರ್ಯಕ್ರಮದ ಮೂಲಕ ಲಾರೆನ್ಸ್ ಸಲ್ಡಾನ್ಹಾ ತನ್ನ ಸಂಗೀತ ಪಯಣ ಆರಂಭಿಸಿದ ಅವರು 1978, 1979 ಹಾಗೂ 1984ರಲ್ಲಿ ದೂರದರ್ಶನದ ಕಾರ್ಯಕ್ರಮಗಳಲ್ಲಿಯೂ ಭಾಗವ ಹಿಸಿ ಕೊಂಕಣಿ ಸಂಗೀತವನ್ನು ವಿಶಾಲ ಪ್ರೇಕ್ಷಕ ವಲಯಕ್ಕೆ ಪರಿಚಯಿಸಿದ್ದಾರೆ. ಭಾರತ ಹಾಗೂ ವಿದೇಶಗಳಲ್ಲಿ 35ಕ್ಕೂ ಹೆಚ್ಚು 'ಲಾರೆನ್ಸ್ ಸಾಲ್ಡಾನ್ಹ ನೈಟ್' ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿರುವ ಅವರು, 800ಕ್ಕೂ ಹೆಚ್ಚು ಕೊಂಕಣಿ ಗೀತೆಗಳು ಹಾಗೂ ತುಳು, ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ 100ಕ್ಕೂ ಹೆಚ್ಚು ಹಾಡುಗಳನ್ನು ರಚಿಸಿ ಸಂಗೀತ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆ ನೀಡಿದ್ದಾರೆ. ಅಲ್ಲದೆ,14 ಸಂಗೀತ ಆಲ್ಬಂಗಳನ್ನು ಬಿಡುಗಡೆ ಗೊಳಿಸಿದ್ದು, ಪೊದಾಂಚೊ ಶಿವೊರ್ ಕೃತಿಯ ಮೂಲಕವೂ ತಮ್ಮ ಸಾಹಿತ್ಯಿಕ ಅಭಿರುಚಿಯನ್ನು ಮೆರೆದಿದ್ದಾರೆ ಎಂದು ಕೊಂಕಣಿ ಸಂಗೀತದ ಬೆಳವಣಿಗೆ, ಸಂರಕ್ಷಣೆ ಹಾಗೂ ಪ್ರಚಾರಕ್ಕಾಗಿ ಹಲವು ದಶಕಗಳಿಂದ ಸಲ್ಲಿಸಿರುವ ನಿಸ್ವಾರ್ಥ ಸೇವೆಯನ್ನು ಗುರುತಿಸಿ ಅವರಿಗೆ ಈ ಗೌರವ ಸಂದಿರುವುದು ಕೊಂಕಣಿ ಸಂಗೀತ ಕ್ಷೇತ್ರಕ್ಕೆ ಹೆಮ್ಮೆಯ ಸಂಗತಿಯಾಗಿದೆ ಎಂದು ಸಂಘಟಕರು ತಿಳಿಸಿದರು.

ಮಾಂಡ್ ಸೊಭಾಣ್ ಕಲಾಂಗಣ್‌ನ ಮುಂಬಯಿ ಪ್ರಾದೇಶಿಕ ಪ್ರತಿನಿಧಿ ಲಿಯೋ ಫೆರ್ನಾಂಡಿಸ್ ಜೆರಿಮೆರಿ (ಕೊಂಕಣ್ ಅಸೋಸಿಯೇಶನ್ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ) ತಂಡಗಳ ಸಂಯೋಜಕರಾಗಿದ್ದು, ಗಾಯನ ಮ್ಯಾರಥಾನ್‌ನಲ್ಲಿ ಮಹಾರಾಷ್ಟ್ರದ್ಯಾಂತ ಪುಣೆ, ಮುಂಬಯಿಯ ಸಮೂಹಗಳು ಭಾಗವಹಿಸಿದ್ದವು. ಕೊಂಕಣಿ ಸಭಾ ಮುಲುಂಡ್ ಮುಂಬಯಿ, ಮಾಣಿಕ್ ಗಾವ್ವಿ ಮಿರಾರೋಡ್, ಮೆಲೋಡೀಸ್ ಆಫ್ ಸಿ.ಅಲ್ವಾರೆಸ್ ಬಾಂದ್ರಾ (ಮುಂಬಯಿ), ಸ್ವರಾಂಜಲಿ ಮಾಲ್ವಾನಿ ಮಲಾಡ್, ಪೊರ್ಜೊಳ್ಳಿಂ ತಾರಾಂ ಮರೋಲ್, ಕೊಂಕಣ್ ತಾರಾಂ ಜೆರಿಮೆರಿ, ಕೊಂಕಣಿ ಕಾಳ್ಜಾಂ ಸಾಕಿನಾಕಾ, ವಸಾಯಿ ಕೊಂಕಣಿ ವೆಲ್ಪೇರ್ ಅಸೋಸಿಯೇಶನ್, ಸ್ವರ್'ಮೇಳ್ ಸೇಕ್ರೆಡ್ ಹಾರ್ಟ್ ಅಂಧೇರಿ ಪೂರ್ವ, ಕೊಂಕಣ್ ಅಸೋಸಿಯೇಶನ್ ಟ್ರಸ್ಟ್ ಮುಂಬಯಿ, ಉರ್ಭೆಸ್ತ್ ಕಲಾಕಾರ್ ಬೋರಿವಿಲಿ, ವಾಕೋಲಾಚೊ ತಾಳೊ ಮತ್ತು ಮಂಗ್ಳೂರಿಯನ್ ಕ್ಯಾಥೋಲಿಕ್ ಅಸೋಸಿಯೇಶನ್ ಪುಣೆ ತಂಡಗಳು ಭಾಗವಹಿಸಿ ಸಂಗೀತವನ್ನು ಪ್ರಸ್ತುತ ಪಡಿಸಿದವು.

ನ.22; ಅಹಮದಾಬಾದ್ ಬಂಟ್ಸ್ ಸಂಘದ ತ್ರಯೋದಶತ್ರಿಮಂಶೋತ್ಸವ, ಮಹಾಸಭೆ



■ ಎಡದಿಂದ: ಅಜಿತ್ ಹೆಗ್ಗಡೆ – ಶಶಿ ಶೆಟ್ಟಿ – ಚದ್ರಮೋಹನ್ ಎನ್. ಶೆಟ್ಟಿ – ವಿಜಯ್‌ಕುಮಾರ್ ಕೊಡಿಯಾಲ್‌ಬೈಲ್ – ಶಂಕರ್ ಶೆಟ್ಟಿ – ರಾಧಾಕೃಷ್ಣ ಶೆಟ್ಟಿ – ನವೀನ್ ಶೆಟ್ಟಿ – ನಿತೇಶ್ ಶೆಟ್ಟಿ – ಕಿರಣ್ ಶೆಟ್ಟಿ – ಪ್ರಶಾಂತ್ ನಾಯ್ಕ್

ಗುಜರಾತ್ (ಅಹಮದಾಬಾದ್), ನ.10: ಗುಜರಾತ್ ರಾಜ್ಯದಲ್ಲಿನ ತುಳು–ಕನ್ನಡಿಗರ ಪ್ರತಿಷ್ಠಿತ ಸಂಘಟನೆಗಳಲ್ಲಿ ಒಂದಾದ ಅಹಮದಾಬಾದ್ ಬಂಟ್ಸ್ ಸಂಘವು ತನ್ನ 33ನೇ ವಾರ್ಷಿಕೋತ್ಸವ (ತ್ರಯೋದಶತ್ರಿಮಂಶೋತ್ಸವ) ಹಾಗೂ ವಾರ್ಷಿಕ ಮಹಾಸಭೆಯನ್ನು ಇದೇ 2026ರ ನವೆಂಬರ್ 22ನೇ ಆದಿತ್ಯವಾರ ಮಧ್ಯಾಹ್ನ 02:00 ಗಂಟೆಯಿಂದ ಅಹಮದಾಬಾದ್‌ನ ಶಾಹೀಬಾಗ್‌ನಲ್ಲಿರುವ ಸರ್ಕಿಟ್ ಹೌಸ್ ಎದುರಿನ ಗಾಂಧಿ–ಸರ್ದಾರ್ ಸ್ಮೃತಿ ಚೌಕ್ ಪಕ್ಕದ ಸರ್ದಾರ್ ಪಟೇಲ್ ಸಭಾಂಗಣದಲ್ಲಿ ಸಾಂಸ್ಕೃತಿಕ ಮತ್ತು ಸಾಮಾಜಿಕ ಕಾರ್ಯಕ್ರಮ ಗಳೊಂದಿಗೆ ವಿಜೃಂಭಣೆಯಿಂದ ಜರುಗಿಸಲಿದೆ. ಈ ಮೊದಲು ಸಂಘದ ವಾರ್ಷಿಕ ಮಹಾಸಭೆ ನಡೆಸಲಾಗುವುದು ಎಂದು ಎಬಿಎಸ್ ಇದರ ಪದಾಧಿಕಾರುಗಳು ತಿಳಿಸಿದ್ದಾರೆ.

ಅಹಮದಾಬಾದ್ ಬಂಟ್ಸ್ ಸಂಘದ ಅಧ್ಯಕ್ಷ ನಿತೇಶ್ ಎಸ್.ಶೆಟ್ಟಿ ಶಿರ್ವಾಕೋಡು ಅಧ್ಯಕ್ಷತೆಯಲ್ಲಿ ನಡೆಯಲಿರು ವ ಸಾಂಸ್ಕೃತಿಕ ಮಹೋತ್ಸವದಲ್ಲಿ ಪುಣೆ ಬಂಟ್ಸ್ ಸಂಘದ ಅಧ್ಯಕ್ಷ (ರಾಯಲ್ ಸಿಂಫನಿ ಹೋಟೆಲ್ಸ್ ಪ್ರೈವೇಟ್ ಲಿಮಿಟೆಡ್‌ನ ಸಿಎಂಡಿ) ಕೆಂಜಾರುಗುತ್ತು ಅಜಿತ್ ಹೆಗ್ಡೆ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ.

ವಿಶೇಷ ಆಹ್ವಾನಿತರಾಗಿ ಬರೋಡಾ ತುಳುಸಂಘದ ಅಧ್ಯಕ್ಷ ಶಶಿಧರ್ ಬಿ.ಶೆಟ್ಟಿ (ಬರೋಡಾ), ಆಯುರ್ವೇದ ವೈದ್ಯ ಹಾಗೂ ಲೈಫ್‌ಸ್ಟೈಲ್ ಡಿಸಾರ್ಡರ್ ಕನ್ಸಲ್ಟೆಂಟ್‌ನ ಡಾ। ಚಂದ್ರಮೋಹನ್ ಶೆಟ್ಟಿ ಹಾಗೂ ಕಲಾ ಸಂಗಮದ ನಿರ್ದೇಶಕ ವಿಜಯಕುಮಾರ್ ಕೊಡಿಯಾಲ್‌ಬೈಲ್ ಆಗಮಿಸಲಿದ್ದಾರೆ. ಗೌರವಾನ್ವಿತ ಅತಿಥಿಗಳಾಗಿ ಅಂಕೇಶ್ವರ ತುಳು ಸಂಘದ ಅಧ್ಯಕ್ಷ ಶಂಕರ ಶೆಟ್ಟಿ ಸೂರತ್, ಕರ್ನಾಟಕ ಸಮಾಜದ ಅಧ್ಯಕ್ಷ (ರಾಧಾಕೃಷ್ಣ ಗ್ರೂಪ್ ಆಫ್ ಹೋಟೆಲ್ಸ್‌ನ ವ್ಯವಸ್ಥಾಪಕ ನಿರ್ದೇಶಕ) ರಾಧಾಕೃಷ್ಣ ಟಿ.ಶೆಟ್ಟಿ ಮತ್ತು ತುಳುನಾಡ ಐಸಿರಿ ಅಧ್ಯಕ್ಷ ನವೀನ್ ಶೆಟ್ಟಿ ಹೇರೂರು ಭಾಗವಹಿಸಲಿದ್ದಾರೆ.


ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಿ ಅಂದು ಮಧ್ಯಾಹ್ನ 2:00 ಗಂಟೆಯಿಂದ ಅಹಮದಾಬಾದ್ ಬಂಟ್ಸ್ ಸಂಘದ ಸದಸ್ಯರು, ಮಕ್ಕಳು, ಮಹಿಳೆಯರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರಸ್ತುತ ಪಡಿಸಲಿದ್ದಾರೆ. ಸಂಜೆ 4:30 ಗಂಟೆಯಿಂದ ಸಭಾ ಕಾರ್ಯಕ್ರಮ, ಸಂಜೆ 7:00 ಗಂಟೆಯಿಂದ ಪ್ರಶಸ್ತಿ ವಿಜೇತ ತುಳು ನಾಟಕ 'ಶಿವದೂತೆ ಗುಳಿಗೆ' ಪ್ರದರ್ಶನ ರಾತ್ರಿ 9:30 ಗಂಟೆಯಿಂದ ಸ್ನೇಹಕೂಟ ಭೋಜನ ನಡೆಸಲಾಗುವುದು. ಸಾಂಸ್ಕೃತಿಕ ವೈಭವವಾಗಿಸಿ, ನಾಡಿನ ಪ್ರತಿಷ್ಠಿತ ಮತ್ತು ಪ್ರಶಸ್ತಿ ವಿಜೇತ ರಂಗಕರ್ಮಿ ವಿಜಯಕುಮಾರ್ ಕೊಡಿಯಾಲ್‌ಬೈಲ್ ರಚನೆ ಮತ್ತು ನಿರ್ದೇಶನದಲ್ಲಿ ತುಳುನಾಡಿನ ದೈವಿಕ ಹಾಗೂ ರಕ್ಷಕ ಶಕ್ತಿಯಾದ ಗುಳಿಗೆ ದೈವದ ಹಿನ್ನೆಲೆಯಲ್ಲಿ ಮೂಡಿಬಂ ಗಿನ್ನೆಸ್ ವಿಶ್ವದಾಖಲೆಯ ಸಿದ್ಧತೆಯ 'ಶಿವದೂತೆ ಗುಳಿಗೆ' ತುಳು ನಾಟಕವನ್ನು ಕಲಾ ಸಂಗಮ ಕಲಾವಿದರು ಪ್ರದರ್ಶಿಸಲಿದ್ದಾರೆ.

ನಮ್ಮ ಟಿವಿ ಇದರ ಪ್ರಸಿದ್ಧ ಅಂತರರಾಷ್ಟ್ರೀಯ ಮಟ್ಟದ ತುಳು ವಕ್ತಾರ ನವೀನ್‌ಕುಮಾರ್ ಶೆಟ್ಟಿ ಎಡ್ಮೆಮಾರ್ ಕಾರ್ಯಕ್ರಮದ ನಿರೂಪಿಸಲಿದ್ದಾರೆ.

ವಾರ್ಷಿಕವಾಗಿ ಹಮ್ಮಿಕೊಳ್ಳಲಾಗಿ ರುವ ಈ ಅರ್ಥಪೂರ್ಣ ಕಾರ್ಯಕ್ರಮಕ್ಕೆ ಬಂಟ್ಸ್ ಸಂಘದ ಸದಸ್ಯರು, ಬಂಟ ಬಾಂಧವರು ಹಾಗೂ ಹಿತೈಷಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿ ಗೊಳಿಸಬೇಕೆಂದು ಅಹಮದಾಬಾದ್ ಬಂಟ್ಸ್ ಸಂಘದ ಕಾರ್ಯದರ್ಶಿ ಕಿರಣ್ ಶೆಟ್ಟಿ, ಕೋಶಾಧಿಕಾರಿ ಪ್ರಶಾಂತ್ ನ್ಯಾಕ್ ಮತ್ತು ಪದಾಧಿಕಾರಿಗಳು ಸಮಸ್ತ ಬಾಂಧವರನ್ನು ಪ್ರೀತಿಯಿಂದ ಆಹ್ವಾನಿಸಿದ್ದಾರೆ.

ಅಹಮದಾಬಾದ್ ಬಂಟ್ಸ್ ಸಂಘವು ಸದಾ ಪರಿಸರ ಸಂರಕ್ಷಣೆ, ಜಲ ರಕ್ಷಣೆ ಇದ್ಯಾದಿ ವಿಶೇಷ ಕಾಳಜಿಯೊಂದಿಗೆ ಸೇವಾ ನಿರತ ಈ ಸಂಘವು ಸ್ಥಾನೀಯವಾಗಿ ಒಳನಾಡ ಜನತೆಯ ಸೇವೆಯಲ್ಲಿ ಆಪದ್ಬಾಂವರಾಗಿ ಶ್ರಮಿಸುತ್ತಿದೆ. ಪ್ರಸ್ತುತ ಅಧ್ಯಕ್ಷ ನಿತೇಶ್ ಎಸ್.ಶೆಟ್ಟಿ ಶಿರ್ವಾಕೋಡು ತನ್ನ ದಕ್ಷ ಸಾರಥ್ಯದಲ್ಲಿ (ಸಂಘದ ಸ್ಥಾಪಕ ಅಧ್ಯಕ್ಷ ಬಿಎಸ್‌ಎ ಸಂಸ್ಥಾಪಕ ಅಧ್ಯಕ್ಷ ಸಂಜೀವ ಶೆಟ್ಟಿ ಅಜೆಕಾರ್ ಇವರ ಸುಪುತ್ರ) ಈ ಸಂಘವನ್ನು ಮುನ್ನಡೆಸುತ್ತಿದ್ದಾರೆ. ಸಂಘದ ಉಪಾಧ್ಯಕ್ಷರಾಗಿ ರವಿರಾಜ್ ಎಂ.ಶೆಟ್ಟಿ ಮತ್ತು ಶಕುಂತಲಾ ಐ.ಶೆಟ್ಟಿ, ಕಾರ್ಯದರ್ಶಿ ಕಿರಣ್ ಶೆಟ್ಟಿ ವಾಮಂಜೂರು, ಕೋಶಾಧಿಕಾರಿ ಪ್ರಶಾಂತ್ ನ್ಯಾಕ್, ಜೊತೆ ಕಾರ್ಯದರ್ಶಿ ಸಂತೋಷ್ ಶೆಟ್ಟಿ, ಜೊತೆ ಕೋಶಾಧಿಕಾರಿ ದೇವಿಪ್ರಸಾದ್ ಡಿ.ಶೆಟ್ಟಿ ಹಾಗೂ ಸಂಯೋಜನಾ ಕಾರ್ಯದರ್ಶಿ ರವೀಂದ್ರ ಕೆ.ಶೆಟ್ಟಿ ಪದಾಧಿಕಾರಿಗಳಾಗಿ ಸಾಥ್ ನೀಡುತ್ತಿದ್ದಾರೆ. ಅಂತೆಯೇ ಕಾರ್ಯಕಾರಿ ಸಮಿತಿ ಸದಸ್ಯರುಗಳಾಗಿ ಸುರೇಶ್ ಎನ್.ಶೆಟ್ಟಿ, ಅಪ್ಪು ಎ.ಶೆಟ್ಟಿ, ವಸಂತಕುಮಾರ್ ಶೆಟ್ಟಿ ಬಾಳೆಬೈಲು, ಕಟಪಾಡಿ (ಇತ್ತೀಚೆಗೆ ನಿಧನರಾದರು), ಸುದರ್ಶನ್ ಡಿ.ಶೆಟ್ಟಿ, ಪ್ರಶಾಂತ್ ಎಸ್.ಶೆಟ್ಟಿ, ಅಶೋಕ್ ಎಲ್.ಶೆಟ್ಟಿ, ಪ್ರಕಾಶ್ ಬಿ.ಶೆಟ್ಟಿ, ಸರೋಜಾ ಎಸ್.ಶೆಟ್ಟಿ, ಸುಹಾಸ್ ಬಿ.ಶೆಟ್ಟಿ, ದಿನೇಶ್ ಶೆಟ್ಟಿ, ಸುರೇಶ್ ಶೆಟ್ಟಿ, ಪ್ರವೀಣ್ ಶೆಟ್ಟಿ, ಜಗನ್ನಾಥ ಶೆಟ್ಟಿ, ವಿಶೇಷ ಆಮಂತ್ರಿತ ಪುರುಷೋತ್ತಮ ಶೆಟ್ಟಿ, ಮಾಜಿ ಅಧ್ಯಕ್ಷರಾದ ಸುಧಾಕರ ಎಸ್.ಶೆಟ್ಟಿ, ಜಯರಾಮ ಪಿ.ಶೆಟ್ಟಿ, ಅಪ್ಪು ಪಿ.ಶೆಟ್ಟಿ ಸೇವಾ ನಿರತರಾಗಿದ್ದಾರೆ.

ಆಕ್ಸ್‌ಫರ್ಡ್ ವಿವಿಯಿಂದ 39 ನಾಗಾಗಳ ಅವಶೇಷ ಭಾರತಕ್ಕೆ ಹಸ್ತಾಂತರ



ಆಕ್ಸ್‌ಫರ್ಡ್ (ಯು.ಕೆ.), ನ.10: ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಒಂದು ಶತಮಾನಕ್ಕೂ ಹೆಚ್ಚು ಕಾಲ ತನ್ನ 'ಪಿಟ್ ರಿವರ್ಸ್ ಮ್ಯೂಸಿಯಂ'ನಲ್ಲಿ ಇಟ್ಟುಕೊಂಡಿದ್ದ ನಾಗಾ ಸಮುದಾಯದ 39 ವ್ಯಕ್ತಿಗಳ ಅವಶೇಷಗಳನ್ನು ಐತಿಹಾಸಿಕ ಮರಳಿಸುವಿಕೆಯ (repatriation) ಉಪಕ್ರಮದ ಭಾಗವಾಗಿ ಭಾರತಕ್ಕೆ ಹಿಂದಿರುಗಿಸಿದೆ.

ಸೋಮವಾರ ವಸ್ತುಸಂಗ್ರಹಾಲಯದಲ್ಲಿ ನಡೆದ ಸಮಾರಂಭದಲ್ಲಿ, ಈ ಅವಶೇಷಗಳನ್ನು 'ಫೋರಮ್ ಫಾರ್ ನಾಗಾ ರಿಕನ್ಸಿಲಿಯೇಶನ್' (ಎಫ್‌ಎನ್‌ಆರ್) ಮತ್ತು ನಾಗಾ ಟ್ರೈಬ್ ಹೋಹೋ ಸಂಸ್ಥೆಗಳಿಗೆ ಅಧಿಕೃತವಾಗಿ ಹಸ್ತಾಂತರಿಸಲಾಯಿತು.

ಈ ಹಸ್ತಾಂತರಕ್ಕೆ ಸಂಬಂಧಿಸಿದ ದಾಖಲೆಗಳಿಗೆ ಪಿಟ್ ರಿವರ್ಸ್ ಮ್ಯೂಸಿಯಂನ ನಿರ್ದೇಶಕಿ ಪ್ರೊಫೆಸರ್ ಲಾರಾ ವ್ಯಾನ್ ಬ್ರೋಕ್‌ಹೋವನ್ ಮತ್ತು FNR ಪ್ರತಿನಿಧಿ ರೆವರೆಂಡ್ ಡಾ. ವಾಟಿ ಐಯರ್ ಸಹಿ ಹಾಕಿದರು.

ಈಓಖ ಪರವಾಗಿ ವಿಸಿಯರ್ ಸನ್ಯು ಮತ್ತು ನಾಗಾ ಟ್ರೈಬ್ ಹೋಹೋ ಪರವಾಗಿ ತೇಜಾವೊ ವಿಹಿಯೆನುವೊ ಈ ಪ್ರಕ್ರಿಯೆಗೆ ಸಾಕ್ಷಿಯಾದರು.

FNR ಮಂಗಳವಾರ ಬಿಡುಗಡೆ ಮಾಡಿದ ಹೇಳಿಕೆಯ ಪ್ರಕಾರ, ಹಸ್ತಾಂತರದ ನಂತರ, ಈ ಪೂರ್ವಜರ ಅವಶೇಷಗಳನ್ನು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಿಂದ ನಾಗಾಲ್ಯಾಂಡ್‌ಗೆ ಕೊಂಡೊಯ್ಯುವ ಪ್ರಯಾಣಕ್ಕಾಗಿ ಸ್ಥಳಾಂತರಿಸಲಾಯಿತು.

1884ರಲ್ಲಿ ಸ್ಥಾಪನೆಯಾದ ಪಿಟ್ ರಿವರ್ಸ್ ಮ್ಯೂಸಿಯಂ, ಪ್ರಪಂಚದ ವಿವಿಧ ಭಾಗಗಳಿಂದ ಸಂಗ್ರಹಿಸಲಾದ ಸಾಂಸ್ಕೃತಿಕ ಕಲಾಕೃತಿಗಳನ್ನು ಹೊಂದಿದೆ; ಈ ಅವಶೇಷಗಳು ಕೂಡ ಅಲ್ಲಿನ ಸಂಗ್ರಹದ ಭಾಗವಾಗಿದ್ದವು.

ಸಮಾರಂಭದಲ್ಲಿ ಮಾತನಾಡಿದ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊಫೆಸರ್ ಐರೀನ್ ಟ್ರೇಸಿ, ಈ ಹಸ್ತಾಂತರವನ್ನು ವಿಶ್ವವಿದ್ಯಾಲಯ ಮತ್ತು ನಾಗಾ ಜನರ ನಡುವಿನ ಸಂಬಂಧದಲ್ಲಿನ ಒಂದು ಐತಿಹಾಸಿಕ ಕ್ಷಣ ಎಂದು ಬಣ್ಣಿಸಿದರು.

ಈ ಉಪಕ್ರಮ ಸಮುದಾಯದ ನೇತೃತ್ವದಲ್ಲಿ ನಡೆದ ಸಾಮರಸ್ಯ, ನೋವು ನಿವಾರಣೆ (healing) ಮತ್ತು ಶಾಂತಿಯ ಪ್ರಯತ್ನವನ್ನು ಪ್ರತಿಬಿಂಬಿಸುತ್ತದೆ ಎಂದು ಅವರು ಹೇಳಿದುದಾಗಿ ಆ ಹೇಳಿಕೆ ತಿಳಿಸಿದೆ.

ಸನ್ಯು ಅವರು ನಾಗಾ ಸಮುದಾಯಗಳ ಮೇಲೆ ಬ್ರಿಟಿಷ್ ವಸಾಹತುಶಾಹಿ ಹಿಂಸಾಚಾರ ಬೀರಿದ ಪರಿಣಾಮಗಳ ಬಗ್ಗೆ ಮಾತನಾಡಿದರು ಮತ್ತು ವಸಾಹತುಶಾಹಿ ಪಡೆಗಳು ತಮ್ಮ ಸ್ವಂತ ಹಳ್ಳಿಯನ್ನೇ ಹೇಗೆ ಸುಟ್ಟುಹಾಕಿದ್ದವು ಎಂಬುದನ್ನು ವಿವರಿಸಿದರು. ಕ್ಷಮೆ ಮತ್ತು ಸಾಮರಸ್ಯದ ಮಹತ್ವವನ್ನು ಒತ್ತಿಹೇಳಿದ ಅವರು, ದಿವಂಗತ ನಾಗಾ ಶಾಂತಿ ಕಾರ್ಯಕರ್ತ ನಿಕೆತು ಇರಲು ಅವರ ಮಾತುಗಳನ್ನು ಉಲ್ಲೇಖಿಸುತ್ತಾ, ರೂಪಾಂತರಗೊಳ್ಳದ ದ್ವೇಷವು (ಒಬ್ಬರಿಂದ ಇನ್ನೊಬ್ಬರಿಗೆ) ವರ್ಗಾವಣೆಯಾಗುತ್ತದೆ" ಎಂದು ಹೇಳಿದರು.

ಡ್ರೋನ್ ಮೂಲಕ ಹೆರಾಯಿನ್–ಶಸ್ತ್ರಾಸ್ತ್ರ ಕಳ್ಳಸಾಗಣೆ, ನಾಲ್ವರ ಬಂಧನ

5 ಪಿಸ್ತೂಲ್, 100 ಗ್ರಾಂ ಹೆರಾಯಿನ್, ಹಣ ಹಾಗೂ ಕಾರು ವಶ

ಅಮೃತಸರ, ನ.10: ದೇಶದ ಯುವ ಸಮುದಾಯವನ್ನು ದುಶ್ಚಟಗಳ ಕೂಪಕ್ಕೆ ತಳ್ಳುವ ಹಾಗೂ ರಾಷ್ಟ್ರೀಯ ಭದ್ರತೆಗೆ ಸವಾಲಾಗಿರುವ ಮತ್ತೊಂದು ಗಡಿಯಾಚೆಗಿನ ಕರಾಳ ಜಾಲವನ್ನು ಪಂಜಾಬ್ ಪೊಲೀಸರು ಭೇದಿಸಿದ್ದಾರೆ.

ಪಾಕಿಸ್ತಾನ ಮೂಲದ ಹ್ಯಾಂಡ್ಲರ್‌ಗಳ ಸೂಚನೆಯಂತೆ ಅಂತಾರಾಷ್ಟ್ರೀಯ ಗಡಿಯಿಂದ ಡ್ರೋನ್‌ಗಳ ಮೂಲಕ ಮಾರಕ ಹೆರಾಯಿನ್ ಹಾಗೂ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಕಳ್ಳಸಾಗಣೆ ಮಾಡುತ್ತಿದ್ದ ನಾಲ್ವರು ಆರೋಪಿಗಳನ್ನು ಎನ್‌ಡಿಪಿಎಸ್ ಹಾಗೂ ಶಸ್ತ್ರಾಸ್ತ್ರ ಕಾಯ್ದೆಯಡಿ ಪಂಜಾಬಿನ ಮೊಹಾಲಿ ಪೊಲೀಸರು ಬಂಧಿಸಿದ್ದಾರೆ.



ಪಂಜಾಬ್‌ನ ಫಿರೋಜಪುರ ಜಿಲ್ಲೆಯ ಮನ್‌ಪ್ರೀತ್ ಸಿಂಗ್ (23), ಸುನಿಲ್ ಅಲಿಯಾಸ್ ಸನ್ನಿ (26), ಗುರ್‌ಪ್ರೀತ್ ಸಿಂಗ್ ಅಲಿಯಾಸ್ ಗುರಿ (24), ಸುಖ್‌ಚೈನ್ ಸಿಂಗ್ ಅಲಿಯಾಸ್ ಸುಖಾ (23) ಬಂಧಿತರು. ಕಾರ್ಯಾಚರಣೆ ವೇಳೆಯಲ್ಲಿ 5 ಅತ್ಯಾಧುನಿಕ ಪಿಸ್ತೂಲ್‌ಗಳು, 100 ಗ್ರಾಂ ಹೆರಾಯಿನ್, 1 ಲಕ್ಷ ಹಣ, ಕೃತ್ಯಕ್ಕೆ ಬಳಸಲಾದ 1 ಕಾರನ್ನು ವಶಪಡಿಸಿಕೊಳ್ಳಲಾಗಿದೆ.

ನಿರುದ್ಯೋಗ ಹಾಗೂ ಬಡತನದ ಅಂಚಿನಲ್ಲಿರುವ ಯುವಕರನ್ನು ದುರ್ಬಳಕೆ ಮಾಡಿಕೊಂಡು, ದೇಶದಲ್ಲಿ ಅಶಾಂತಿ ಸೃಷ್ಟಿಸಲು ಕೆಲವು ಶಕ್ತಿಗಳು ನಡೆಸುತ್ತಿರುವ ಕೃತ್ಯಕ್ಕೆ ಈ ಪ್ರಕರಣ ಮತ್ತೊಂದು ಉದಾಹರಣೆಯಾಗಿದೆ. ಗಡಿಯಾಚೆಯಿಂದ ಡ್ರೋನ್ ಮೂಲಕ ನಿಗದಿತ ಸ್ಥಳಗಳಲ್ಲಿ ಬೀಳಿಸಲ್ಪಡುತ್ತಿದ್ದ ಅಕ್ರಮ ವಸ್ತುಗಳನ್ನು ಹೆಕ್ಕಿಕೊಂಡು, ಮೊಹಾಲಿ, ಚಂಡೀಗಢ ಹಾಗೂ ಸುತ್ತಮುತ್ತಲಿನ ಟ್ರೈಸಿಟಿ ಪ್ರದೇಶದ ಯುವಪೀಳಿಗೆಯನ್ನು ಗುರಿಯಾಗಿಸಿ ಪೂರೈಸಲಾಗುತ್ತಿತ್ತು. ನವೆಂಬರ್ 7ರಂದು ಖರಾರ್ ಪ್ರದೇಶದಲ್ಲಿ ಗಸ್ತು ತಿರುಗುತ್ತಿದ್ದ ವೇಳೆ ಸಿಕ್ಕ ಖಚಿತ ಮಾಹಿತಿಯ ಮೇರೆಗೆ ಪೊಲೀಸರು ಕಾರ್ಯಾಚರಣೆ ನಡೆಸಿದ್ದಾರೆ ಎನ್ನಲಾಗಿದೆ. ಖರಾರ್ ಪೊಲೀಸ್ ಠಾಣೆಯಲ್ಲಿ ಎನ್‌ಡಿಪಿಎಸ್ ಹಾಗೂ ಶಸ್ತ್ರಾಸ್ತ್ರ ಕಾಯ್ದೆಯಡಿ ಗಂಭೀರ ಪ್ರಕರಣ ದಾಖಲಿಸಲಾಗಿದೆ. ಸಮಾಜದ ಸ್ವಾಸ್ಥ್ಯವನ್ನು ಹಾಳುಮಾಡುವ ಇಂತಹ ಜಾಲಗಳ ಹಿಂದೆ ಇರುವ ದೊಡ್ಡ ಗಾತ್ರದ ಶಕ್ತಿಗಳು, ಕಾಣದ ಕೈಗಳು ಹಾಗೂ ಉಗ್ರ–ಅಪರಾಧ ನಂಟಿನ ಬಗ್ಗೆ ಸಮಗ್ರ ತನಿಖೆ ನಡೆಯಬೇಕಿದೆ. ಆರೋಪಿಗಳನ್ನು ನಾಲ್ಕು ದಿನಗಳ ಕಾಲ ಪೊಲೀಸ್ ವಶಕ್ಕೆ ಪಡೆದು ತೀವ್ರ ವಿಚಾರಣೆ ನಡೆಸಲಾಗುತ್ತಿದೆ.

ನ.21ರಿಂದ ಡಿ.11ರವರೆಗೆ ಅನ್ವಯ: ಸರ್ಕಾರ ಆದೇಶ

ದಂಡದ ಮೊತ್ತಕ್ಕೆ ಶೇ.50 ರಿಯಾಯಿತಿ: ವಾಹನ ಸವಾರರಿಗೆ ಮತ್ತೊಮ್ಮೆ ಅವಕಾಶ

ಬೆಂಗಳೂರು, ನ.10: ರಾಜ್ಯದ ವಾಹನ ಸವಾರರಿಗೆ ರಾಜ್ಯ ಸರ್ಕಾರ ಮತ್ತೊಮ್ಮೆ ಸಿಹಿಸುದ್ದಿ ನೀಡಿದೆ. ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ದಂಡದ ಮೊತ್ತವನ್ನು ಶೇ.50ರಷ್ಟು ರಿಯಾಯಿತಿಯೊಂದಿಗೆ ಪಾವತಿಸಲು ಅವಕಾಶ ನೀಡಿದ್ದು, ನವೆಂಬರ್ 21ರಿಂದ ಡಿಸೆಂಬರ್ 11ರವರೆಗೆ ಈ ರಿಯಾಯಿತಿ ಅನ್ವಯವಾಗಲಿದೆ.ರಾಜ್ಯದಲ್ಲಿ ಬಾಕಿ ಉಳಿದಿರುವ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ದಂಡ ಪಾವತಿಗೆ ಶೇ.50ರಷ್ಟು ರಿಯಾಯಿತಿ ನೀಡುವಂತೆ ಸರ್ಕಾರ ಆದೇಶ ಹೊರಡಿಸಿದೆ.

ಈ ಹಿಂದೆ ನೀಡಲಾಗಿದ್ದ ರಿಯಾಯಿತಿ ಸೌಲಭ್ಯವನ್ನು ಮತ್ತೊಮ್ಮೆ ವಿಸ್ತರಿಸುವಂತೆ ಕೋರಿ ಸಲ್ಲಿಕೆಯಾಗಿದ್ದ ಮನವಿಯನ್ನು ಪರಿಗಣಿಸಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಸಂಚಾರ ನಿಯಮ ಉಲ್ಲಂಘನೆಗಾಗಿ ವಿಧಿಸಲಾಗಿರುವ ಬಾಕಿ ದಂಡವನ್ನು ವಾಹನ ಸವಾರರು ನಿಗದಿತ ಅವಧಿಯಲ್ಲಿ ಶೇ.50ರಷ್ಟು ಮೊತ್ತ ಪಾವತಿಸುವ ಮೂಲಕ ಇತ್ಯರ್ಥಪಡಿಸಿಕೊಳ್ಳಬಹುದು. ಈ ಮೂಲಕ ದೀರ್ಘಕಾಲದಿಂದ ಬಾಕಿ ಉಳಿದಿರುವ ದಂಡದ ಪ್ರಕರಣಗಳನ್ನು ಕಡಿಮೆ ಮಾಡಲು ಸರ್ಕಾರ ಮುಂದಾಗಿದೆ.

ಹೀಗಾಗಿ, ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಲ್ಲಿ ದಂಡ ಬಾಕಿ ಉಳಿಸಿಕೊಂಡಿರುವ ವಾಹನ ಸವಾರರು ನವೆಂಬರ್ 21ರಿಂದ ಡಿಸೆಂಬರ್ 11ರೊಳಗೆ ರಿಯಾಯಿತಿ ಸೌಲಭ್ಯ ಬಳಸಿಕೊಂಡು ದಂಡ ಪಾವತಿಸಬಹುದು.

ದೀಪಾವಳಿ: ಬೆಂಗಳೂರಿನಾದ್ಯಂತ 150ಕ್ಕೂ ಹೆಚ್ಚು ಮಂದಿಗೆ ಗಾಯ



ಬೆಂಗಳೂರು, ನ.10: ದೀಪಾವಳಿ ಹಬ್ಬದ ಸಂಭ್ರಮ ಸಡಗರದ ನಡುವೆಯೇ ನಗರದಲ್ಲಿ ಪಟಾಕಿ ಸಿಡಿತದಿಂದಾಗಿ ಭಾರಿ ಪ್ರಮಾಣದ ಅವಘಡಗಳು ಸಂಭವಿಸಿವೆ. ಹಬ್ಬದ ಆಚರಣೆ ವೇಳೆ ಜಾಗರೂಕತೆ ತಪ್ಪಿದ್ದರಿಂದ ಇದುವರೆಗೂ ನಗರದಾದ್ಯಂತ 150ಕ್ಕೂ ಹೆಚ್ಚು ಜನರು ಗಂಭೀರವಾಗಿ ಗಾಯಗೊಂಡಿರುವ ಬಗ್ಗೆ ವರದಿಯಾಗಿದೆ.

ಪಟಾಕಿ ಸಿಡಿಸುವಾಗ ಗಾಯಗೊಂಡ ಸಂತ್ರಸ್ತರು ನಾರಾಯಣ ನೇತ್ರಾಲಯ, ಮಿಂಟೋ ಕಣ್ಣಿನ ಆಸ್ಪತ್ರೆ ಸೇರಿದಂತೆ ವಿವಿಧ ಪ್ರಮುಖ ಖಾಸಗಿ ಹಾಗೂ ಸರ್ಕಾರಿ ಆಸ್ಪತ್ರೆಗಳಿಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಗಾಯಗೊಂಡವರಲ್ಲಿ ಹಲವರು ಕೈ ಮತ್ತು ಕಾಲುಗಳಿಗೆ ತೀವ್ರ ಸ್ವರೂಪದ ಸುಟ್ಟಗಾಯಗಳನ್ನು ಮಾಡಿಕೊಂಡಿದ್ದರೆ, ಇನ್ನು ಹಲವರು ಕಣ್ಣಿನ ಭಾಗಕ್ಕೆ ಗಂಭೀರ ಗಾಯ ಮಾಡಿಕೊಂಡು ದೃಷ್ಟಿ ಕಳೆದುಕೊಳ್ಳುವ ಭೀತಿಯಲ್ಲಿದ್ದಾರೆ.

ಇನ್ನು ಸಂತ್ರಸ್ತರ ಪೈಕಿ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳೇ ಇರುವುದು ಆತಂಕಕ್ಕೆ ಕಾರಣವಾಗಿದೆ.

ಮತ್ತೊಂದೆಡೆ, ನಗರದಾದ್ಯಂತ ಪಟಾಕಿಗಳನ್ನು ವಿಪರೀತವಾಗಿ ಸಿಡಿಸಿರುವುದರಿಂದ ಬೆಂಗಳೂರಿನ ವಾಯುಮಾಲಿನ್ಯ ಪ್ರಮಾಣ ತೀವ್ರವಾಗಿ ಹೆಚ್ಚಾಗಿದ್ದು, ಗಾಳಿಯ ಗುಣಮಟ್ಟ ಕುಸಿದಿದೆ. ಹೊಗೆ ಹಾಗೂ ಮಾಲಿನ್ಯದಿಂದಾಗಿ ಸಾರ್ವಜನಿಕರು ಹಾಗೂ ಉಸಿರಾಟದ ಸಮಸ್ಯೆಯಿರುವವರು ಪರದಾಡುವಂತಾಗಿದೆ.

ಲಗೇಜ್ ಸಾಗಣೆ ಶುಲ್ಕವನ್ನೂ ಹೆಚ್ಚಿಸಿದ ಕೆಎಸ್‌ಆರ್‌ಟಿಸಿ: 20 ಕೆ.ಜಿ.ವರೆಗೆ ಅನ್ವಯಿಸಲ್ಲ

ಬೆಂಗಳೂರು, ನ.10: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ಸಂಚರಿಸುವ ಸಾರ್ವಜನಿಕರಿಗೆ ನಿಗಮವು ಮತ್ತೊಂದು ಆರ್ಥಿಕ ಹೊರೆ ನೀಡಿದೆ. ಇತ್ತೀಚೆಗಷ್ಟೇ ಟಿಕೆಟ್ ದರ ಪರಿಷ್ಕರಣೆ ಮಾಡಿದ್ದ ಸಾರಿಗೆ ಇಲಾಖೆ, ಇದೀಗ ಪ್ರಯಾಣಿ ಕರು ತಮ್ಮೊಂದಿಗೆ ಕೊಂಡೊಯ್ಯುವ ಲಗೇಜ್ (ಸಾಮಗ್ರಿ) ಸಾಗಣೆ ಶುಲ್ಕವನ್ನು ಭಾರಿ ಪ್ರಮಾಣದಲ್ಲಿ ಹೆಚ್ಚಿಸಿದ್ದು, ಪರಿಷ್ಕೃತ ದರಗಳು ಈಗಾಗಲೇ ಜಾರಿಗೆ ಬಂದಿವೆ. ನಿಗಮದ ಹೊಸ ನಿಯಮಾವಳಿ ಪ್ರಕಾರ, ಪ್ರತಿಯೊಬ್ಬ ಪ್ರಯಾಣಿಕನಿಗೆ ನಿಗದಿತ ಮಿತಿಯವರೆಗೆ ಮಾತ್ರ ಸಾಮಗ್ರಿಗಳನ್ನು ಉಚಿತವಾಗಿ ಕೊಂಡೊಯ್ಯಲು ಅವಕಾಶವಿರುತ್ತದೆ. 10 ಕೆಜಿಯಿಂದ 20 ಕೆಜಿ ತೂಕದವರೆಗಿನ ಲಗೇಜ್‌ಗೆ ಯಾವುದೇ ಶುಲ್ಕ ವಿಧಿಸದೆ ಉಚಿತ ಸಾಗಣೆಗೆ ಮುಂದುವರಿಯಲಿದೆ. ಆದರೆ, ಈ ನಿರ್ದಿಷ್ಟ ತೂಕದ ಮಿತಿಯನ್ನು ಮೀರಿದ ಯಾವುದೇ ಹೆಚ್ಚುವರಿ ಲಗೇಜ್‌ಗೆ ಪ್ರಯಾಣಿಕರು ಜೇಬಿನಿಂದ ದುಪ್ಪಟ್ಟು ಹಣ ತೆರಬೇಕಾಗುತ್ತದೆ.

ಪರಿಷ್ಕೃತ ದರಗಳ ವಿವರ (ಸ್ಟೇಜ್ ಆಧಾರದಲ್ಲಿ)

1ರಿಂದ 5ರವರೆಗೆ: 6ರೂ.ಗಳಿಂದ 10ರೂ.ಗೆ ಏರಿಕೆ
6ರಿಂದ 10ರವರೆಗೆ: 10 ರೂ.ನಿಂದ 15 ರೂ.ಗೆ ಏರಿಕೆ
11ರಿಂದ 15ರವರೆಗೆ: 20 ರೂ.ನಿಂದ 25ರೂ.ಗೆ ಏರಿಕೆ

ಸಾರ್ವಜನಿಕರಿಗೆ ತೊಂದರೆಯಾಗದಂತೆ ಕ್ರಮ: ಸಿಎಂ ಡಿ.ಕೆ. ಶಿವಕುಮಾರ್ ಭರವಸೆ

ಮೇಖ್ರಿ ಸರ್ಕಲ್-ಹೆಬ್ಬಾಳ ಕಾರಿಡಾರ್ ಕಾಮಗಾರಿ ವೇಳೆ ವಾಹನ ಸಂಚಾರಕ್ಕೆ ತಡೆ ಇಲ್ಲ



ಬೆಂಗಳೂರು, ನ.10: ನಗರದ ಸಂಚಾರ ದಟ್ಟಣೆ ನಿವಾರಿಸುವ ಉದ್ದೇಶದಿಂದ ಕೈಗೆತ್ತಿಕೊಳ್ಳಲಾಗಿರುವ ಮೇಖ್ರಿ ಸರ್ಕಲ್ –ಹೆಬ್ಬಾಳ ಸಮಗ್ರ ಕಾರಿಡಾರ್ ಯೋಜನಾ ಸ್ಥಳಕ್ಕೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪರಿಶೀಲನೆ ನಡೆಸಿದರು.

ಯೋಜನೆಯ ಕಾಮಗಾರಿ ವೇಳೆ ವಾಹನ ಸವಾರರಿಗೆ ಅನಗತ್ಯ ತೊಂದರೆಯಾಗದಂತೆ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದಲ್ಲಿ ಯಾವುದೇ ಅಭಿವೃದ್ಧಿ ಕಾಮಗಾರಿ ಕೈಗೊಂಡರೂ ಸಂಚಾರ ದಟ್ಟಣೆ ಪ್ರಮುಖ ಸಮಸ್ಯೆಯಾಗುತ್ತದೆ. ಹೀಗಾಗಿ ವಾಹನಗಳ ಸುಗಮ ಸಂಚಾರಕ್ಕೆ ಪರ್ಯಾಯ ರಸ್ತೆಗಳನ್ನು ಸಿದ್ಧಪಡಿಸುವಂತೆ ಬಿಡಿಎ ಅಧಿಕಾರಿಗಳಿಗೆ ಸೂಚಿಸಿದರು.

ಸಂಚಾರ ಪೊಲೀಸರು ಪ್ರತಿದಿನದ ಸಂಚಾರದ ಮಾಹಿತಿ ಮತ್ತು ನವೀಕರಣಗಳನ್ನು ಸಾರ್ವಜನಿಕರೊಂದಿಗೆ ಹಂಚಿಕೊಳ್ಳಬೇಕು. ವಾಹನ ಸಂಚಾರ ಸುಗಮವಾಗಿರುವಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದರು. ಸಾರ್ವಜನಿಕರಿಗೆ ತೊಂದರೆ ಯಾಗದಂತೆ ಯೋಜನೆಯ ಕಾಮಗಾರಿಯನ್ನು ಸುಗಮವಾಗಿ ಅನುಷ್ಠಾನಗೊಳಿಸಲು ಬಿಡಿಎ ಮತ್ತು ಸಂಚಾರ ಪೊಲೀಸರ ನಡುವೆ ಪರಿಣಾಮಕಾರಿ ಸಮನ್ವಯ ಇರಬೇಕು ಎಂದು ಹೇಳಿದರು. ಮೇಖ್ರಿ ವೃತ್ತದ ಬಳಿ ಉದ್ದೇಶಿತ ಮೇಲ್ಸೇತುವೆ ಹಾಗೂ ಸುರಂಗ ರಸ್ತೆ ಯೋಜನೆ ಕುರಿತು ಮಾತನಾಡಿದ ಅವರು, ಬೆಂಗಳೂರಿನ ಸಂಚಾರ ದಟ್ಟಣೆ ಸಮಸ್ಯೆ ಪರಿಹರಿಸಲು ಪರ್ಯಾಯ ಮಾರ್ಗಗಳನ್ನು ನಿರ್ಮಿಸುವುದು ಅನಿವಾರ್ಯವಾಗಿದೆ ಎಂದರು. ನಾವು ಮೇಲ್ಸೇತುವೆಗಳನ್ನು ನಿರ್ಮಿಸಬೇಕು ಅಥವಾ ಭೂಗತ ಸುರಂಗ ರಸ್ತೆಗಳನ್ನು ಮಾಡಬೇಕು. ಕಟ್ಟಡಗಳನ್ನು ಕೆಡವಿ ರಸ್ತೆಗಳನ್ನು ಅಗಲಗೊಳಿಸಲು ಸಾಧ್ಯವೇ ಎಂದು ಪ್ರಶ್ನಿಸಿದರು. ಮೇಖ್ರಿ ವೃತ್ತದ ಒಂದು ಮೂಲೆಯಲ್ಲಿ ರಕ್ಷಣಾ ಇಲಾಖೆಗೆ ಸೇರಿದ ಜಮೀನನ್ನು ನೀಡುವಂತೆ ರಕ್ಷಣಾ ಸಚಿವರಿಗೆ ಮನವಿ ಮಾಡಿರುವುದಾಗಿ ತಿಳಿಸಿದರು. ಆ ಜಮೀನು ಲಭ್ಯವಾದರೆ ನಗರದ ಸಂಚಾರ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆ ತರಲು ಸಾಧ್ಯವಾಗಲಿದೆ ಎಂದರು. ವೃತ್ತದೊಳಗೆ ಮತ್ತೊಂದು ವೃತ್ತ ಇರುವ ಮಾದರಿಯಲ್ಲಿ ವೃತ್ತಾಕಾರದ ಸಂಚಾರ ವ್ಯವಸ್ಥೆ ಹಾಗೂ ವರ್ತುಲ ಮಾರ್ಗವನ್ನು ರೂಪಿಸಲಾಗುವುದು ಎಂದು ವಿವರಿಸಿದರು.

ಲಾಲ್‌ಬಾಗ್ ಸುರಂಗ ರಸ್ತೆಗೆ ಪರ್ಯಾಯ ಯೋಜನೆ: ಲಾಲ್‌ಬಾಗ್ ಬಳಿ ಪ್ರವೇಶ ಮತ್ತು ನಿರ್ಗಮನ ಮಾರ್ಗ ಗಳನ್ನು ಹೊಂದಿರುವ ಸುರಂಗ ರಸ್ತೆ ಯೋಜನೆಗೆ ವಿರೋಧ ಮತ್ತು ಟೀಕೆಗಳು ವ್ಯಕ್ತವಾಗುತ್ತಿರುವ ಹಿನ್ನೆಲೆಯಲ್ಲಿ ಈ ಕುರಿತು ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ಇತ್ತೀಚೆಗೆ ಹೆಲಿಕಾಪ್ಟರ್‌ನಲ್ಲಿ ಪ್ರಯಾಣಿಸುವಾಗ ಸುರಂಗ ರಸ್ತೆ ಯೋಜನೆಯ ಸ್ಥಳವನ್ನು ಪರಿಶೀಲಿಸಿದ್ದಾಗಿ ತಿಳಿಸಿದರು. ಲಾಲ್‌ಬಾಗ್ ಸಮೀಪ ಸುರಂಗ ರಸ್ತೆ ಹಾದುಹೋಗುವ ಸ್ಥಳದಲ್ಲಿ ದೊಡ್ಡಕುಳಿ ಇದೆ. ಅಲ್ಲಿನ ಬಂಡೆ ಪ್ರದೇಶ ಮತ್ತು ಸುರಂಗ ರಸ್ತೆ ಹೊರಬರುವ ಸ್ಥಳದ ನಡುವೆ ಭೌಗೋಳಿಕ ವ್ಯತ್ಯಾಸವಿದೆ. ಈ ಹಿನ್ನೆಲೆಯಲ್ಲಿ ಯಾವುದೇ ಸಮಸ್ಯೆಗಳು ಎದುರಾಗದಂತೆ ಪರ್ಯಾಯ ಯೋಜನೆ ರೂಪಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ಪೊಲೀಸರ ದಾಳಿ ವೇಳೆ ನಿಷೇಧಿತ ಎಂಡಿಎಂಎ, ಗಾಂಜಾ ಪತ್ತೆ

ದೀಪಾವಳಿ ಸಂಭ್ರಮದ ಹೆಸರಲ್ಲಿ ಅಕ್ರಮ ಪಾರ್ಟಿ: ಮೂವರ ಬಂಧನ

ಬೆಂಗಳೂರು, ನ.10: ದೀಪಾವಳಿ ಸಂಭ್ರಮದ ಹೆಸರಿನಲ್ಲಿ ಖಾಸಗಿ ವಿಲ್ಲಾದಲ್ಲಿ ನಡೆಯುತ್ತಿದ್ದ ಅಕ್ರಮ ಹೈಟೆಕ್ ಪೂಲ್ ಪಾರ್ಟಿ ಮೇಲೆ ಸಿಸಿಬಿ ಪೊಲೀಸರು ದಾಳಿ ನಡೆಸಿ ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ.

ಈ ಕಾರ್ಯಾ ಚರಣೆ ವೇಳೆ ಎಂಡಿಎಂಎ, ಗಾಂಜಾ, ಮದ್ಯ ಹಾಗೂ ನಿಷೇಧಿತ ಹುಕ್ಕಾ ಬಳಕೆ ಮಾಡಿರುವುದು ಪತ್ತೆಯಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರನ್ನು ಬಂಧಿಸಲಾಗಿದೆ. ಮಾರತ್‌ಹಳ್ಳಿಯ ಯಮಲೂರಿನ ಕಾರಿಯಮ್ಮನ ಅಗ್ರಹಾರ ರಸ್ತೆಯಲ್ಲಿರುವ ಖಾಸಗಿ ವಿಲ್ಲಾದಲ್ಲಿ ಈ ಪಾರ್ಟಿ ಆಯೋಜಿಸಲಾಗಿತ್ತು.

ಅಗತ್ಯ ಅನುಮತಿ ಪಡೆಯದೆ ದೀಪಾವಳಿ ಆಚರಣೆ ಹೆಸರಿನಲ್ಲಿ ಪಾರ್ಟಿ ನಡೆಸಲಾಗುತ್ತಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ರಾತ್ರಿ 9 ಗಂಟೆಯಿಂದ ಬೆಳಗಿನಜಾವ 5 ಗಂಟೆಯವರೆಗೆ ಪಾರ್ಟಿ ನಡೆಯುತ್ತಿತ್ತು. ಪೊಲೀಸರ ಕಣ್ಣಿಗೆ ಬೀಳದಂತೆ ಭಾಗವಹಿಸುವವರಿಗೆ ನಿಖರ ವಿಳಾಸ ನೀಡದೆ, ಸ್ಥಳದ ಅಂದಾಜು ಮಾಹಿತಿ ಮಾತ್ರ ಕಳುಹಿಸಲಾಗುತ್ತಿತ್ತು ಎಂದು ಆರೋಪಿಸಲಾಗಿದೆ.

ದಾಳಿ ನಡೆಸಿದ ಸಿಸಿಬಿ ಪೊಲೀಸರು ಅರಿಹಂತ್ ಪಾಂಡೆ, ಅಭಿನವ್ ಪಾಂಡೆ ಮತ್ತು ಪಾರ್ಥ ಎಂಬ ಮೂವರನ್ನು ಬಂಧಿಸಿದ್ದಾರೆ. ಪಾರ್ಟಿ ನಡೆಯುತ್ತಿದ್ದ ಸ್ಥಳದಿಂದ ಕೆಲವು ವಸ್ತುಗಳನ್ನು ವಶಪಡಿಸಿಕೊಂಡು ಪರಿಶೀಲನೆಗೆ ಕಳುಹಿಸಲಾಗಿದೆ. ಈ ಸಂಬಂಧ ಮಾರತ್‌ಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮುಂದಿನ ತನಿಖೆ ನಡೆಯುತ್ತಿದೆ. ಖಾಸಗಿ ಪೂಲ್‌ಪಾರ್ಟಿ ಹೆಸರಿನಲ್ಲಿ ಅನುಮತಿಯಿಲ್ಲದೆ ನಡೆಯುತ್ತಿದ್ದ ಚಟುವಟಿಕೆಗಳು ಸಿಸಿಬಿ ದಾಳಿಯಿಂದ ಬೆಳಕಿಗೆ ಬಂದಿವೆ.

ಯುವಕ-ಯುವತಿಯರನ್ನು ಸೆಳೆಯಲು ಸೋಷಿಯಲ್ ಮೀಡಿಯಾ ಬಳಕೆ

ಯುವಕ–ಯುವತಿಯರನ್ನು ಆಕರ್ಷಿಸಲು ಆಯೋಜಕರು ಸಾಮಾಜಿಕ ಜಾಲತಾಣಗಳ ಮೊರೆ ಹೋಗಿದ್ದರು. ವಾಟ್ಸ್‌ಆಪ್ ಮತ್ತು ಇನ್‌ಸ್ಟಾಗ್ರಾಂ ಮೂಲಕ ಪಾರ್ಟಿಯ ಪ್ರಚಾರ ಮಾಡಲಾಗಿತ್ತು. ಎಫ್‌ವಿ ಸೋಷಿಯಲ್ 404 ಮತ್ತು ಹಾಪ್‌ಝಿಕ್ಸ್ ಸೇರಿದಂತೆ ಆನ್‌ಲೈನ್ ಆಪ್‌ಗಳನ್ನೂ ಬಳಸಿಕೊಂಡು ಯುವಕರನ್ನು ಆಹ್ವಾನಿಸಲಾಗಿತ್ತು ಎನ್ನಲಾಗಿದೆ. ಪಾರ್ಟಿಗೆ ಪ್ರವೇಶ ಪಡೆಯಲು ಪುರುಷರಿಗೆ 1,710, ಮಹಿಳೆಯರಿಗೆ 1,080 ಹಾಗೂ ಜೋಡಿಗಳಿಗೆ 2,400 ಶುಲ್ಕ ನಿಗದಿಪಡಿಸಲಾಗಿತ್ತು. ಮಾದಕ ವಸ್ತುಗಳು ಮತ್ತು ಇತರ ಪದಾರ್ಥಗಳಿಗೆ ಪ್ರತ್ಯೇಕ ಹಣ ವಸೂಲಿ ಮಾಡಲಾಗುತ್ತಿತ್ತು ಎಂದು ತನಿಖೆಯಲ್ಲಿ ತಿಳಿದುಬಂದಿದೆ.

ಸಮಾನತೆ, ಸ್ವಾತಂತ್ರ್ಯದ ಬದುಕನ್ನು ಕಲ್ಪಿಸುವ ಮಾರ್ಗದರ್ಶಿಯೇ ಸಂವಿಧಾನ: ಯತೀಂದ್ರ ಸಿದ್ದರಾಮಯ್ಯ

ಬೆಂಗಳೂರು, ನ.10: ಭಾರತದ ಸಂವಿಧಾನವು ನಾಗರಿಕನಿಗೂ ಸಮಾನ ಹಕ್ಕು, ಸ್ವಾತಂತ್ರ್ಯ, ನ್ಯಾಯ ಹಾಗೂ ಘನತೆಯ ಬದುಕನ್ನು ಕಲ್ಪಿಸುವ ಮಾರ್ಗದರ್ಶಿ ಎಂದು ನಗರಾಭಿವೃದ್ಧಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ಮಂಗಳವಾರ ಬೆಂಗಳೂರಿನ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ, ಮೈಸೂರಿನಲ್ಲಿ ನವೆಂಬರ್ 26ರಂದು ರಾಜ್ಯ ಸರ್ಕಾರದ ವತಿಯಿಂದ ಆಯೋಜಿಸಲಾಗುವ ಸಂವಿಧಾನ ದಿನಾಚರಣೆಯ ಪೂರ್ವಸಿದ್ಧತೆಗಳ ಕುರಿತು ನಡೆದ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, "ಸಂವಿಧಾನದ ಆಶಯಗಳು ಮತ್ತು ಮೌಲ್ಯಗಳು ಕೇವಲ ಸಂವಿಧಾನ ದಿನಾಚರಣೆಗೆ ಸೀಮಿತವಾಗದೆ, ಪ್ರತಿಯೊಬ್ಬರ ಬದುಕಿನ ಭಾಗವಾಗಬೇಕು. ಈ ನಿಟ್ಟಿನಲ್ಲಿ ಸಂವಿಧಾನದ ಮಹತ್ವ, ಡಾ. ಬಿ.ಆರ್. ಅಂಬೇಡ್ಕರ್ ಅವರ ಕೊಡುಗೆ ಹಾಗೂ ಸಾಮಾಜಿಕ ನ್ಯಾಯದ ಸಂದೇಶವನ್ನು ಸೇರಿದಂತೆ ಎಲ್ಲ ವರ್ಗದ ಜನರಿಗೆ ತಲುಪಿಸುವಂತೆ ಕಾರ್ಯಕ್ರಮವನ್ನು ರೂಪಿಸಬೇಕು" ಎಂದು ತಿಳಿಸಿದರು.

"ಮೈಸೂರಿನಲ್ಲಿ ನಡೆಯಲಿರುವ ಸಂವಿಧಾನ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಮತ್ತು ವ್ಯವಸ್ಥಿತವಾಗಿ ಆಯೋಜಿಸಲು ಸಂಬಂಧಪಟ್ಟ ಎಲ್ಲ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಕಾರ್ಯಕ್ರಮದಲ್ಲಿ ಸಾರ್ವಜನಿಕರು, ವಿದ್ಯಾರ್ಥಿಗಳು, ಯುವಜನತೆ ಹಾಗೂ ವಿವಿಧ ಸಂಘ–ಸಂಸ್ಥೆಗಳ ಭಾಗವಹಿಸುವಿಕೆಗೆ ಆದ್ಯತೆ ನೀಡಬೇಕು" ಎಂದು ಸಚಿವರು ಸೂಚಿಸಿದರು.

ಜೊತೆಗೆ ಕಾರ್ಯಕ್ರಮ ಆಯೋಜನೆಯಲ್ಲಿ ಟ್ಯಾಬ್ಲೋ, ಆಸನ ವ್ಯವಸ್ಥೆ, ಊಟದ ವ್ಯವಸ್ಥೆ, ಸ್ವಚ್ಛತೆ ಸೇರಿದಂತೆ ಇನ್ನಿತರ ವಿಚಾರಗಳಿಗೆ ಸಂಬಂಧಿಸಿದಂತೆ ಚರ್ಚಿಸಲಾಯಿತು.

ಸಭೆಯಲ್ಲಿ ಸಮಾಜ ಕಲ್ಯಾಣ ಸಚಿವ ಕೆ.ಎಚ್. ಮುನಿಯಪ್ಪ, ಕೃಷಿ ಸಚಿವ ಪಿ.ಎಂ. ನರೇಂದ್ರಸ್ವಾಮಿ ಹಾಗೂ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ನ.13ರಂದು ಮೈಸೂರಿಗೆ ಪ್ರಧಾನಿ ಮೋದಿ

ಬೆಂಗಳೂರು, ನ.10: ಪ್ರಧಾನಿ ನರೇಂದ್ರ ಮೋದಿ ಅವರು ನವೆಂಬರ್ 13ರಂದು ಕರ್ನಾಟಕಕ್ಕೆ ಭೇಟಿ ನೀಡಲಿದ್ದು, ಬೆಂಗಳೂರು ಮತ್ತು ಮೈಸೂರಿನಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿಯಾಗಲಿದ್ದಾರೆ. ಪ್ರಶಾಂತಿ ಕುಟೀರಂನ ಸುವರ್ಣ ಮಹೋತ್ಸವ ಆಚರಣೆಯಲ್ಲಿ ಪಾಲ್ಗೊಳ್ಳುವುದರ ಜೊತೆಗೆ ಬೆಂಗಳೂರಿನಲ್ಲಿ ಮೆಟ್ರೋ ರೈಲು ಸಂಚಾರಕ್ಕೆ ಚಾಲನೆ ನೀಡಲಿದ್ದಾರೆ. ಅಲ್ಲದೆ, ಮೆಟ್ರೋದಲ್ಲಿ ಪ್ರಯಾಣಿಸಿ ಐಐಎಂ ಬೆಂಗಳೂರು ಮೆಟ್ರೋ ನಿಲ್ದಾಣದವರೆಗೆ ತೆರಳಲಿದ್ದಾರೆ.


ಬೆಂಗಳೂರಿನಲ್ಲಿ ಹಲವು ಅಭಿವೃದ್ಧಿ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿ, ವಿವಿಧ ಯೋಜನೆಗಳನ್ನು ಉದ್ಘಾಟಿಸಿ ರಾಷ್ಟ್ರಕ್ಕೆ ಸಮರ್ಪಿಸಲಿದ್ದಾರೆ. ಬಳಿಕ ಮೈಸೂರಿಗೆ ತೆರಳಿ ಭಾರತ್ ವನ್ ಕಾರ್ಯಕ್ರಮ ಹಾಗೂ COSMOS ಮೈಸೂರು ಉದ್ಘಾಟನೆಯಲ್ಲಿ ಭಾಗವಹಿಸಲಿದ್ದಾರೆ.ನವೆಂಬರ್ 13ರಂದು ಪ್ರಧಾನಿ ನರೇಂದ್ರ ಮೋದಿ ಅವರು ದೆಹಲಿಯಿಂದ ಖಂಈ ಃಃಎ ವಿಮಾನದ ಮೂಲಕ ಬೆಂಗಳೂರಿಗೆ ಆಗಮಿಸಲಿದ್ದಾರೆ. HAL ವಿಮಾನ ನಿಲ್ದಾಣದಿಂದ MI-17 ಹೆಲಿಕಾಪ್ಟರ್ ಮೂಲಕ ಬೆಂಗಳೂರು ಹೆಲಿಪ್ಯಾಡ್–1ಕ್ಕೆ ತೆರಳಲಿದ್ದಾರೆ. ಅಲ್ಲಿಂದ ರಸ್ತೆ ಮಾರ್ಗವಾಗಿ ಪ್ರಶಾಂತಿ ಕುಟೀರಂಗೆ ತೆರಳಿ, ಸಂಸ್ಥೆಯ ಸುವರ್ಣ ಮಹೋತ್ಸವ ಆಚರಣೆಯಲ್ಲಿ ಭಾಗಿಯಾಗಲಿದ್ದಾರೆ.

ಪ್ರಶಾಂತಿ ಕುಟೀರಂ ಕಾರ್ಯಕ್ರಮದ ಬಳಿಕ ಹೆಲಿಕಾಪ್ಟರ್ ಮೂಲಕ ಬೆಂಗಳೂರು ಹೆಲಿಪ್ಯಾಡ್–2ಕ್ಕೆ ಆಗಮಿಸಲಿದ್ದಾರೆ. ಅಲ್ಲಿಂದ ರಸ್ತೆ ಮಾರ್ಗವಾಗಿ ತಾವರೆಕೆರೆ ಮೆಟ್ರೋ ನಿಲ್ದಾಣಕ್ಕೆ ತೆರಳಿ, ಮೆಟ್ರೋ ರೈಲು ಸಂಚಾರಕ್ಕೆ ಚಾಲನೆ ನೀಡಲಿದ್ದಾರೆ. ಬಳಿಕ ಮೆಟ್ರೋ ರೈಲಿನಲ್ಲಿ ಪ್ರಯಾಣಿಸಿ ಐಐಎಂ ಬೆಂಗಳೂರು ಮೆಟ್ರೋ ನಿಲ್ದಾಣ ತಲುಪಲಿದ್ದಾರೆ. ನಂತರ ಐಐಎಂ ಬೆಂಗಳೂರು ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಕೆಲವು ಯೋಜನೆಗಳನ್ನು ಉದ್ಘಾಟಿಸಿ, ಇನ್ನು ಕೆಲವು ಯೋಜನೆಗಳನ್ನು ರಾಷ್ಟ್ರಕ್ಕೆ ಸಮರ್ಪಿಸಲಿದ್ದಾರೆ. ಬಳಿಕ ಹೆಲಿಕಾಪ್ಟರ್ ಮೂಲಕ ಮೈಸೂರಿಗೆ ಪ್ರಯಾಣಿಸಲಿದ್ದಾರೆ.ಮೈಸೂರಿಗೆ ಆಗಮಿಸಿದ ಬಳಿಕ ರಸ್ತೆ ಮಾರ್ಗವಾಗಿ ಕೆ.ಸಿ. ಲೇಔಟ್ ಪಾರ್ಕ್‌ಗೆ ತೆರಳಿ ಭಾರತ್ ವನ್ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. ನಂತರ COSMOS ಮೈಸೂರು ಕಾರ್ಯಕ್ರಮದ ಸ್ಥಳಕ್ಕೆ ತೆರಳಿ ಅದರ ಉದ್ಘಾಟನೆ ನೆರವೇರಿಸಲಿದ್ದಾರೆ.

ಮೈಸೂರಿನ ಕಾರ್ಯಕ್ರಮಗಳು ಮುಗಿದ ಬಳಿಕ ವಿಮಾನ ನಿಲ್ದಾಣಕ್ಕೆ ತೆರಳಿ, ದೆಹಲಿಗೆ ವಾಪಸಾಗಲಿದ್ದಾರೆ. ಪ್ರಧಾನಿ ಮೋದಿ ಅವರ ಒಂದು ದಿನದ ಕರ್ನಾಟಕ ಪ್ರವಾಸದಲ್ಲಿ ಬೆಂಗಳೂರು ಮತ್ತು ಮೈಸೂರಿನ ಹಲವು ಪ್ರಮುಖ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ದೊರೆಯಲಿದ್ದು, ಮೆಟ್ರೋ ಸಂಚಾರ ವಿಸ್ತರಣೆ ಸೇರಿದಂತೆ ವಿವಿಧ ಯೋಜನೆಗಳು ರಾಜ್ಯದ ಗಮನ ಸೆಳೆಯಲಿವೆ.

ಸವಾಲನ್ನು ಸ್ವೀಕರಿಸುವ ಧೈರ್ಯ ಇದೆಯೇ?

ತೇಜಸ್ವಿ ಸೂರ್ಯಗೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಸವಾಲು



ಬೆಂಗಳೂರು, ನ.10: ಪತ್ರಕರ್ತೆ ಗೌರಿ ಲಂಕೇಶ್, ಸಂಶೋಧಕ ಎಂ.ಎಂ.ಕಲಬುರ್ಗಿ ಹತ್ಯೆ ಪ್ರಕರಣದಲ್ಲಿ ತಪಿತಸ್ಥರನ್ನು ಮುಂದಿನ ಆರು ತಿಂಗಳಲ್ಲಿ ಜೈಲಿಗೆ ಕಳುಹಿಸುವ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹೇಳಿಕೆಗೆ ಪ್ರತಿಕ್ರಿಯಿಸಿದ್ದ ಸಂಸದ ತೇಜಸ್ವಿ ಸೂರ್ಯ ಅವರು, ಪರಿಣಾಮಕಾರಿ ಕಾನೂನು ಕ್ರಮಗಳನ್ನು ಖಚಿತಪಡಿಸುವ ಬದಲು ಸಚಿವರು ರಾಜಕೀಯ ಪ್ರೇರಿತ ಹೇಳಿಕೆಗಳನ್ನು ನೀಡುತ್ತಿದ್ದಾರೆ ಎಂದು ಆರೋಪಿಸಿದ್ದರು. ಈಗ ಸಂಸದರ ಈ ಹೇಳಿಕೆಗೆ ಪ್ರತಿಕ್ರಿಯಿಸಿರುವ ಸಚಿವ ಪ್ರಿಯಾಂಕ್ ಖರ್ಗೆ, ಆರ್‌ಎಸ್‌ಎಸ್ ಸಮರ್ಥಿಸಿಕೊಳ್ಳುವ ಆತುರದಲ್ಲಿ ಸಂಸದರು ಸಂಘಟನೆಯ ಪಾರದರ್ಶಕತೆಗೆ ಸಂಬಂಧಿಸಿದ ಮೂಲಭೂತ ಪ್ರಶ್ನೆಗಳನ್ನು ನಿರ್ಲಕ್ಷಿಸುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ಆರ್‌ಎಸ್‌ಎಸ್‌ನ್ನು ಸಮರ್ಥಿಸಿಕೊಳ್ಳಲು ನೀವು ನಡೆಸುತ್ತಿರುವ ಹತಾಶ ಪ್ರಯತ್ನ ಅದರ ಅತಿದೊಡ್ಡ ದ್ವಂದ್ವ ನೀತಿಯನ್ನು ಬಯಲು ಮಾಡಿದೆ. ಎಲ್ಲದರ ಶ್ರೇಯಸ್ಸನ್ನೂ ತನ್ನದಾಗಿಸಿಕೊಳ್ಳುತ್ತದೆ. ಆದರೆ ಯಾವುದರ ಹೊಣೆಗಾರಿಕೆಯನ್ನೂ ಹೊರುವುದಿಲ್ಲ ಎಂದಿದ್ದಾರೆ.

ಗೌರಿ ಲಂಕೇಶ್, ಕಲಬುರ್ಗಿ, ದಾಬೋಲ್ಕರ್ ಮತ್ತು ಪನ್ಸಾರೆ ಹತ್ಯೆ ಪ್ರಕರಣಗಳಲ್ಲಿ ವಿಶೇಷ ತನಿಖಾ ತಂಡಗಳು ಹಾಗೂ ಕೇಂದ್ರೀಯ ತನಿಖಾ ದಳ ನಡೆಸಿದ ತನಿಖೆಗಳು, ಆರೋಪಿಗಳು ಆರ್‌ಎಸ್‌ಎಸ್ ನೊಂದಿಗೆ ನಂಟು ಹೊಂದಿರುವ ರಹಸ್ಯ ಜಾಲಗಳ ಭಾಗವಾಗಿರುವುದನ್ನು ಪತ್ತೆ ಹಚ್ಚಿವೆ ಎಂದು ಖರ್ಗೆ ಹೇಳಿದ್ದಾರೆ.

ಆರ್ ಎಸ್ ಎಸ್ ಸಂಘಟನಾ ರಚನೆಯೇ ಅಗತ್ಯವಿದ್ದಾಗ ವ್ಯಕ್ತಿಗಳನ್ನು ತನ್ನೊಂದಿಗೆ ಗುರುತಿಸಿಕೊಳ್ಳಲು ಮತ್ತು ವಿವಾದಗಳು ಅಥವಾ ಅಪರಾಧ ತನಿಖೆಗಳು ಎದುರಾದಾಗ ಅವರೊಂದಿಗೆ ಸಂಬಂಧವಿಲ್ಲ ಎಂದು ಹೇಳಿಕೊಳ್ಳಲು ಅವಕಾಶ ಕಲ್ಪಿಸುತ್ತದೆ ಎಂದು ಖರ್ಗೆ ಆರೋಪಿಸಿದ್ದಾರೆ. ಆರ್ ಎಸ್ ಎಸ್ ನಲ್ಲಿ ಔಪಚಾರಿಕ ಸದಸ್ಯತ್ವ ನೋಂದಣಿ ವ್ಯವಸ್ಥೆ, ಸಾರ್ವಜನಿಕವಾಗಿ ಪರಿಶೀಲಿಸಬಹುದಾದ ಸದಸ್ಯರ ಪಟ್ಟಿ ಹಾಗೂ ನೋಂದಾಯಿತ ಕಾನೂನುಬದ್ಧ ಅಸ್ತಿತ್ವ ಇಲ್ಲದಿರುವುದನ್ನು ಅವರು ಪ್ರಶ್ನಿಸಿದ್ದಾರೆ.

ಚತುರ್ಬಾಲೆಯರ ರಮಣೀಯ ಪ್ರಥಮ ಗೆಜ್ಜೆ ನಿನಾದ



ಬೆಂಗಳೂರಿನ ಖ್ಯಾತ 'ಲಯಾಭಿನಯ ಕಲ್ಚುರಲ್ ಫೌಂಡೇಶನ್' – ನೃತ್ಯಸಂಸ್ಥೆಯ ಸ್ಥಾಪಕಿ ಆಳವಾದ ನೃತ್ಯಾಭ್ಯಾಸ, ಶಿಸ್ತು– ಬದ್ಧತೆಗಳಿಗೆ ಹೆಸರಾದವರು ನೃತ್ಯಗುರು ನೃತ್ಯಜ್ಞೆ ಡಾ. ಜಯಶ್ರೀ ರವಿ. ವಿಶ್ವವಿಖ್ಯಾತ ನೃತ್ಯಪಟು ಡಾ. ಸುಂದರಿ ಸಂತಾನಂ ಅವರಿಂದ 108 ಮಾರ್ಗದ 'ಕರಣ'ಗಳನ್ನು ಅಭ್ಯಾಸ ಮಾಡಿ, ಶ್ರೀವಿದ್ಯಾ ಇಂಟರ್‌ನ್ಯಾಷನಲ್ ಯೂನಿವರ್ಸಿಟಿ ಆಫ್ ವೇದಿಕ್ ಸೈನ್ಸ್ ನಲ್ಲಿ ಪ್ರೊಫೆಸರ್ ಆಗಿರುವುದು ವಿಶೇಷ ಇವರದು. ವಿಶ್ವಾದ್ಯಂತ ನೃತ್ಯಪ್ರದರ್ಶನಗಳನ್ನು ನೀಡಿ ಸನ್ಮಾನ್ಯರಾದ ವಿದುಷಿ ಜಯಶ್ರೀ ಅವರ ನುರಿತ ಗರಡಿಯಲ್ಲಿ ರೂಪುಗೊಳ್ಳುತ್ತಿರುವ ನಾಲ್ವರು ಉದಯೋನ್ಮುಖ ನೃತ್ಯ ಕಲಾವಿದೆಯರಾದ ಕು. ಅದಿತ್ರಿ ಎಸ್. ಪೂಜಾರಿ, ಕು. ಅರ್ಪಿತಾ ಅಶೋಕ್, ಕು. ಸಮೃದ್ಧಿ ಜೆ. ಶೆಟ್ಟಿ ಮತ್ತು ಕು. ಲಿಪಿ ಕೆ.ಎಸ್. ತಮ್ಮ ಶಾಲಾ ವಿದ್ಯಾಭ್ಯಾಸದಲ್ಲಿ ಉತ್ತಮ ಸಾಧನೆ ತೋರುತ್ತಿದ್ದು, ಸಂಗೀತ– ಯೋಗ ಇತ್ಯಾದಿ ಕಲೆಗಳಲ್ಲೂ ಅಭ್ಯಾಸ ಮಾಡುತ್ತಿದ್ದು ಹಲವಾರು ನೃತ್ಯ ಪ್ರದರ್ಶನಗಳನ್ನು ಗುರು ಜಯಶ್ರೀ ಮಾರ್ಗದರ್ಶನದಲ್ಲಿ ಪ್ರಸ್ತುತಿಪಡಿಸಿದ್ದಾರೆ. ಈ ನಾಲ್ವರು ಕನ್ಯೆಯರು, ಇದೇ ತಿಂಗಳ 15 ನೇ ತಾ. ಭಾನುವಾರ ಸಂಜೆ 6 ಗಂಟೆಗೆ ಬನ್ನೇರುಘಟ್ಟ, ಜಿಗಣಿ ಸಮೀಪದ ನಿಸರ್ಗ ಲೇ–ಔಟ್‌ನ 'ಪುರಂದರ ಮಂಟಪ'ದಲ್ಲಿ ತಮ್ಮ 'ಗೆಜ್ಜೆ ಪೂಜೆ'ಯ ಸಮಾರಂಭವನ್ನು ವಿದ್ಯುಕ್ತವಾಗಿ ನೆರವೇರಿಸಿಕೊಳ್ಳಲಿದ್ದಾರೆ. ಸಮಾರಂಭದಲ್ಲಿ ಪ್ರೊ. ಜೆ. ಶ್ರೀನಿವಾಸಮೂರ್ತಿ– ವೈಸ್ ಚಾನ್ಸಲರ್, ಶ್ರೀವಿದ್ಯಾ ಇಂಟರ್‌ನ್ಯಾಷನಲ್ ಯೂನಿವರ್ಸಿಟಿ ಆಫ್ ವೇದಿಕ್ ಸೈನ್ಸ್, ವೈ.ಕೆ.ಸಂಧ್ಯಾ ಶರ್ಮ– ಖ್ಯಾತ ಲೇಖಕಿ, ರಂಗಕರ್ಮಿ, ಅಂಕಣಕಾರ್ತಿ ಮತ್ತು ನೃತ್ಯ–ನಾಟಕ ವಿಮರ್ಶಕರು, ವೀಣಾ ಮೋಹನ್–ಶಿಕ್ಷಣತಜ್ಞರು ಮತ್ತು ಉಮ್ಮತ್ತೂರು ರೇವಣ್ಣ ಶಿಕ್ಷಣತಜ್ಞರು– ಸಿಂಗಾಪುರ ಅತಿಥಿಗಳಾಗಿ ಭಾಗವಹಿಸುವರು.

ನರ್ತನಕ್ಕೆ ಸರ್ವಾಂಗೀಣ ಸುಂದರವಾದ ನೃತ್ಯಸಂಯೋಜನೆಯನ್ನು ಗುರು ಜಯಶ್ರೀ ರವಿ ರೂಪಿಸಿದ್ದು, ಅವರ ನೆಚ್ಚಿನ ಶಿಷ್ಯೆಯರಾದ ಈ ನಾಲ್ವರು ಉದಯೋನ್ಮುಖ ನೃತ್ಯ ಕಲಾವಿದೆಯರ ಕಣ್ಮನ ಸೆಳೆಯುವ ನೃತ್ಯ ವೈಭವವನ್ನು ವೀಕ್ಷಿಸಲು ಎಲ್ಲ ಕಲಾರಸಿಕರಿಗೂ ಆದರದ ಸ್ವಾಗತ.

ಪೌತಿ ಖಾತೆ ನಿಯಮದಲ್ಲಿ ಸಡಿಲಿಕೆ: ವಿದೇಶದಲ್ಲಿರುವ ಕನ್ನಡಿಗರಿಗೂ ಪೂರ್ವಜರ ಆಸ್ತಿ ವರ್ಗಾವಣೆ ಸುಲಭ, ಆನ್‌ಲೈನ್‌ನಲ್ಲೇ ದಾಖಲೆ ಸಲ್ಲಿಕೆಗೆ ಸರ್ಕಾರ ಅವಕಾಶ

ಬೆಂಗಳೂರು, ನ.10: ಕರ್ನಾಟಕದಲ್ಲಿ ಪೂರ್ವಜರ ಹೆಸರಿನಲ್ಲಿ ಕೃಷಿ ಭೂಮಿ ಹೊಂದಿರುವ ಕುಟುಂಬಗಳ ವಾರಸುದಾರರು ಉದ್ಯೋಗ, ಶಿಕ್ಷಣ ಅಥವಾ ಇತರ ಕಾರಣಗಳಿಂದ ಬೇರೆ ರಾಜ್ಯಗಳಲ್ಲಿ, ವಿದೇಶಗಳಲ್ಲಿ ನೆಲೆಸಿದ್ದರೂ ಇನ್ನು ಮುಂದೆ ಪೌತಿ ಖಾತೆ ಮಾಡಿಸಿಕೊಳ್ಳಲು ಕಂದಾಯ ಕಚೇರಿಗಳಿಗೆ ಅಲೆಯ ಬೇಕಿಲ್ಲ. ಇಂತಹವರಿಗೆ ಅನುಕೂಲ ವಾಗುವಂತೆ ರಾಜ್ಯ ಸರ್ಕಾರ ಇ–ಪೌತಿ ಖಾತೆ ಪ್ರಕ್ರಿಯೆಯನ್ನು ಸರಳೀಕರಿಸಿದ್ದು, ಆನ್‌ಲೈನ್‌ನಲ್ಲೇ ಅಗತ್ಯ ದಾಖಲೆಗಳನ್ನು ಸಲ್ಲಿಸಿ ಕೃಷಿ ಭೂಮಿಯನ್ನು ತಮ್ಮ ಹೆಸರಿಗೆ ವರ್ಗಾಯಿಸಿಕೊಳ್ಳಲು ಅವಕಾಶ ಕಲ್ಪಿಸಿದೆ.

ಪೌತಿ ಖಾತೆ ಅಥವಾ ಪೌತಿ ಖಾತೆ ಬದಲಾವಣೆ ಎಂದರೆ ಮೃತ ಭೂಮಾಲೀಕರ ಹೆಸರಿನಲ್ಲಿರುವ ಕೃಷಿ ಭೂಮಿಯ ದಾಖಲೆಗಳು, ಹಕ್ಕುಪತ್ರಗಳು ಮತ್ತು ತೆರಿಗೆ ದಾಖಲೆಗಳನ್ನು ಅವರ ಕಾನೂನುಬದ್ಧ ವಾರಸುದಾರರ ಹೆಸರಿಗೆ ವರ್ಗಾಯಿಸುವ ಅಧಿಕೃತ ಕಾನೂನು ಪ್ರಕ್ರಿಯೆಯಾಗಿದೆ.

ವರ್ಷಗಳಿಂದ ಕರ್ನಾಟಕದ ಹೊರಗೆ ನೆಲೆಸಿರುವ ಕನ್ನಡಿಗರು, ವಿಶೇಷವಾಗಿ ಅನಿವಾಸಿ ಭಾರತೀಯರು (ಎನ್‌ಆರ್‌ಐ), ಪೌತಿ ಖಾತೆ ಮಾಡಿಸಿಕೊಳ್ಳಲು ಹಲವು ತೊಂದರೆಗಳನ್ನು ಎದುರಿಸುತ್ತಿದ್ದರು. ಆಧಾರ್ ಆಧಾರಿತ ಕಡ್ಡಾಯ ಇ–ಕೆವೈಸಿ ಪ್ರಕ್ರಿಯೆ ಇದಕ್ಕೆ ಪ್ರಮುಖ ಅಡ್ಡಿಯಾಗಿತ್ತು. ಸಕ್ರಿಯ ಭಾರತೀಯ ಮೊಬೈಲ್ ಸಂಖ್ಯೆ ಇಲ್ಲದ ವಿದೇಶಿ ಪ್ರಜೆಗಳು ಮತ್ತು ವಿದೇಶಗಳಲ್ಲಿ ನೆಲೆಸಿರುವವರು ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಸಾಧ್ಯವಾಗುತ್ತಿರಲಿಲ್ಲ.

ದಶಕಗಳಿಂದ ವಿದೇಶಗಳಲ್ಲಿ ನೆಲೆಸಿರುವ ಕುಟುಂಬಗಳ ದಾಖಲೆಗಳನ್ನು ಸ್ಥಳಕ್ಕೆ ತೆರಳಿ ಪರಿಶೀಲಿಸಲು ಸಾಧ್ಯವಾಗದ ಕಾರಣ, ಗ್ರಾಮ ಮಟ್ಟದ ಅಧಿಕಾರಿಗಳು ಕಡ್ಡಾಯ ಕುಟುಂಬ ವೃಕ್ಷ ಪ್ರಮಾಣಪತ್ರ ನೀಡಲು ನಿರಾಕರಿಸುತ್ತಿದ್ದರು. ವಿದೇಶಗಳಲ್ಲಿ ನೀಡಲಾದ ಮರಣ ಪ್ರಮಾಣಪತ್ರಗಳನ್ನು ಕಂದಾಯ ಇಲಾಖೆಯ ಆನ್‌ಲೈನ್ ವ್ಯವಸ್ಥೆ ಸ್ವೀಕರಿಸುತ್ತಿರಲಿಲ್ಲ. ಇದರಿಂದ ಕಾನೂನುಬದ್ಧ ವಾರಸುದಾರರು ಖುದ್ದಾಗಿ ಕಂದಾಯ ಕಚೇರಿಗಳಿಗೆ ಭೇಟಿ ನೀಡಿ ದಾಖಲೆಗಳನ್ನು ಸಲ್ಲಿಸಬೇಕಾದ ಅನಿವಾರ್ಯತೆ ಇತ್ತು.



ಭೂಮಾಲೀಕ ಮೃತಪಟ್ಟ ಬಳಿಕ ಕೃಷಿ ಭೂಮಿಯ ದಾಖಲೆಗಳನ್ನು ಕಾನೂನುಬದ್ಧ ವಾರಸುದಾರರ ಹೆಸರಿಗೆ ವರ್ಗಾಯಿಸಲು ರಾಜ್ಯ ಸರ್ಕಾರ ಕಳೆದ ವರ್ಷ ಇ–ಪೌತಿ ಖಾತೆ ವ್ಯವಸ್ಥೆಯನ್ನು ಜಾರಿಗೆ ತಂದಿತ್ತು. ಆದರೆ, ಕರ್ನಾಟಕದ ಹೊರಗೆ ನೆಲೆಸಿರುವವರು, ವಿಶೇಷವಾಗಿ ಅನಿವಾಸಿ ಭಾರತೀಯರಿಗೆ ಅನುಕೂಲವಾಗುವಂತೆ ಪ್ರಕ್ರಿಯೆಗಳನ್ನು ಸರಳೀಕರಿಸಿದ್ದು ಈ ವರ್ಷದ ಆಗಸ್ಟ್‌ನಲ್ಲಷ್ಟೇ.

ಪರಿಷ್ಕೃತ ಮಾರ್ಗಸೂಚಿಗಳ ಪ್ರಕಾರ, ಆಧಾರ್ ಆಧಾರಿತ ಇ–ಕೆವೈಸಿ ಕಡ್ಡಾಯ ನಿಯಮವನ್ನು ಸಡಿಲಿಸ ಲಾಗಿದೆ. ಅನಿವಾಸಿ ಭಾರತೀಯರು ಗುರುತಿನ ದೃಢೀಕರಣಕ್ಕಾಗಿ ತಮ್ಮ ಪಾಸ್‌ಪೋರ್ಟ್ ವಿವರಗಳನ್ನು ಸಲ್ಲಿಸಬಹುದು. ಕುಟುಂಬ ವೃಕ್ಷ ಪ್ರಮಾಣಪತ್ರ ಸೇರಿದಂತೆ ಅಗತ್ಯ ದಾಖಲೆಗಳನ್ನು ಆನ್‌ಲೈನ್‌ನಲ್ಲೇ ಅಪ್‌ಲೋಡ್ ಮಾಡಲು ಅವಕಾಶ ನೀಡಲಾಗಿದೆ. ಇದರಿಂದ ಪ್ರಕ್ರಿಯೆ ಸುಲಭವಾಗಲಿದ್ದು, ವಿದೇಶಗಳಲ್ಲಿ ನೆಲೆಸಿರುವ ವಾರಸುದಾರರು ಕಂದಾಯ ಕಚೇರಿಗಳಿಗೆ ಖುದ್ದಾಗಿ ಭೇಟಿ ನೀಡುವ ಅಗತ್ಯವೂ ಕಡಿಮೆಯಾಗಲಿದೆ.

ಕರ್ನಾಟಕದ ಹೊರಗಿನ ರಾಜ್ಯಗಳಲ್ಲಿ ಅಥವಾ ವಿದೇಶಗಳಲ್ಲಿ ಶಾಶ್ವತವಾಗಿ ನೆಲೆಸಿರುವ ಕಾನೂನುಬದ್ಧ ವಾರಸುದಾರರ ಹೆಸರಿಗೆ ಕೃಷಿ ಭೂಮಿಯ ದಾಖಲೆಗಳನ್ನು ವರ್ಗಾಯಿಸಲು ಅನುಕೂಲವಾಗುವಂತೆ ಕಂದಾಯ ಆಯುಕ್ತಾಲಯವು ಇ–ಪೌತಿ ತಂತ್ರಾಂಶವನ್ನು ಮಾರ್ಪ ಡಿಸಿದೆ. ಈ ಸೌಲಭ್ಯ ರಾಜ್ಯದಾದ್ಯಂತ ಇರುವ ಎಲ್ಲ ಕೃಷಿ ಭೂಮಿಗಳಿಗೂ ಅನ್ವಯವಾಗಲಿದೆ.

ಈ ಹೊಸ ಕ್ರಮದಿಂದ ಕರ್ನಾಟಕದಲ್ಲಿ ಪೂರ್ವಜರ ಕೃಷಿ ಭೂಮಿ ಹೊಂದಿದ್ದು, ಅವರ ವಾರಸುದಾರರು ದೇಶದ ಇತರ ರಾಜ್ಯಗಳಲ್ಲಿ ಅಥವಾ ವಿದೇಶಗಳಲ್ಲಿ ನೆಲೆಸಿರುವ ಕುಟುಂಬಗಳು ದೀರ್ಘ ಕಾಲದಿಂದ ಎದುರಿಸುತ್ತಿದ್ದ ಪ್ರಕ್ರಿಯಾತ್ಮಕ ತೊಂದರೆ ನಿವಾರಣೆಯಾಗುವ ನಿರೀಕ್ಷೆಯಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಎಲ್ಲ ಜಿಲ್ಲಾಧಿಕಾರಿಗಳು ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ಹೊರಡಿಸಿರುವ ಸುತ್ತೋಲೆಯ ಪ್ರಕಾರ, ಭೂಮಾಲೀಕರು ಮೃತಪಟ್ಟಿರುವ ಕಾರಣಕ್ಕೆ ಅಥವಾ ಅವರ ಕಾನೂನುಬದ್ಧ ವಾರಸುದಾರರು ಕರ್ನಾಟಕದ ಹೊರಗೆ ಅಥವಾ ವಿದೇಶಗಳಲ್ಲಿ ನೆಲೆಸಿದ್ದಾರೆ ಎಂಬ ಕಾರಣಕ್ಕೆ ಇನ್ನು ಮುಂದೆ ತಂತ್ರಾಂಶದ ಸಮಸ್ಯೆಯಿಂದ ಪೌತಿ ಖಾತೆ ಬದಲಾವಣೆ ಪ್ರಕ್ರಿಯೆ ಸ್ಥಗಿತಗೊಳ್ಳುವುದಿಲ್ಲ.

ಮಾರ್ಪಡಿಸಲಾದ ಇ–ಪೌತಿ ವ್ಯವಸ್ಥೆಯಂತೆ ಕಾರ್ಯ ನಿರ್ವಹಿಸುವಂತೆ ಕಂದಾಯ ಆಯುಕ್ತರು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಅಲ್ಲದೆ, ತಂತ್ರಾಂಶದಲ್ಲಿ ಮಾಡಿರುವ ಬದಲಾವಣೆಗಳ ಕುರಿತು ಜಿಲ್ಲಾ ಭೂಮಿ ಸಲಹೆಗಾರರಿಗೂ ತರಬೇತಿ ನೀಡಲಾಗಿದೆ.

ನೋಟಿಸ್ ನೀಡದೆ 300 ದಾಳಿಂಬೆ ಗಿಡ ಕಡಿದ ಕೋಲಾರ ತಹಶೀಲ್ದಾರ್‌ಗೆ ಹೈಕೋರ್ಟ್ ತರಾಟೆ

ಕೋಲಾರ, ನ.10: ಅಕ್ರಮ ಸಾಗುವಳಿ ಆರೋಪಕ್ಕೆ ಸಂಬಂಧಿಸಿದಂತೆ ಮುನ್ಸೂಚನೆ ಅಥವಾ ನೋಟಿಸ್ ನೀಡದೆ ಜಮೀನಿನಲ್ಲಿದ್ದ 300ಕ್ಕೂ ಅಧಿಕ ದಾಳಿಂಬೆ ಮರಗಳನ್ನು ಏಕಾಏಕಿ ಕಡಿದು ಹಾಕಿದ ಪ್ರಕರಣಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಕೋಲಾರ ತಹಶೀಲ್ದಾರ್ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿ, "ಏಕಾಏಕಿ ಈ ಕ್ರಮ ಕೈಗೊಳ್ಳದಿದ್ದರೆ ಸ್ವರ್ಗವೇನು ಧರೆಗಿಳಿದು ಬರುತ್ತಿರಲಿಲ್ಲ" ಎಂದು ಮಾರ್ಮಿಕವಾಗಿ ಚಾಟಿ ಬೀಸಿದೆ.ಕೋಲಾರ ಜಿಲ್ಲೆಯ ವೇಮಗಲ್ ಕುರುಗಲ್ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಜಮೀನಿನಲ್ಲಿ ಅಕ್ರಮ ಸಾಗುವಳಿ ಮಾಡಲಾಗಿದೆ ಎಂಬ ಆರೋಪವಿತ್ತು. ಈ ಹಿನ್ನೆಲೆಯಲ್ಲಿ ಯಾವುದೇ ಪೂರ್ವ ಸೂಚನೆ ನೀಡದೆ ಕಂದಾಯ ಅಧಿಕಾರಿಗಳು, ನವೆಂಬರ್ 7ರ ರಜಾದಿನದಂದು ಅಧಿಕಾರಿಗಳು ಏಕಾಏಕಿ ಕಾರ್ಯಾಚರಣೆ ನಡೆಸಿ ಜಮೀನಿಗೆ ನುಗ್ಗಿ ಅಲ್ಲಿದ್ದ 300ಕ್ಕೂ



ಅಧಿಕ ದಾಳಿಂಬೆ ಮರಗಳನ್ನು ಕಡಿದು ತೆರವುಗೊಳಿಸಿದ್ದರು. ಆದರೆ, ಇದನ್ನು ಪ್ರಶ್ನಿಸಿ ಸಾಗುವಳಿದಾರೆ ಟಿ.ಎನ್. ಮೋನಿಕಾ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ವಿ. ಅರವಿಂದ್ ಅವರಿದ್ದ ವಿಶೇಷ ಏಕಸದಸ್ಯ ನ್ಯಾಯಪೀಠವು, "ನವೆಂಬರ್ 7ರಂದು ನೀವು ಕ್ರಮ ಕೈಗೊಳ್ಳದಿದ್ದರೆ ಸ್ವರ್ಗವೇನು ಧರೆಗಿಳಿದು ಬರುತ್ತಿರಲಿಲ್ಲ" ಎಂದು ತಹಶೀಲ್ದಾರ್ ಅವರ ಅವಸರದ ಕ್ರಮವನ್ನು ತೀವ್ರವಾಗಿ ಆಕ್ಷೇಪಿಸಿತು.

ಅರ್ಜಿದಾರರು ಕಾನೂನು ಮೊರೆ ಹೋಗುವುದನ್ನು ತಪ್ಪಿಸುವ ಉದ್ದೇಶದಿಂದ, ದೀಪಾವಳಿ ಹಬ್ಬದ ಸಾಲು–ಸಾಲು ರಜೆಗಳಿರುವುದನ್ನು ಬಳಸಿಕೊಂಡು ತಹಶೀಲ್ದಾರ್ ಅವರು ಏಕಾಏಕಿ ಈ ಕಾರ್ಯಾಚರಣೆ ನಡೆಸಿದ್ದಾರೆ ಎಂದು ನ್ಯಾಯಪೀಠ ಅಸಮಾಧಾನ ವ್ಯಕ್ತಪಡಿಸಿತು. ಅಲ್ಲದೆ, ಅಧಿಕಾರಿಗಳ ಇಂತಹ ನಡವಳಿಕೆಯಿಂದಾಗಿ ಸರ್ಕಾರಿ ರಜಾದಿನದಲ್ಲೂ ಹೈಕೋರ್ಟ್‌ನ ನೂರಾರು ಸಿಬ್ಬಂದಿ ಕೆಲಸ ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ನ್ಯಾಯಾಲಯ ಹೇಳಿತು. ಇದರೊಂದಿಗೆ, ವಿವಾದಿತ ಜಮೀನಿನ ವಿಚಾರದಲ್ಲಿ ಸದ್ಯಕ್ಕೆ ಯಾವುದೇ ಬಲವಂತದ ಕ್ರಮ ಕೈಗೊಳ್ಳಬಾರದು ಹಾಗೂ ಮುಂದಿನ ಆದೇಶದವರೆಗೆ ಯಾವುದೇ ಅಧಿಕಾರಿಗಳು ಆ ಆಸ್ತಿಗೆ ಪ್ರವೇಶಿಸಬಾರದು ಎಂದು ಕಟ್ಟುನಿಟ್ಟಿನ ಆದೇಶ ನೀಡಿದ ಹೈಕೋರ್ಟ್, ರಾಜ್ಯ ಸರ್ಕಾರ, ಕೋಲಾರ ಜಿಲ್ಲಾಡಳಿತ ಹಾಗೂ ತಹಶೀಲ್ದಾರ್‌ಗೆ ನೋಟಿಸ್ ಜಾರಿಗೊಳಿಸಿರುವ ನ್ಯಾಯಪೀಠ, ಈ ಕುರಿತು ಸರ್ಕಾರದ ನಿಲುವು ತಿಳಿಸುವಂತೆ ಸೂಚಿಸಿ ವಿಚಾರಣೆಯನ್ನು ನ.13ಕ್ಕೆ ಮುಂದೂಡಿದೆ.

ಕಲಬುರಗಿ: ಗಾಣಗಾಪುರ ಶ್ರೀ ದತ್ತಾತ್ರೇಯ ಕ್ಷೇತ್ರದ ಸಮಗ್ರ ಅಭಿವೃದ್ಧಿ

250 ಕೋಟಿ ಮಾಸ್ಟರ್ ಪ್ಲ್ಯಾನ್: ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ

ಕಲಬುರಗಿ, ನ. 10: ಕಲ್ಯಾಣ ಕರ್ನಾಟಕದ ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾದ ದತ್ತ ಪೀಠವೆಂದೇ ಖ್ಯಾತಿ ಪಡೆದಿರುವ ಕಲಬುರಗಿ ಜಿಲ್ಲೆಯ ಗಾಣಗಾಪುರದ ಶ್ರೀದತ್ತಾತ್ರೇಯ ದೇವಸ್ಥಾನದ ಸಮಗ್ರ ಅಭಿವೃದ್ಧಿಗೆ ರಾಜ್ಯ ಸರ್ಕಾರ ಮಹತ್ವದ ಯೋಜನೆ ರೂಪಿಸಿದೆ. ಒಟ್ಟು 250 ಕೋಟಿ ವೆಚ್ಚದಲ್ಲಿ ಕ್ಷೇತ್ರದ ಅಭಿವೃದ್ಧಿಗೆ ಮಾಸ್ಟರ್ ಪ್ಲ್ಯಾನ್ ಸಿದ್ಧಪಡಿಸಲಾಗಿದ್ದು, ಮೊದಲ ಹಂತದಲ್ಲಿ 50 ಕೋಟಿ ವೆಚ್ಚದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಈ ಕುರಿತು ಮಾಹಿತಿ ಹಂಚಿಕೊಂಡಿರುವ ಅವರು, ಮೊದಲ ಹಂತದ ಅಭಿವೃದ್ಧಿ ಕಾಮಗಾರಿಗಳಿಗೆ ವಿವರವಾದ ಯೋಜನಾ ವರದಿ ಸಿದ್ಧಪಡಿಸಲಾಗಿದೆ. ಸಚಿವ ಸಂಪುಟದ ಅನುಮೋದನೆ ಪ್ರಕ್ರಿಯೆ ಪೂರ್ಣಗೊಳಿಸಿ ಶೀಘ್ರದಲ್ಲೇ ಕಾಮಗಾರಿಗಳನ್ನು ಇದೇ ಆರ್ಥಿಕ ವರ್ಷದಲ್ಲೇ ಆರಂಭಿಸಲಾಗುವುದು

ಮೊದಲ ಹಂತದ ಆರು ಕಾಮಗಾರಿಗಳು : ಮೊದಲ ಹಂತದಲ್ಲಿ ಕ್ಷೇತ್ರದ ಮೂಲಸೌಕರ್ಯ ಅಭಿವೃದ್ಧಿಗೆ ಆರು ಪ್ರಮುಖ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ. ಭೀಮಾ–ಅಮರಜಾ ನದಿಗಳ ಸಂಗಮ ಘಾಟ ಅಭಿವೃದ್ಧಿಗೆ 17.12 ಕೋಟಿ, ಪಾಪವಿನಾಶ ತೀರ್ಥ ಅಭಿವೃದ್ಧಿಗೆ 12.50 ಕೋಟಿ, ಸಂಗಮದಿಂದ ದೇವಸ್ಥಾನಕ್ಕೆ ಸಂಪರ್ಕ ಕಲ್ಪಿಸುವ ಪಾದಚಾರಿ ಮಾರ್ಗ ನಿರ್ಮಾಣ 6.50 ಕೋಟಿ,



ಕಲಬುರಗಿ ಜಿಲ್ಲೆಯ ಭೀಮಾ ನದಿ ತೀರದ ಶ್ರೀ ದತ್ತ ಕ್ಷೇತ್ರ ದೇವಲಗಾಣಗಾಪುರ ದತ್ತ ಪೀಠದ ಸಮಗ್ರ ಅಭಿವೃದ್ಧಿಯ ಮಾಸ್ಟರ್ ಪ್ಲಾನ್ ನಕ್ಷೆ.

ವಾಹನ ನಿಲುಗಡೆ ಮತ್ತು ಸಾರಿಗೆ ವ್ಯವಸ್ಥೆಗೆ 9.10 ಕೋಟಿ, ಬಸ್ ನಿಲ್ದಾಣದಿಂದ ದೇವಸ್ಥಾನಕ್ಕೆ ಪಾದಚಾರಿ ಮಾರ್ಗ 52 ಲಕ್ಷ, ದೇವಸ್ಥಾನ ಸಂಕೀರ್ಣ ಅಭಿವೃದ್ಧಿಗೆ 4.25 ಕೋಟಿ.

ಯಾತ್ರಿಕರಿಗೆ ಆಧುನಿಕ ಸೌಲಭ್ಯಗಳು: ಯೋಜನೆಯಡಿ 860 ಕಾರುಗಳು ಮತ್ತು 500 ದ್ವಿಚಕ್ರ ವಾಹನಗಳನ್ನು ನಿಲುಗಡೆ ಮಾಡುವ ಸಾಮರ್ಥ್ಯದ ಪಾರ್ಕಿಂಗ್ ವ್ಯವಸ್ಥೆ ನಿರ್ಮಿಸಲಾಗುತ್ತದೆ. ಸಂಗಮ ಘಾಟ್‌ನಲ್ಲಿ 40 ವಾಣಿಜ್ಯ ಮಳಿಗೆಗಳನ್ನು ಸ್ಥಾಪಿಸಲಾಗುತ್ತದೆ. ಪಾಪವಿನಾಶ ತೀರ್ಥದಲ್ಲಿ ತೇಲುವ ಜೆಟ್ಟಿ ಹಾಗೂ ಸುರಕ್ಷಿತ ಸ್ನಾನ ವ್ಯವಸ್ಥೆ ಕಲ್ಪಿಸಲಾಗುತ್ತದೆ. ದೇವಸ್ಥಾನದ ಮಾರ್ಗದಲ್ಲಿ 30 ಅಂಗಡಿಗಳು, ಮಾಹಿತಿ ಕೇಂದ್ರ ಮತ್ತು ವಿದ್ಯುತ್ ದೀಪಾಲಂಕಾರ ವ್ಯವಸ್ಥೆ ನಿರ್ಮಿಸಲಾಗುತ್ತದೆ. ಉದ್ಯಾನವನ, ಶೌಚಾಲಯ, ವಿಶ್ರಾಂತಿ ಸ್ಥಳಗಳು ಸೇರಿದಂತೆ ಯಾತ್ರಿಕರಿಗೆ ಸೂಕ್ತ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ.

ಅಂಗವಿಕಲರಿಗೆ ವಿಶೇಷ ಪ್ರವೇಶ ವ್ಯವಸ್ಥೆ ಕಲ್ಪಿಸುವ ಜತೆಗೆ, ಭಕ್ತರ ಅನುಕೂಲಕ್ಕಾಗಿ ಪ್ರತ್ಯೇಕ ದರ್ಶನ ಪ್ರವೇಶ ಮತ್ತು ನಿರ್ಗಮನ ವ್ಯವಸ್ಥೆಯನ್ನೂ ರೂಪಿಸಲಾಗುತ್ತದೆ.

ಗಾಣಗಾಪುರ ಒಂದು ದೊಡ್ಡ ಯಾತ್ರಾಸ್ಥಳ ಆಗಿರುವುದರಿಂದ ಅಪಾರ ಸಂಖ್ಯೆಯ ಭಕ್ತರು ಆಗಮಿಸುತ್ತಾರೆ. ಹಾಗಾಗಿ ಭೀಮಾ ನದಿ ತೀರದ ಸೌಂದರ್ಯೀಕರಣ, ಸುಸಜ್ಜಿತ ವಾಹನ ನಿಲುಗಡೆ ವ್ಯವಸ್ಥೆ ಹಾಗೂ ಆಧುನಿಕ ಮೂಲಸೌಕರ್ಯಗಳ ಮೂಲಕ ಗಾಣಗಾಪುರವನ್ನು ಪ್ರಮುಖ ಧಾರ್ಮಿಕ ಮತ್ತು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವುದು ಯೋಜನೆಯ ಮುಖ್ಯ ಉದ್ದೇಶವಾಗಿದೆ.

ಈ ಯೋಜನೆಯಿಂದ ಶ್ರೀಕ್ಷೇತ್ರಕ್ಕೆ ಆಗಮಿಸುವ ಭಕ್ತರು ಮತ್ತು ಪ್ರವಾಸಿಗರಿಗೆ ಹೆಚ್ಚಿನ ಅನುಕೂಲವಾಗುವುದರ ಜತೆಗೆ ಕಲಬುರಗಿ ಜಿಲ್ಲೆಯ ಆರ್ಥಿಕ ಚಟುವಟಿಕೆಗಳು ಹಾಗೂ ಪ್ರವಾಸೋದ್ಯಮಕ್ಕೂ ಉತ್ತೇಜನ ದೊರೆಯಲಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಶಿಕ್ಷಣ ಕ್ಷೇತ್ರಕ್ಕೆ 55 ಸಾವಿರ ಕೋಟಿ ರೂ. ಮೀಸಲು: ಸಚಿವ ರಾಯರೆಡ್ಡಿ

ಕಲಬುರಗಿ, ನ. 10: ರಾಜ್ಯದ ಒಟ್ಟು ರೂ.4.48 ಲಕ್ಷ ಕೋಟಿ ಮೊತ್ತದ ಬಜೆಟ್‌ನಲ್ಲಿ ಶಿಕ್ಷಣ ಕ್ಷೇತ್ರಕ್ಕೆ ರೂ.55,000 ಕೋಟಿ (ಶೇ. 11.6) ಮೀಸಲಿಡಲಾಗಿದೆ. ಗುಣಮಟ್ಟದ ಶಿಕ್ಷಣಕ್ಕಾಗಿ ರಾಜ್ಯದ ವಿವಿಧ ಕಾಲೇಜುಗಳಲ್ಲಿರುವ 1000 ಬೋಧಕ ಹುದ್ದೆಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರುವ 1000 ಪ್ರಾಧ್ಯಾಪಕ ಹಾಗೂ 320 ಪ್ರಾಂಶುಪಾಲರ ಹುದ್ದೆಗಳನ್ನು ಮೆರಿಟ್‌ಆಧಾರದ ಮೇಲೆ ಶೀಘ್ರದಲ್ಲೇ ಭರ್ತಿ ಮಾಡಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರೆಡ್ಡಿ ಹೇಳಿದರು.

ಆಳಂದ ಕಾಲೇಜು ಆವರಣದಲ್ಲಿ 2017–18ನೇ ಸಾಲಿನ ತಾಂತ್ರಿಕ ಶಿಕ್ಷಣ ಯೋಜನೆ ಅಡಿಯಲ್ಲಿ 8 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗಿರುವ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ನೂತನ ಕಟ್ಟಡ ಹಾಗೂ ಕಾಲೇಜು ಶಿಕ್ಷಣ ಇಲಾಖೆಯ 2023–24ನೇ ಸಾಲಿನ ಕೆ.ಕೆ.ಆರ್.ಡಿ.ಬಿ. (ಮ್ಯಾಕ್ರೋ/ಮೈಕ್ರೋ) ಯೋಜನೆ ಅಡಿಯಲ್ಲಿ ರೂ. 5.26 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾ ಗಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ನೂತನ ಕಟ್ಟಡವನ್ನು ಸಚಿವರು ಉದ್ಘಾಟಿಸಿ ಮಾತಾಡಿದರು.

ಕಾಲೇಜುಗಳಲ್ಲಿ ಖಾಲಿ ಇರುವ 320 ಪ್ರಾಂಶುಪಾಲರ ಹುದ್ದೆ, ಪಾಲಿಟೆಕ್ನಿಕ್‌ಕಾಲೇಜುಗಳಿಗೆ 800 ಹುದ್ದೆ, ಮತ್ತು ಯೂನಿವರ್ಸಿಟಿಗಳಿಗೆ ಪ್ರೊಫೆಸರ್‌ಗಳು ಉಪನ್ಯಾಸಕರು ಸೇರಿದಂತೆ 1000 ಹುದ್ದೆಗಳನ್ನು ಯಾವುದೇ ಕರಪ್ಷನ್‌ಇಲ್ಲದೆ ನೇರವಾಗಿ ಮೆರಿಟ್‌ಆಧಾರದ ಮೇಲೆ ನೇಮಕ ಮಾಡಲಾಗುವುದು ಎಂದರು.

ನಮ್ಮ ಸರ್ಕಾರದ ಬದ್ಧತೆಯಿಂದಾಗಿ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಪ್ರತಿವರ್ಷ ರೂ.5,000 ಕೋಟಿ ಅನುದಾನ ನೀಡಲಾಗುತ್ತಿದ್ದು, 371(ಜೆ) ವಿಧಿ ಅನುಷ್ಠಾನದಿಂದ ಈ ಭಾಗದ ಯುವಕರಿಗೆ ಉದ್ಯೋಗ ಮತ್ತು ಶಿಕ್ಷಣದಲ್ಲಿ ದೊಡ್ಡ ಪ್ರಮಾಣದ ಮೀಸಲಾತಿ ಸಿಗುತ್ತಿದೆ. ಪಿಡಬ್ಲ್ಯೂಡಿ ಅಪೆಂಡಿಕ್ಸ್ ಅಡಿಯಲ್ಲಿ ರೂ.50 ಕೋಟಿ, ಎಚ್‌ಎಚ್‌ಡಿಪಿ ಅಡಿಯಲ್ಲಿ ರೂ.50 ಕೋಟಿ, ಗ್ರಾಮೀಣ ಅಭಿವೃದ್ಧಿ ಇಲಾಖೆಯಿಂದ ರಸ್ತೆ ಹಾಗೂ ಗ್ರಾ.ಪಂ. ಅಭಿವೃದ್ಧಿಗೆ ವಿಶೇಷ



ಅನುದಾನ ನೀಡಲಾಗುತ್ತಿದೆ ಎಂದರು.

ಇದಕ್ಕೂ ಮುನ್ನ ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ್ ಕಲಬುರಗಿ ಸಂಯುಕ್ತ ಆಶ್ರಯದಲ್ಲಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಸಹಭಾಗಿತ್ವದಲ್ಲಿ ಆಳಂದ ಟೌನ್‌ನಲ್ಲಿ ರೂ.5 ಕೋಟಿ ರೂ. ಮೆಟ್ರಿಕ್‌ನಂತರದ ಬಾಲಕರ ವಸತಿ ನಿಲಯ ನಿರ್ಮಾಣಕ್ಕಾಗಿ ಅಡಿಗಲ್ಲು ಸಮಾರಂಭವು ನೆರವೇರಿಸಿದರು. ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನೆ ಆಯೋಗದ ಉಪಾಧ್ಯಕ್ಷ ಬಿ.ಆರ್.ಪಾಟೀಲ್ ಮಾತನಾಡಿ, ಆಳಂದ ತಾಲೂಕಿನಲ್ಲಿ ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರೆಡ್ಡಿ ಅವರ ನೇತೃತ್ವದಲ್ಲಿ ಜಂಟಿ ಕಾಲೇಜು ಕಟ್ಟಡಗಳ ಉದ್ಘಾಟನಾ ಸಮಾರಂಭವು ನೆರವೇರಿತು. ಅಂದು ಎರಡು ಕಾಲೇಜುಗಳನ್ನು ಮಂಜೂರು ಮಾಡಿಸಿ, ಹಿಂದಿನ ಸರ್ಕಾರದ ಅವಧಿಯಲ್ಲಿ ಕಳಪೆಯಾಗಿದ್ದ ಕಟ್ಟಡಗಳನ್ನು ಸರಿಪಡಿಸಿ, ಪ್ರಸ್ತುತ ಹೊಸದಾಗಿ ಅತ್ಯುತ್ತಮ ಕಟ್ಟಡಗಳನ್ನು ನಿರ್ಮಿಸಿ ಲೋಕಾರ್ಪಣೆ ಮಾಡಲಾಗಿದೆ ಎಂದು ಸಚಿವರು ತಿಳಿಸಿದರು.

ಬೀದರ ಕ್ಷೇತ್ರದ ಸಂಸದ ಸಾಗರ ಈಶ್ವರ ಖಂಡ್ರೆ ಅತಿಥಿಗಳಾಗಿ ಮಾತನಾಡಿ, ಅಭಿವೃದ್ಧಿ ಮತ್ತು ಶಿಕ್ಷಣ: ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಸುಧಾರಣೆಗಳು, ಕಾಲೇಜುಗಳ ನಿರ್ಮಾಣ ಹಾಗೂ ಉತ್ತಮ ಸಿಬ್ಬಂದಿ ನೇಮಕಾತಿಯ ಅವಶ್ಯಕತೆಯಿದೆ. ಈಗಾಗಲೇ ಬರಗಾಲ ಘೋಷಣೆಯಾಗಿದ್ದು, ಕೇಂದ್ರ ಹಾಗೂ ರಾಜ್ಯ ಸರ್ಕಾರದ ವತಿಯಿಂದ ಸಂತ್ರಸ್ತರಿಗೆ ಸೂಕ್ತ ಪರಿಹಾರ ಮತ್ತು ವಿಮೆ ದೊರೆಯುವಂತೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ವಿಧಾನ ಪರಿಷತ್ ಸದಸ್ಯ ತಿಪ್ಪಣ್ಣಪ್ಪ ಕಮಕನೂರ ಮಾತನಾಡಿ, ರಾಜ್ಯ ರಾಜಕಾರಣದಲ್ಲಿ ಎಂಟು ಬಾರಿ ಶಾಸಕರು, ಸಂಸದರು ಹಾಗೂ ಮಂತ್ರಿಯಾಗಿ ಸೇವೆ ಸಲ್ಲಿಸಿರುವ ಬಸವರಾಜ ರಾಯರೆಡ್ಡಿ ಅವರ ಆಡಳಿತಾತ್ಮಕ ಅನು ಭವ ಮತ್ತು ಕೊಡುಗೆ ಅಪಾರ ಎಂದು ಬಣ್ಣಿಸಿದರು. ಮಾಜಿ ಸಿಎಂ ಸಿದ್ದರಾಮಯ್ಯನವರ ನೇತೃತ್ವದ ಬಜೆಟ್‌ಗಳಲ್ಲಿ ರಾಯರೆಡ್ಡಿಯವರ ಪಾತ್ರ ದೊಡ್ಡದಿದೆ ಎಂದು ತಿಳಿಸುತ್ತಾ, ಆಳಂದ ಕ್ಷೇತ್ರದ ಶಾಸಕ ಬಿ.ಆರ್. ಪಾಟೀಲ್ ಅವರು ಕ್ಷೇತ್ರದಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳನ್ನು ಕೊಂಡಾಡಿದರು.

ಜಿಲ್ಲೆಯಲ್ಲಿ ಅತಿ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ತರುವ ಮೂಲಕ, ಬಾಬಾಸಾಹೇಬ್‌ಅಂಬೇಡ್ಕರ್ ಶಿಕ್ಷಣದ ಕನಸನ್ನು ನನಸು ಮಾಡಲು ಬಿ. ಆರ್.ಪಾಟೀಲ್ ಮತ್ತು ಪ್ರಿಯಾಂಕ್‌ಖರ್ಗೆ ಶ್ರಮಿಸುತ್ತಿದ್ದಾರೆ ಎಂದು ಪ್ರಶಂಸಿಸಿದರು. ಅಲ್ಲದೆ, ಕಷ್ಟದ ಕಾಲದಲ್ಲೂ ರೂ. 650 ಕೋಟಿಗೂ ಅಧಿಕ ಅನುದಾನ ತಂದು ಕ್ಷೇತ್ರವನ್ನು ಅಭಿವೃದ್ಧಿಪಡಿಸಿರುವ ಬಿ. ಆರ್.ಪಾಟೀಲ್ ಕಾರ್ಯ ವೈಖರಿಯನ್ನು ಸಭೆಯಲ್ಲಿ ಸ್ಮರಿಸಲಾಯಿತು.

ಬರಪರಿಹಾರ: ರೈತರ ಖಾತೆಗಳಿಗೆ ಜಮಾ ಮಾಡದೆ ತಾರತಮ್ಯ

ನಿಗದಿತ ಮೊತ್ತದ ಬದಲು 1500 ರಿಂದ 2000 ರೂ. ಮಾತ್ರ ಜಮಾ ಆಗಿದೆ: ರೈತರ ದೂರು

ಯಾದಗಿರಿ, ನ.10: ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತೀವ್ರ ಬರಗಾಲದಿಂದ ಸಂಕಷ್ಟದಲ್ಲಿರುವ ರೈತರಿಗೆ ಬರ ಪರಿಹಾರ (ಇನ್‌ಪುಟ್ ಸಬ್ಸಿಡಿ) ಮೊತ್ತವನ್ನು ಒಟ್ಟು 5,000 ರೂಗಳಿಗೆ ಏರಿಸಿ, ಮೊದಲ ಕಂತಿನಲ್ಲಿ 2,500 ಹಣವನ್ನು ನೇರವಾಗಿ ರೈತರ ಖಾತೆಗೆ ವರ್ಗಾಯಿಸುವ ಪ್ರಕ್ರಿಯೆಗೆ ಯಾದಗಿರಿಯಲ್ಲಿ ಚಾಲನೆ ನೀಡಿದ್ದರು. ಆದರೆ ಪ್ರಸ್ತುತ ರೈತರ ಖಾತೆಗಳಿಗೆ ನಿರೀಕ್ಷಿತ ಮೊತ್ತ ಜಮೆಯಾಗದೆ ತಾರತಮ್ಯ ಎಸಗಲಾಗಿದೆ ಎಂಬ ದೂರುಗಳು ಕೇಳಿಬರುತ್ತಿದೆ.

ಯಾದಗಿರಿ ಹಾಗೂ ಗದಗ ಸೇರಿ ರಾಜ್ಯದ ಕೆಲವು ಜಿಲ್ಲೆಗಳಲ್ಲಿ ರೈತರ ಬ್ಯಾಂಕ್ ಖಾತೆಗಳಿಗೆ ನಿಗದಿತ ಮೊತ್ತದ ಬದಲು ಕೇವಲ 1,500 ರಿಂದ 2,000 ಮಾತ್ರ ಜಮೆಯಾಗಿರುವುದು ಈ ಹೊಸ ವಿವಾದಕ್ಕೆ ಕಾರಣವಾಗಿದೆ.

ಸಚಿವರ ಸ್ಪಷ್ಟನೆ



ಯಾದಗಿರಿ ಮತ್ತು ಗದಗ ಜಿಲ್ಲೆಗಳಲ್ಲಿ ಪರಿಹಾರ ಮೊತ್ತದ ವಿತರಣೆಯಲ್ಲಿ ತಾಂತ್ರಿಕವಾಗಿ ಸ್ವಲ್ಪ ವ್ಯತ್ಯಾಸವಾಗಿರುವ ಮಾಹಿತಿ ಬಂದಿದೆ. ಬ್ಯಾಂಕ್ ರಜೆ ಇದ್ದ ಕಾರಣ ತಕ್ಷಣವೇ ಸಂಪೂರ್ಣ ವಿವರ ಪಡೆಯಲು ಸಾಧ್ಯವಾಗಿಲ್ಲ, ಶೀಘ್ರದಲ್ಲೇ ಅಧಿಕಾರಿಗಳಿಂದ ವರದಿ ಪಡೆದು ಸಮಸ್ಯೆಯನ್ನು ಬಗೆಹರಿಸಲಾಗುವುದು ಎಂದು ಸಚಿವ ಪ್ರಿಯಾಂಕ್ ಖರ್ಗೆ ಸ್ಪಷ್ಟಪಡಿಸಿದ್ದಾರೆ. ಸಚಿವ ಎಂ.ಬಿ. ಪಾಟೀಲ್ ಕೂಡ ಪ್ರತಿಕ್ರಿಯಿಸಿ, ರೈತರಿಗೆ ನೀಡಿರುವ ಭರವಸೆಯಂತೆ ಪೂರ್ಣ ಪ್ರಮಾಣದ ಹಣವನ್ನು ತಲುಪಿಸಲು ಸರ್ಕಾರ ಬದ್ಧವಾಗಿದೆ, ರೈತರು ಆತಂಕ ಪಡುವ ಅಗತ್ಯವಿಲ್ಲ ಎಂದು ಭರವಸೆ ನೀಡಿದ್ದಾರೆ.

ರಾಜ್ಯ ಕಾಂಗ್ರೆಸ್ ಸರ್ಕಾರವು ಒಟ್ಟು 5,000 ಬರ ಪರಿಹಾರದ ಪೈಕಿ ಮೊದಲ ಕಂತಾಗಿ 2,500 ಬಿಡುಗಡೆ ಮಾಡುವುದಾಗಿ ತಿಳಿಸಿತ್ತು. ಆದರೆ ಸೋಮವಾರ ರೈತರ ಖಾತೆಗಳನ್ನು ಪರಿಶೀಲಿಸಿದಾಗ ಒಬ್ಬೊಬ್ಬರಿಗೆ ಒಂದೊಂದು ರೀತಿಯಲ್ಲಿ ಅಂದರೆ ಕೆಲವರಿಗೆ 1,500, ಇನ್ನು ಕೆಲವರಿಗೆ 2,000 ಹಣ ಜಮೆಯಾಗಿದೆ. ಇದರೊಂದಿಗೆ, ಸಣ್ಣರೈತರಿಗೆ ಗುಂಟೆ ಆಧಾರದ ಲೆಕ್ಕಾಚಾರದಲ್ಲಿ ಕೇವಲ 85ರಂತೆ ಪರಿಹಾರ ಸಿಗುತ್ತಿದೆ ಎಂಬ ಗಂಭೀರ ಆರೋಪಗಳು ಕೇಳಿಬಂದಿವೆ.

ನ.5ರಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು

ಲೈಂಗಿಕ ದೌರ್ಜನ್ಯದಿಂದ ಮಕ್ಕಳನ್ನು ರಕ್ಷಿಸಿ: ಶಾರದಾ ಕಲ್ಮಲಕರ್ ಕರೆ

ಬೀದರ್‌ಮ, ನ. 10: ಬಾಲ್ಯ ವಿವಾಹ, ಬಾಲಕಾರ್ಮಿಕತೆ ಹಾಗೂ ಲೈಂಗಿಕ ದೌರ್ಜನ್ಯದಿಂದ ಮಕ್ಕಳನ್ನು ರಕ್ಷಿಸಿ, ಅವರಿಗೆ ಸುರಕ್ಷಿತ ಬಾಲ್ಯ ಒದಗಿಸಲು ಎಲ್ಲ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಶಾರದಾ ಎನ್. ಕಲ್ಮಲಕರ್ ಹೇಳಿದರು.

ಮಕ್ಕಳು ದೇಶದ ಸಂಪತ್ತು. ಭಾರತದಲ್ಲಿ ಶೇ 42ರಷ್ಟು ಮಕ್ಕಳು ಇದ್ದಾರೆ. ಪ್ರತಿಯೊಂದು ಮಗುವೂ ಸುರಕ್ಷಿತವಾಗಿ ಬಾಲ್ಯವನ್ನು ಅನುಭವಿಸುವಂತಾಗಬೇಕು ಎಂಬ ಉದ್ದೇಶದಿಂದ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದ ಮೇರೆಗೆ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ 'ಸುರಕ್ಷಿತ ಬಚಪನ್ ಅಭಿಯಾನ'ದಡಿ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ.

18 ವರ್ಷದೊಳಗಿನ ಮಕ್ಕಳು ಬಾಲ್ಯವಿವಾಹ, ಬಾಲಕಾರ್ಮಿಕತೆ



ಹಾಗೂ ಪೋಕ್ಸೊ ಪ್ರಕರಣಗಳಿಗೆ ಬಲಿಯಾಗುತ್ತಿರುವುದು ಆತಂಕಕಾರಿ ಸಂಗತಿಯಾಗಿದೆ. ಪ್ರತಿಯೊಂದು ಮಗುವಿಗೂ ಬದುಕುವ ಮತ್ತು ಶಿಕ್ಷಣ ಪಡೆಯುವ ಹಕ್ಕಿದೆ. ಮಕ್ಕಳ ಹಕ್ಕುಗಳ ರಕ್ಷಣೆ ಎಲ್ಲರ ಜವಾಬ್ದಾರಿಯಾಗಿದ್ದು, ಬೀದರ್ ಜಿಲ್ಲೆಯನ್ನು ಬಾಲ್ಯವಿವಾಹ ಮತ್ತು ಪೋಕ್ಸೊ ಪ್ರಕರಣಗಳಿಂದ ಮುಕ ಗೊಳಿಸಲು ಎಲ್ಲ ಸಹಭಾಗಿತ್ವದ ಇಲಾಖೆಗಳು ಕೈಜೋಡಿಸಬೇಕು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಶಂಕರ ಗಣಗೊಂಡ ಮಾತನಾಡಿ, ಮಕ್ಕಳ ಸುರಕ್ಷತೆಗಾಗಿ ಶಾಲಾ–ಕಾಲೇಜುಗಳಲ್ಲಿ ಜಾಗೃತಿ ಮೂಡಿಸುವ ಇಂತಹ ವಿನೂತನ ಕಾರ್ಯಕ್ರಮಗಳು ಶ್ಲಾಘನೀಯ. ಇಂತಹ ಅಭಿಯಾನಗಳು ನಿರಂತರವಾಗಿ ನಡೆಯಬೇಕು.

ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ರಕ್ಷಣಾಧಿಕಾರಿ ಗೌರಿಶಂಕರ ಪರತಾಪೂರೆ ಅವರು ಬಾಲ್ಯವಿವಾಹದಿಂದ ಉಂಟಾಗುವ ದುಷ್ಪರಿಣಾಮಗಳು ಹಾಗೂ ಅದಕ್ಕೆ ವಿಧಿಸಲಾಗುವ ಶಿಕ್ಷೆಯ ಕುರಿತು ಮಾಹಿತಿ ನೀಡಿದರು. ಸುರೇಖಾ ಅವರು ಪೋಕ್ಸೊ ಕಾಯ್ದೆಯ ವಿವಿಧ ಅಂಶಗಳ ಕುರಿತು ವಿದ್ಯಾರ್ಥಿಗಳಿಗೆ ತಿಳಿಸಿದರು.

ವಿಕಾಸ್ ಸೌಹಾರ್ದ ಸಹಕಾರಿ ಬ್ಯಾಂಕ್ ವಿರುದ್ಧ ಗಂಭೀರ ಆರೋಪ ಅಧ್ಯಕ್ಷ, ಸಿಇಒ, ಮ್ಯಾನೇಜರ್ ವಿರುದ್ಧ ಬಳ್ಳಾರಿಯಲ್ಲಿ ಪ್ರಕರಣ ದಾಖಲು

ಬಳ್ಳಾರಿ, ನ.10–ಬಳ್ಳಾರಿ ಹಾಗೂ ಹೊಸಪೇಟೆಯಲ್ಲಿ ಶಾಖೆಗಳನ್ನು ಹೊಂದಿರುವ ವಿಕಾಸ್ ಸೌಹಾರ್ದ ಕೋ–ಆಪರೇಟಿವ್ ಬ್ಯಾಂಕ್ ಇದೀಗ ಗಂಭೀರ ಆರೋಪಗಳಿಂದ ಸುದ್ದಿಯಲ್ಲಿದೆ.

ಖಾತೆದಾರರ ಅನುಮತಿ, ಸಹಿ ಹಾಗೂ ಅಗತ್ಯ ದಾಖಲೆಗಳಿಲ್ಲದೆ ಕೋಟ್ಯಂತರ ರೂಪಾಯಿ ಸಾಲ ಮಂಜೂರು ಮಾಡಲಾಗಿದೆ ಎಂದು ಆರೋಪಿಸಿ ಬ್ಯಾಂಕಿನ ಆಡಳಿತ ಮಂಡಳಿಯ ಅಧ್ಯಕ್ಷರಾದ,(1)ವಿಶ್ವನಾಥ ಹಿರೇಮಠ, (2)ಪ್ರಸನ್ನ ಹಿರೇಮಠ ಸಿಇಒ ಮತ್ತು ಮ್ಯಾನೇಜರ್ ಆಗಿರುವ (3)ಮಹೇಶ್ ಕಿಲ್ಲಿ ಕ್ಯಾತರ್ ಅವರ ವಿರುದ್ಧ ಕರ್ನಾಟಕ ಮತ್ತು ಆಂಧ್ರಪ್ರದೇಶದಲ್ಲಿ ಪ್ರಕರಣಗಳು ದಾಖಲಾಗಿವೆ.

ಖಾತೆದಾರರ ಗಮನಕ್ಕೆ ಬಾರದೆ 9.73 ಕೋಟಿ ಸಾಲ ಮಂಜೂರು

ಬಳ್ಳಾರಿಯ ಪ್ರಮುಖ ಟೂರ್ ಅಂಡ್ ಟ್ರಾವೆಲ್ಸ್ ಉದ್ಯಮಿಗೆ ಸಂಬಂಧಿಸಿದ ಸಂಸ್ಥೆಯೊಂದು ಕಳೆದ ಹಲವು ವರ್ಷಗಳಿಂದ ವಿಕಾಸ್ ಸೌಹಾರ್ದ ಬ್ಯಾಂಕಿನಲ್ಲಿ ವಿವಿಧ ಖಾತೆಗಳನ್ನು ಹೊಂದಿದ್ದು, ಕೋಟ್ಯಂತರ ರೂಪಾಯಿ ಹಣಕಾಸು ವ್ಯವಹಾರ ನಡೆಸಿಕೊಂಡು ಬಂದಿದ್ದಾರೆ ಆದಾಯ ಕೂಡ ಹರಿದು ಬಂದಿದೆ.

ಸಂಸ್ಥೆಯು ಬಳ್ಳಾರಿಯ ಪಾರ್ವತಿನಗರ ಶಾಖೆಯಲ್ಲಿ ಚಾಲ್ತಿಖಾತೆ, ಉಳಿತಾಯ ಖಾತೆ ಸೇರಿದಂತೆ ವಿವಿಧ ಖಾತೆಗಳನ್ನು ಹೊಂದಿದ್ದಾರೆ.

2017ರಿಂದ ಬ್ಯಾಂಕಿನಲ್ಲಿ ವ್ಯವಹಾರ ನಡೆಸುತ್ತಿದ್ದು, ಸಂಸ್ಥೆಯು ಈ ಹಿಂದೆ ಪಡೆದಿದ್ದ ಸಾಲಗಳ ಮರುಪಾವತಿಗೆ ಇನ್ನೂ ಎರಡು ವರ್ಷಗಳ ಕಾಲಾವಕಾಶವಿತ್ತು ಎಂದು ದೂರುದಾರರು ತಿಳಿಸಿದ್ದಾರೆ.

31–03–2020ರ ವೇಳೆಗೆ ಸಂಸ್ಥೆಯ ಹಳೆಯ ಸಾಲಗಳ ಒಟ್ಟು ಬಾಕಿ 3,80,53,895 ಇತ್ತು ಎಂದು,ಆದರೆ, ಮಾಲೀಕರ ಅನುಮತಿ ಇಲ್ಲದೆ, ಯಾವುದೇ ಸಹಿ ಅಥವಾ ಸಾಲದ ಮನವಿ ಅರ್ಜಿಗಳಿಲ್ಲದೆ ಸಂಸ್ಥೆಯ ಹೆಸರಿನಲ್ಲಿ ಹಾಗೂ ಕುಟುಂಬದ ಸದಸ್ಯರಾದ ಕೆ. ಲಾವಣ್ಯ ಮತ್ತು ಕೆ. ಸುನಿತಾ ಅವರ ಹೆಸರಿನಲ್ಲಿ ವೈಯಕ್ತಿಕ ಸಾಲಗಳನ್ನು ಒಳಗೊಂಡಂತೆ ಒಟ್ಟು 9,73,34,000 ಸಾಲ ಮಂಜೂರು ಮಾಡಲಾಗಿದೆ ಎಂದು ಬ್ಯಾಂಕ್ ನಲ್ಲಿ ಖಾತೆಯಲ್ಲಿ ವ್ಯವಹಾರ ನಡೆಸಿದ್ದು,



ದೂರುದಾರರ ಗಂಭೀರ ಆರೋಪವಾಗಿದೆ.

ಈ ಸಾಲಗಳ ಬಗ್ಗೆ ಖಾತೆ ದಾರರಿಗೆ ಯಾವುದೇ ಮಾಹಿತಿ ಇರಲಿಲ್ಲ

ಬ್ಯಾಂಕ್ ಅಧಿಕಾರಿಗಳು ದಾಖಲೆಗಳನ್ನು ನಕಲಿ ಸೃಷ್ಟಿಸಿ,ಸಾಲ ಮಂಜೂರಾಗಿದೆ ಎಂದು ತೋರಿಸಿದ್ದಾರೆ.

ಅಲ್ಲದೆ, ಅನಧಿಕೃತವಾಗಿ ಸಾಲ ಮಂಜೂರು ಮಾಡಿ ಬ್ಯಾಂಕಿನ ದಾಖಲೆಗಳನ್ನು ತಿರುಚಿದ್ದಾರೆ ಎಂದು ದೂರುದಾರರು ಆರೋಪಿಸಿದ್ದಾರೆ.

ಕೆಲ ದಿನಗಳ ತದನಂತರ ಇ–ಮೇಲ್ ಮೂಲಕ ಸಾಲದ ಅರ್ಜಿಗಳು ಬಂದಾಗ ಬಯಲಾದ ವಿಚಾರ.

ಬ್ಯಾಂಕಿನ ನಲ್ಲಿ ಇ–ಮೇಲ್ ಮೆಸೇಜ್ ಮೂಲಕ ಸಾಲ ಪಡೆದಿರುವ ಮಾಹಿತಿ ಗೊತ್ತಾಗಿದೆ .ಬ್ಯಾಂಕ್ ನವರು ಸಾಲದ ಮನವಿ ಅರ್ಜಿಗಳನ್ನು ಸಂಸ್ಥೆಗೆ ಕಳುಹಿಸಲಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಅವುಗಳನ್ನು ಪರಿಶೀಲಿಸಿದಾಗ ತಮ್ಮ ಗಮನಕ್ಕೆ ಬಾರದೆ ಸಾಲಗಳನ್ನು ಮಂಜೂರು ಮಾಡಿರುವುದು ತಿಳಿದುಬಂದಿದೆ ಎಂದು ದೂರುದಾರರು ತಿಳಿಸಿದ್ದಾರೆ.

ತಕ್ಷಣವೇ ಬ್ಯಾಂಕಿಗೆ ತೆರಳಿ ಈ ಕುರಿತು ಮಾಹಿತಿ ಕೇಳಿದಾಗ, ಸಾಲದ ಹಣವನ್ನು ನೀವೇ ಮರುಪಾವತಿಸಬೇಕು ಎಂದು ಬ್ಯಾಂಕ್ ಅಧಿಕಾರಿಗಳು ತಿಳಿಸಿದ್ದು, 2021 ಮತ್ತು 2024ರಲ್ಲಿ ನೋಟಿಸ್‌ಗಳನ್ನು ನೀಡಿದ್ದಾರೆ ಎಂಬ ಆರೋಪವೂ ಕೇಳಿಬಂದಿದೆ.

ನಂತರ ಸಂಸ್ಥೆಯ ಲೆಕ್ಕಪತ್ರಗಳು, ಬ್ಯಾಂಕ್ ದಾಖಲೆಗಳು ಹಾಗೂ ಸಾಲದ ವ್ಯವಹಾರಗಳನ್ನು ಲೆಕ್ಕಪರಿಶೋಧಕರು ಮತ್ತು ಹಣಕಾಸು ತಜ್ಞರಿಂದ ಪರಿಶೀಲಿಸಿದಾಗ ಹಲವು ಅನುಮಾನಾಸ್ಪದ ವ್ಯವಹಾರಗಳು ಬೆಳಕಿಗೆ ಬಂದಿವೆ ಎಂದು ದೂರುದಾರರು ತಿಳಿಸಿದ್ದಾರೆ.

ಬೀದರ್–ಬೆಂಗಳೂರು ವಿಮಾನ ಸಂಚಾರ ಮತ್ತೆ ಸ್ಥಗಿತ...!

ಬೀದರ್, ನ. 10: ಬೀದರ್–ಬೆಂಗಳೂರು ನಡುವೆ ನಿತ್ಯ ಸಂಚರಿಸುತ್ತಿದ್ದ 'ಸ್ಟಾರ್ ಏರ್' ವಿಮಾನ ಸೇವೆ ದಿಢೀರನೆ ಸ್ಥಗಿತಗೊಳಿಸಿದೆ. ನವೆಂಬರ್ 1ರಿಂದಲೇ ವಿಮಾನ ಸಂಚಾರ ನಿಂತು ಹೋಗಿದೆ.

ಮುಂಗಡವಾಗಿ ಟಿಕೆಟ್ ಕಾಯ್ದಿರಿಸಿಕೊಳ್ಳುವುದಕ್ಕೂ ಅವಕಾಶ ಇಲ್ಲ. ಈ ಕುರಿತು ಘೋಡಾವತ್ ಎಂಟರ್‌ಪ್ರೈಸೆಸ್ ಲಿಮಿಟೆಡ್‌ಗೆ ಸೇರಿದ 'ಸ್ಟಾರ್ ಏರ್' ಯಾವುದೇ ನಿಖರ ಕಾರಣ ನೀಡಿಲ್ಲ. ಆದರೆ, ಏಕಾಏಕಿ ವಿಮಾನ ಸೇವೆ ನಿಂತಿರುವುದರಿಂದ ಜನ ತೊಂದರೆ ಅನುಭವಿಸುತ್ತಿದ್ದಾರೆ.

ತೈಲ ಬೆಲೆಯಲ್ಲಿ ಏರಿಕೆಯಾಗಿರುವುದರಿಂದ ವಿಮಾನಯಾನ ಕಂಪನಿಯು ಇನ್ನೂ ಹೆಚ್ಚಿನ ಪ್ರೋತ್ಸಾಹ ಧನಕ್ಕೆ ಬೇಡಿಕೆ ಇರಿಸಿದೆ. ಆದರೆ, ಸರ್ಕಾರದ ಮಟ್ಟದಲ್ಲಿ ಸೂಕ್ತ ಸ್ಪಂದನೆ ಸಿಗದ ಕಾರಣ ಈ ತೀರ್ಮಾನಕ್ಕೆ ಬಂದಿದೆ ಎಂದು ಗೊತ್ತಾಗಿದೆ.

ಕಳೆದ ಕೆಲವು ದಿನಗಳಿಂದ ವಿಮಾನದ ಸಂಚಾರದ ಸಮಯದಲ್ಲಿ ಪದೇ ಪದೇ ಬದಲಾವಣೆ ಮಾಡಲಾಗುತ್ತಿತ್ತು. ಇದರಿಂದ ಪ್ರಯಾಣಿಕರ ಸಂಖ್ಯೆ ಕೂಡ ಇಳಿಮುಖವಾಗಿತ್ತು. ಕೆಲವು ದಿನಗಳಲ್ಲಂತೂ ಯಾವುದೇ ಬುಕಿಂಗ್ ಆಗದಿರುವುದು ಇನ್ನೊಂದು ಕಾರಣ ಎಂದು ಹೆಸರು ಹೇಳಲಿಚ್ಛಿಸಿದ ವಿಮಾನ ನಿಲ್ದಾಣದ ಸಿಬ್ಬಂದಿಯೊಬ್ಬರು ತಿಳಿಸಿದ್ದಾರೆ.

ಒಪ್ಪಂದದ ಅವಧಿ ಕೊನೆಗೊಂಡಿದ್ದರಿಂದ ಈ ಸಾಲಿನ ಏಪ್ರಿಲ್ 15ರಂದು ವಿಮಾನ



ಸೇವೆ ಸ್ಥಗಿತಗೊಂಡಿತ್ತು. ಬಳಿಕ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ) ಹಾಗೂ ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಿಂದ 80:20ರ ಅನುಪಾತದಲ್ಲಿ ?13.48 ಕೋಟಿ ಪ್ರೋತ್ಸಾಹ ಧನ ಪಾವತಿಸಿದ ನಂತರ ಮೇ ನಲ್ಲಿ ವಿಮಾನ ಸೇವೆ ಪುನಃ ಆರಂಭಗೊಂಡಿತ್ತು.

ತೀವ್ರ ಕಸರತ್ತಿನ ನಂತರ ಆರಂಭ: ಹೋದ ವರ್ಷ ಸ್ಥಗಿತಗೊಂಡಿದ್ದ ವಿಮಾನಯಾನ ಸೇವೆ ತೀವ್ರ ಕಸರತ್ತಿನ ನಂತರ ಆರಂಭಗೊಂಡಿತ್ತು. ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ. ಖಂಡ್ರೆ ಅವರು ವಿಶೇಷ ಮುತುವರ್ಜಿ ವಹಿಸಿ, ಬೀದರ್–ಬೆಂಗಳೂರು, ಬೆಂಗಳೂರು–ಬೀದರ್ ನಡುವೆ ನಾಗರಿಕ ವಿಮಾನಯಾನ ಸೇವೆ ಆರಂಭಿಸಲು ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಿಂದ ಅನುಮೋದನೆ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿದ್ದರು.

ಈ ಸಾಲಿನ ಮೇ 5ರಂದು ಇಲಾಖೆ ಅನುಮೋದನೆ ನೀಡಿತ್ತು. ಒಂದು ವರ್ಷದ ಅವಧಿಗೆ ವಿಮಾನಯಾನ ಸೇವೆ ಪುನರ್ ಆರಂಭಿಸಲು ?13.48 ಕೋಟಿಯನ್ನು ಸ್ಟಾರ್ ಏರ್‌ಗೆ ಪ್ರೋತ್ಸಾಹ ಧನ ಒದಗಿಸಲು ಸರ್ಕಾರ ಒಪ್ಪಿತ್ತು. ನಿರಂತರ ಕಾರ್ಯಾಚರಣೆ ಸಾಧ್ಯವಾಗದ ಕಾರಣ ಸ್ಥಿರ ಮತ್ತು ಖಚಿತ ಆರ್ಥಿಕ ಬೆಂಬಲದ ರೂಪದಲ್ಲಿ ಘೋಡಾವತ್ ಎಂಟರ್‌ಪ್ರೈಸೆಸ್ ಲಿಮಿಟೆಡ್‌ಗೆ ವಿಜಿಎಫ್ ರೂಪದಲ್ಲಿ ನಗದು ರಿಯಾಯಿತಿ ನೀಡಲಾಗಿತ್ತು.

ವಿಮಾನ ಸೇವೆ ಸ್ಥಗಿತಗೊಂಡಿರುವುದಕ್ಕೆ ಸಂಬಂಧಿಸಿದಂತೆ ಈಗಾಗಲೇ ಸರ್ಕಾರಕ್ಕೆ ವರದಿ ಕಳಿಸಲಾಗಿದೆ. ಸರ್ಕಾರ ಸೂಕ್ತ ಕ್ರಮ ಜರುಗಿಸಲಿದೆ. – ಶಿಲ್ಪಾ ಶರ್ಮಾ, ಜಿಲ್ಲಾಧಿಕಾರಿ.

ಆರಂಭದಿಂದಲೂ ವಿಘ್ನ: ಮೇ ತಿಂಗಳ ಆರಂಭದಲ್ಲಿ ವಿಮಾನ ಸಂಚಾರಕ್ಕೆ ಅನುಮೋದನೆ ಪಡೆದು, ಹಾರಾಟವೂ ಶುರುವಾಗಿತ್ತು. ಆದರೆ, ಆರಂಭದಿಂದಲೂ ಒಂದಿಲ್ಲೊಂದು ರೀತಿಯಲ್ಲಿ ವಿಘ್ನ ಎದುರಾಗುತ್ತಲೇ ಇತ್ತು. ಜೂನ್ ತಿಂಗಳಲ್ಲಿ ಏಕಾಏಕಿ ವಿಮಾನ ಸಂಚಾರದ ಸಮಯವನ್ನು ಏಕಾಏಕಿ ಬದಲಿಸಲಾಗಿತ್ತು.

ಕಳೆದ ವರ್ಷ ವಿಮಾನವು ಪ್ರತಿದಿನ ಬೆಂಗಳೂರಿನಿಂದ ಬೆಳಿಗ್ಗೆ 6.30ಕ್ಕೆ ಹಾರಾಟ ಆರಂಭಿಸಿ, ಬೆಳಿಗ್ಗೆ 7.45ಕ್ಕೆ ಬೀದರ್ ತಲುಪುತ್ತಿತ್ತು. ಬೆಳಿಗ್ಗೆ 8.15ಕ್ಕೆ ಬೀದರ್‌ನಿಂದ ಹೊರಟು ಬೆಳಿಗ್ಗೆ 9.30ಕ್ಕೆ ಬೆಂಗಳೂರು ಸೇರುತ್ತಿತ್ತು. ಈ ವರ್ಷವೂ ಇದೇ ಸಮಯ ಮುಂದುವರೆಸಲಾಗಿತ್ತು. ಆದರೆ, ಜೂನ್‌ನಲ್ಲಿ ಸಮಯ ಬದಲಿಸಿ, ಪ್ರತಿದಿನ ಮಧ್ಯಾಹ್ನ 12.30ಕ್ಕೆ ಬೆಂಗಳೂರು ವಿಮಾನ ನಿಲ್ದಾಣದಿಂದ ವಿಮಾನ ಹೊರಟು 1.45ಕ್ಕೆ ಬೀದರ್ ಸೇರುವುದು, ಮತ್ತೆ ಬೀದರ್‌ನಿಂದ ಮಧ್ಯಾಹ್ನ 2.30ಕ್ಕೆ ಹೊರಟು ಮಧ್ಯಾಹ್ನ 3.30ಕ್ಕೆ ಬೆಂಗಳೂರು ತಲುಪುವಂತೆ ಬದಲಾವಣೆ ಮಾಡಲಾಗಿತ್ತು. ಇದಕ್ಕೆ ಸಾರ್ವಜನಿಕ ವಲಯದಲ್ಲಿ ತೀವ್ರ ವಿರೋಧ ವ್ಯಕ್ತವಾಗಿತ್ತು. ಸ್ವತಃ ಸಚಿವ ಈಶ್ವರ ಬಿ. ಖಂಡ್ರೆ ಕೂಡ ಮುಖ್ಯಮಂತ್ರಿಗೆ ಪತ್ರ ಬರೆದು, ಸಮಯ ಬದಲಾವಣೆ ಮಾಡದಂತೆ ಕೋರಿದ್ದರು. ಆದರೂ ಆಗಾಗ ವಿಮಾನದ ಸಮಯದಲ್ಲಿ ಬದಲಾವಣೆ ಆಗುತ್ತಲೇ ಇತ್ತು. ಈಗ ಅಂತಿಮವಾಗಿ ಸೇವೆ ಸ್ಥಗಿತಗೊಂಡಿದ್ದು, ಜನ ಹೈದರಾಬಾದ್ ವರೆಗೆ ರಸ್ತೆ ಮಾರ್ಗವಾಗಿ ಕ್ರಮಿಸಿ, ಅಲ್ಲಿಂದ ಬೆಂಗಳೂರಿಗೆ ಪಯಣ ಬೆಳೆಸುವಂತಾಗಿದೆ. ಅದರಲ್ಲೂ ವ್ಯಾಪಾರಿಗಳು, ಚಿಕಿತ್ಸೆಗೆಂದು ಆಸ್ಪತ್ರೆಗೆ ಹೋಗುವವರಿಗೆ ತೀವ್ರ ಸಮಸ್ಯೆ ಎದುರಾಗಿದೆ.

ಬಸ್, ರೈಲು ಸಂಚಾರ ತ್ರಾಸು: ಬೀದರ್–ಬೆಂಗಳೂರು ನಡುವೆ ಕ್ರಮಿಸಲು ಎರಡು ಮಾರ್ಗಗಳಿವೆ. ಒಂದು ವಾಯಾ ಕಲಬುರಗಿ, ಇನ್ನೊಂದು ವಾಯಾ ಹೈದರಾಬಾದ್ ಮೂಲಕ. ಎರಡೂ ರಸ್ತೆ ಮಾರ್ಗ ಸುಮಾರು 700 ಕಿ.ಮೀ ಕ್ರಮಿಸಬೇಕಾಗುತ್ತದೆ. ರೈಲು ಮಾರ್ಗ ಕೂಡ ಹೆಚ್ಚು ಕಮ್ಮಿ ಇಷ್ಟೇ ಕಿ.ಮೀ ಸಂಚರಿಸಬೇಕಾಗುತ್ತದೆ. ಬಸ್ ಹಾಗೂ ರೈಲಿನ ಪ್ರಯಾಣದ ಅವಧಿ ಕೂಡ 12ರಿಂದ 14 ಗಂಟೆಗಳು ಬೇಕಾಗುತ್ತದೆ. ತುರ್ತು ಕೆಲಸ, ವೈದ್ಯಕೀಯ ಚಿಕಿತ್ಸೆಗಾಗಿ ವಿಮಾನ ಸಂಚಾರ ಅನುಕೂಲವಾಗಿತ್ತು.

ಎಸ್‌ಸಿ, ಎಸ್‌ಟಿ ಮೀಸಲಾತಿ ಹೆಚ್ಚಳಕ್ಕೆ ಆಗ್ರಹಿಸಿ ಧರಣಿ



ರಾಯಚೂರು, ನ. 10: ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಮೀಸಲಾತಿ ಪ್ರಮಾಣವನ್ನು ಶೇ 50ರಿಂದ ಶೇ 56ಕ್ಕೆ ಹೆಚ್ಚಿಸಿ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶವನ್ನು ರದ್ದುಗೊಳಿಸಿದ ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ, ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಪದಾಧಿಕಾರಿಗಳು ನಗರದ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ದಲಿತ ಸಂಘರ್ಷ ಸಮಿತಿಯ ಸಂಚಾಲಕ ಹನುಮಂತಪ್ಪ ಕಾಕರಗಲ್ ಮಾತನಾಡಿ, ಬಸವರಾಜ ಬೊಮ್ಮಾಯಿ ಅವರ ಆಡಳಿತಾವಧಿಯಲ್ಲಿ ರಾಜನಹಳ್ಳಿಯ ಮಹರ್ಷಿ ವಾಲ್ಮೀಕಿ ಗುರುಪೀಠದ ಪ್ರಸನ್ನಾ ನಂದಪುರಿ ಸ್ವಾಮೀಜಿ ನೇತೃತ್ವದಲ್ಲಿ ವಿವಿಧ ದಲಿತಪರ ಸಂಘಟನೆಗಳು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ನಡೆಸಿದ್ದವು. ರಾಜ್ಯಾದ್ಯಂತ ನಡೆದ ಹೋರಾಟದ ಹಿನ್ನೆಲೆಯಲ್ಲಿ ನ್ಯಾ.ಎಚ್.ಎನ್. ನಾಗಮೋಹನ್‌ದಾಸ್ ಆಯೋಗದ ವರದಿ ಆಧರಿಸಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಹೆಚ್ಚಳಕ್ಕೆ ಸರ್ಕಾರ ಕ್ರಮ ಕೈಗೊಂಡಿತ್ತು ಎಂದು ಹೇಳಿದರು.

2022ರ ಮೀಸಲಾತಿ ಆದೇಶದಡಿ ಪರಿಶಿಷ್ಟ ಜಾತಿಯ ಮೀಸಲಾತಿಯನ್ನು ಶೇ 15ರಿಂದ ಶೇ 17ಕ್ಕೆ ಹಾಗೂ ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಶೇ 3ರಿಂದ ಶೇ 7ಕ್ಕೆ ಹೆಚ್ಚಿಸಲಾಗಿತ್ತು. ಒಟ್ಟಾರೆ ಮೀಸಲಾತಿ ಪ್ರಮಾಣವನ್ನು ಶೇ.50ರಿಂದ ಶೇ.56ಕ್ಕೆ ಹೆಚ್ಚಿಸಲಾಗಿತ್ತು. ಆದರೆ, ಈ ಮೀಸಲಾತಿ ಹೆಚ್ಚಳವನ್ನು ಹೈಕೋರ್ಟ್ ರದ್ದುಗೊಳಿಸಿರುವುದು ದಲಿತ ಹಾಗೂ ಹಿಂದುಳಿದ ಸಮುದಾಯಗಳಿಗೆ ಅನ್ಯಾಯವಾಗಿದೆ ಎಂದರು. ಮೀಸಲಾತಿಯನ್ನು ರಕ್ಷಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕು. ಮೀಸಲಾತಿ ಹೆಚ್ಚಳವನ್ನು ಕಾನೂನುಬದ್ಧಗೊಳಿಸುವ ಮೂಲಕ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಹಕ್ಕುಗಳನ್ನು ಕಾಪಾಡಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಶೀಘ್ರವೇ ಕಬ್ಬಿಗೆ ಸೂಕ್ತ ದರ ನಿಗದಿ: ಕಲಬುರಗಿ ಜಿಲ್ಲಾಧಿಕಾರಿ



ಕಲಬುರಗಿ, ನ. 10: ಜಿಲ್ಲೆಯಲ್ಲಿ ಕಬ್ಬಿನ ದರ ನಿಗದಿಗೆ ಜಿಲ್ಲಾಡಳಿತದ ನೇತೃತ್ವದಲ್ಲಿ ರೈತರು ಹಾಗೂ ಕಾರ್ಖಾನೆಗಳ ನಡುವೆ ನಡೆದ ಎರಡನೇ ಸುತ್ತಿನ ಸಭೆಯಲ್ಲಿ, ಮುಂದಿನ ದಿನಗಳಲ್ಲಿ ಮತ್ತೆ ಚರ್ಚೆ ನಡೆಸಿ ರೈತರ ಬೇಡಿಕೆಗಳಿಗೆ ಅನುಸಾರವಾಗಿ ಸೂಕ್ತ ತೀರ್ಮಾನಕ್ಕೆ ಬರಲು ಕಾರ್ಖಾನೆಗಳಿಗೆ ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ಅವರು ಗಡುವು ನೀಡಿದರು.

ಕೆಲವೊಂದು ಕಡೆಗಳಲ್ಲಿ ಒಣಗುತ್ತಿರುವುದಕ್ಕೆ ಬೇರೆ ಪರ್ಯಾಯ ಮಾರ್ಗವನ್ನು ಹುಡುಕೋಣ, ಇತರ ಸುತ್ತಮುತ್ತಲಿನ ಕಾರ್ಖಾನೆಗಳಾಗಿರಲಿ ಈ ಕುರಿತು ಎಲ್ಲರ ಜೊತೆ ವಿಚಾರ ವಿನಿಮಯ ಮಾಡಿ, ರೈತರ ಬೇಡಿಕೆಗಳ ಬಗ್ಗೆ ಚರ್ಚಿಸಿ ಸೂಕ್ತ ತೀರ್ಮಾನಕ್ಕೆ ಬರೋಣ. ಸಭೆಯಲ್ಲಿ ರೈತರ ಪರವಾಗಿ ಮಾತನಾಡಿದ ಜಿಲ್ಲಾಧಿಕಾರಿ, ಟನ್‌ಕಬ್ಬಿಗೆ ಕನಿಷ್ಠ 3,600 ರೂಪಾಯಿ ಬೆಲೆ ನೀಡಬೇಕು ಎಂದು ಪಟ್ಟುಹಿಡಿದರು. ಆದರೆ, ಮಾರುಕಟ್ಟೆ ಪರಿಸ್ಥಿತಿ ಹಾಗೂ ರಿಕವರಿ ವ್ಯತ್ಯಾಸದ ಲೆಕ್ಕಾಚಾರಗಳನ್ನು ಮುಂದಿಟ್ಟ ಕಾರ್ಖಾನೆ ಆಡಳಿತ ಮಂಡಳಿಯವರು, 3,600 ರೂಪಾಯಿ ನೀಡುವುದು ಕಷ್ಟಸಾಧ್ಯ ಎಂದು ತಿಳಿಸಿದ್ದಾರೆ. 1% ರಿಕವರಿ ವ್ಯತ್ಯಾಸದನ್ವಯ 3,200 ರೂಪಾಯಿಗಿಂತ ಹೆಚ್ಚು ಬೆಲೆ ನೀಡುವುದು ಅಸಾಧ್ಯವೆಂದು ಕಾರ್ಖಾನೆ ಪ್ರತಿನಿಧಿಗಳು ಹೇಳಿದರು ಇದಕ್ಕೆ ಒಪ್ಪದೆ ಇರುವ ರೈತ ಮುಖಂಡರು ಹಾಗೂ ರೈತ ಸಂಘದವರು ಒಪ್ಪದೇ ಇರುವ ಕಾರಣಕ್ಕೆ ಫ್ಯಾಕ್ಟರಿಗಳು ಪ್ರಾರಂಭವಾಗುತ್ತಿಲ್ಲ ಎಂದರು.

ರೈತರು ತಮ್ಮ ಬೇಡಿಕೆಯಿಂದ ಹಿಂದೆ ಸರಿಯಲು ಒಪ್ಪದೆ, ಹಿಂದಿನ ಸಭೆಯ ಬೇಡಿಕೆಯಂತೆ ಕನಿಷ್ಠ ಬೆಲೆಯ ವಿಚಾರದಲ್ಲಿ ಬಿಗಿಪಟ್ಟು ಮುಂದುವರಿಸಿದರು. ಕಾರ್ಖಾನೆ ಆರಂಭವಾಗದಿದ್ದರೆ ನೀರು ಹಾಗೂ ಇಲಾಖೆಯ ಸೌಲಭ್ಯಗಳು ಸಿಗುವುದಿಲ್ಲ ಎಂಬ ವಾದ–ಪ್ರತಿವಾದಗಳು ಸಭೆಯಲ್ಲಿ ಕೇಳಿಬಂದವು.

ಮೊದಲ ಸಭೆ ನಿರ್ಧಾರ : ಜಿಕಲ್ಲೆಯ ಆಳಂದ, ಅಫಜಲಪೂರ, ಜೇವರ್ಗಿ ಭಾಗಗಳಲ್ಲಿ ನೀರಿನ ಅಭಾವ ಇರುವುದರಿಂದ ಕಬ್ಬಿನ ಬೆಳೆ ಒಣಗುತ್ತಿದ್ದು ಕಾರಣ ಕೂಡಲೇ ಕಾರ್ಖಾನೆಗಳು ಕಬ್ಬು ನುರಿಸುವುದಕ್ಕೆ ಪ್ರಾರಂಭಿಸಿ ಆ ಭಾಗದ ರೈತರು ಲಿಖಿತ' ಮನವಿಗಳನ್ನು ಸಲ್ಲಿಸುತ್ತಿದ್ದಾರೆ ಎಂದು ಜಿಲ್ಲಾಧಿಕಾರಿಗಳು ಸಭೆಯಲ್ಲಿ ತಿಳಿಸಿದರು.

ಜಿಲ್ಲಾಧಿಕಾರಿ ಇಕ್ರಮ್ ಶರೀಫ್‌ನೇತೃತ್ವದಲ್ಲಿ ರೈತ ಸಂಘಟನೆಗಳ ಮುಖಂಡರು ಹಾಗೂ ಜಿಲ್ಲೆಯಲ್ಲಿರುವ ಐದೂ ಸಕ್ಕರೆ ಕಾರ್ಖಾನೆಗಳ ಪ್ರತಿನಿಧಿಗಳೊಂದಿಗೆ ಸಂಜೆ 5ರಿಂದ ರಾತ್ರಿ 10ರ ತನಕ ಸುದೀರ್ಘವಾಗಿ ಸಭೆ ನಡೆಯಿತು ಈ ಸಭೆಯಲ್ಲಿ ರೈತ ಮುಖಂಡರು, ಕಾರ್ಖಾನೆ ಮಾಲೀಕರು ಮತ್ತು ಅಧಿಕಾರಿಗಳು ಭಾಗವಹಿಸಿದ್ದರು. ಈ ಸಭೆಯಲ್ಲಿ 3,100 ರೂ. ನಿಂದ ಆರಂಭವಾದ ಕಬ್ಬಿನ ದರ ಚರ್ಚೆಯು ಅಂತಿಮವಾಗಿ 3,150 ರೂ. ಗಳಿಗೆ ನಿಂತಿತ್ತು. ಆದರೆ ಬೆಳಗಾವಿ ಭಾಗದಲ್ಲಿ ಅಂತಿಮವಾಗುವವರೆಗೆ ತಾವು ಒಪ್ಪುವುದಿಲ್ಲ ಮುಂಬರುವ ದಿನಗಳಲ್ಲಿ ಮತ್ತೊಮ್ಮೆ ಸಭೆ ನಡೆಸಿ ಅಂತಿಮ ನಿರ್ಧಾರ ಕೈಗೊಳ್ಳಲು ತೀರ್ಮಾನಿಸೋಣ ಎಂದು ರೈತರು ತಿಳಿಸಿದ್ದರು.

ಪ್ರತಿ ಟನ್‌ಕಬ್ಬಿಗೆ 3200 ರೂ.: ಈ ದರವನ್ನು ಒಪ್ಪದ ರೈತರು ಸಭೆಯಲ್ಲಿ ಬೆಳಗಾವಿ ಹಾಗೂ ಕಲಬುರಗಿ ನಡುವಿನ ರಿಕವರಿ ದರ ಮತ್ತು ಎಫ್‌ಆರ್‌ಪಿ ನಿಯಮಗಳಲ್ಲಿನ ವ್ಯತ್ಯಾಸಗಳ ಕುರಿತು ಗಂಭೀರ ಚರ್ಚೆ ನಡೆಯಿತು. ಕಲಬುರಗಿ ಭಾಗದಲ್ಲಿ ರಿಕವರಿ ಶೇಕಡಾವಾರು ಕಡಿಮೆ ಇರುವ ಕಾರಣದಿಂದ ಪ್ರತಿ ಟನ್‌ಕಬ್ಬಿಗೆ ಬೆಳಗಾವಿಗೂ ಕಲಬುರಗಿಗೂ ಸುಮಾರು 365 ರೂ. ಗಳವರೆಗೆ ವ್ಯತ್ಯಾಸ ಉಂಟಾಗುತ್ತಿದೆ ಎಂದು ಸಭೆಯಲ್ಲಿ ತಿಳಿಸಿದರು.

ಬೆಳಗಾವಿ ಭಾಗದ ಕಾರ್ಖಾನೆಗಳಿಗೆ ಹೋಲಿಸಿದರೆ ಕಲಬುರಗಿಯಲ್ಲಿ ರಿಕವರಿ ದರ ಮತ್ತು ಸಕ್ಕರೆ ಇಳುವರಿ ಕಡಿಮೆ ಇದ್ದರೂ, ಪ್ರತಿ ಟನ್‌ಕಬ್ಬಿಗೆ 3200 ರೂಪಾಯಿಗಳನ್ನು ಜೊತೆಗೆ, ರೆವೆನ್ಯೂ ನೀಡಲು ಸಿದ್ಧರಿದ್ದೇವೆ ಎಂದು ಸಕ್ಕರೆ ಕಾರ್ಖಾನೆ ಪ್ರತಿನಿಧಿಗಳ ತಿಳಿಸಿದರು. ಇದನ್ನು ಒಪ್ಪದ ರೈತರು ಹಾಗೂ ಜಿಲ್ಲಾಧಿಕಾರಿಗಳು ಅಸಮಾದಾನ ವ್ಯಕ್ತಪಡಿಸುತ್ತ ಕಾರ್ಖಾನೆ ಪ್ರತಿನಿಧಿಗಳಿಗೆ ಬೆಲೆ ನಿರ್ಧಾರ ಮಾಡಿಕೊಂಡೆ ಬನ್ನಿ ಎಂದು ಸಭೆಯಿಂದ ತೆರಳಿದರು.

ರೈಲ್ವೆ ಸಿಬ್ಬಂದಿ ಪ್ರಾಮಾಣಿಕತೆ: ಹಣ, ಪಾಸ್‌ಪೋರ್ಟ್ ಇದ್ದ ಚೀಲ ಪ್ರಯಾಣಿಕನಿಗೆ ವಾಪಸ್

ಬೆಳಗಾವಿ, ನ.10: ಹುಬ್ಬಳ್ಳಿ ವಿಭಾಗದ ರೈಲ್ವೆ ಸಿಬ್ಬಂದಿ ಪ್ರಾಮಾಣಿಕತೆ ಮೆರೆದಿದ್ದಾರೆ. ರೈಲಿನಲ್ಲಿ ಆಕಸ್ಮಿಕವಾಗಿ ಬಿಟ್ಟು ಹೋಗಿದ್ದ 52,500 ರೂ. ನಗದು ಮತ್ತು ಎರಡು ಪಾಸ್‌ಪೋರ್ಟ್‌ಗಳನ್ನು ಹೊಂದಿದ್ದ ಬ್ಯಾಗ್ ಅನ್ನು ಪತ್ತೆಹಚ್ಚಿ ಸುರಕ್ಷಿತವಾಗಿ ಪ್ರಯಾಣಿಕನಿಗೆ ಹಿಂದಿರುಗಿಸಿದ್ದಾರೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ನವೆಂಬರ್ 8 ರಂದು ಅರ್ಜುನ್ ಗುರುಸಿದ್ದಪ್ಪ ಟೋಪಣ್ಣವರ್ ಮತ್ತು ಅವರ ಪತ್ನಿ ಬೆಂಗಳೂರಿನಿಂದ ಬೆಳಗಾವಿಗೆ ರಾಣಿ ಚೆನ್ನಮ್ಮ ಎಕ್ಸ್‌ಪ್ರೆಸ್‌ನಲ್ಲಿ ಪ್ರಯಾಣಿಸುತ್ತಿದ್ದಾಗ ಈ ಘಟನೆ ಸಂಭವಿಸಿದೆ.

ರೈಲಿನಿಂದ ಇಳಿದ ನಂತರ, ಅವರು ಆಕಸ್ಮಿಕವಾಗಿ ತಮ್ಮ ಬ್ಯಾಗ್ ಅನ್ನು ಎಸಿ ಕೋಚ್‌ನಲ್ಲಿ ಬಿಟ್ಟು ಹೋಗಿದ್ದಾರೆ. ಬ್ಯಾಗ್‌ನಲ್ಲಿ ಅವರ ಎರಡು ಪಾಸ್‌ಪೋರ್ಟ್‌ಗಳು, ವಿದೇಶಿ ಕರೆನ್ಸಿ ಮತ್ತು 52,500 ರೂ. ನಗದು ಇತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನೈರುತ್ಯ ರೈಲ್ವೆಯ ಹೇಳಿಕೆಯ ಪ್ರಕಾರ, ಕರ್ತವ್ಯದಲ್ಲಿದ್ದ ಬೆಡ್‌ರೋಲ್ ಸಿಬ್ಬಂದಿ ಲಗಮಣ್ಣ ಬ್ಯಾಗ್‌ನ್ನು ಗಮನಿಸಿದ್ದು, ತಕ್ಷಣ ಅದನ್ನು ಪಡೆದುಕೊಂಡಿದ್ದಾರೆ. ಅಲ್ಲದೇ ಅದನ್ನು ಸಂಬಂಧಪಟ್ಟ ಹಿರಿಯ ಸಿಬ್ಬಂದಿಗೆ ಹಸ್ತಾಂತರಿಸಿದ್ದು, ಪ್ರಯಾಣಿಕರ ವಿವರಗಳನ್ನು ಪತ್ತೆಹಚ್ಚಿ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಇದಾದ ಮಾರನೇ ದಿನ ಸಾಂಗ್ಲಿಯಿಂದ ಬೆಂಗಳೂರಿಗೆ ಪ್ರಯಾಣಿಸುತ್ತಿದ್ದ ರೈಲು ಬೆಳಗಾವಿ ರೈಲು ನಿಲ್ದಾಣಕ್ಕೆ ಬಂದಾಗ ಅದರ ಕಂಡಕ್ಟರ್ ಆನಂದ್ ಕುಮಾರ್, ಬೆಡ್‌ರೋಲ್ ಸಿಬ್ಬಂದಿಯ ಸಹಾಯದಿಂದ, ಬ್ಯಾಗ್ ಅನ್ನು ಅದರ ನಿಜವಾದ ಮಾಲೀಕ ಟೊಪ್ಪನವರ್ ಅವರಿಗೆ ಸುರಕ್ಷಿತವಾಗಿ ಹಸ್ತಾಂತರಿಸಿದ್ದಾರೆ. ಈ ವೇಳೆ ಟೊಪ್ಪನವರ್ ರೈಲ್ವೆ ಸಿಬ್ಬಂದಿಯ ತ್ವರಿತ ಕ್ರಮ, ಪ್ರಾಮಾಣಿಕತೆ, ಬದ್ಧತೆಗಾಗಿ ಕೃತಜ್ಞತೆಯನ್ನು ವ್ಯಕ್ತಪಡಿಸಿದರು ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಪರೀಕ್ಷೆಯಲ್ಲಿ ಅಕ್ರಮ: ಹಾವೇರಿ ಎಸ್‌ಪಿ ನೇತೃತ್ವದಲ್ಲಿ ತನಿಖೆ ಮುಂದುವರಿಕೆ

ಆರೋಪಿಯ ಮೊಬೈಲ್ ವಶಕ್ಕೆ ಪಡೆದ ಪೊಲೀಸರು



ಹಾವೇರಿ, ನ.10: ಕಾನ್ಸ್‌ಟೇಬಲ್ ಪರೀಕ್ಷೆಯಲ್ಲಿ 25 ಅಂಕ, ವಿಎಒ ಪರೀಕ್ಷೆಯಲ್ಲಿ ಅಕ್ರಮ ಎಸಗಿ 151 ಅಂಕ ಪಡೆದು ಆರೋಪ ಸಂಬಂಧ ಹಾನಗಲ್‌ನ ಶಂಕರ್ ಬನ್ನೂರು ವಿರುದ್ಧ ದಾಖಲಾದ ಪ್ರಕರಣದ ತನಿಖೆ ಹಾವೇರಿ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ಶಿರಕೋಳ್ ನೇತೃತ್ವದಲ್ಲಿ ಮುಂದುವರಿದಿದೆ.

ಪ್ರಕರಣದ ಕುರಿತು ಮಾತನಾಡಿದ ಹಾವೇರಿ ಎಸ್ಪಿ ಯಶೋಧಾ ವಂಟಗೋಡಿ, ಆರೋಪಿ ಶಂಕರನಿಂದ ಮೊಬೈಲ್ ವಶಕ್ಕೆ ಪಡೆದು ಸೈಬರ್ ಪೊಲೀಸರಿಗೆ ನೀಡಲಾಗಿದೆ. ಇದೇ ಮೊಬೈಲ್ ಅನ್ನು ಪರೀಕ್ಷೆಗೆ ಬಳಸಿದ್ದು ಎಂದು ಆರೋಪಿ ಮೊಬೈಲ್ ನೀಡಿದ್ದಾನೆ. ಆರೋಪಿಯನ್ನು ನ್ಯಾಯಾಂಗ ಬಂಧನದಿಂದ ಪೊಲೀಸ್ ಕಸ್ಟಡಿಗೆ ತೆಗೆದುಕೊಂಡು ತನಿಖೆ ಆರಂಭಿಸಿದ್ದು, ಈಗಲೇ ಏನಾಗಿದೆ ಎಂದು ಹೇಳಲು ಸಾಧ್ಯವಿಲ್ಲ. ಟೆಕ್ನಿಕಲ್ ಅಂಶಗಳು ಮತ್ತು ಸಾಕ್ಷಿಗಳನ್ನು ಆಧರಿಸಿ ತನಿಖೆ ನಡೆಸಲಾಗಿದೆ ಎಂದರು.

ಪೊಲೀಸ್ ಅಧಿಕಾರಿಗಳು ಕರ್ತವ್ಯಲೋಪ ಎಸಗಿರುವ ಬಗ್ಗೆ ಡಿವೈಎಸ್ಪಿ ಗುರುಶಾಂತಪ್ಪ ನೇತೃತ್ವದಲ್ಲಿ ತನಿಖೆಗೆ ಸೂಚಿಸಲಾಗಿದೆ. ಅವರು ತನಿಖೆ ನಡೆಸಿ ವರದಿ ಸಲ್ಲಿಸಿದ ನಂತರ ಕರ್ತವ್ಯಲೋಪ ಎಸಗಿದ ಪೊಲೀಸ್ ಇಲಾಖೆಯ ಅಧಿಕಾರಿಗಳ ಮೇಲೆ ತನಿಖೆ ಕೈಗೊಳ್ಳಲಾಗುತ್ತದೆ. ಪ್ರಕರಣವನ್ನ ಕೂಲಂಕಷವಾಗಿ ತನಿಖೆಗೆ ಮಾಡಲು ಸೂಚನೆ ನೀಡಿದ್ದೇವೆ. ವರದಿ ಆಧರಿಸಿ ತಪ್ಪು ಮಾಡಿದವರ ಮೇಲೆ ಕ್ರಮ ಆಗುತ್ತದೆ ಎಂದು ಹೇಳಿದ್ದಾರೆ.

ಮತ್ತೊಂದೆಡೆ, ಈ ಪ್ರಕರಣದಲ್ಲಿ ಮೇಲ್ನೋಟಕ್ಕೆ ಅಧಿಕಾರಿಗಳ ಕರ್ತವ್ಯ ಲೋಪ ಕಂಡುಬಂದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಡಾ.ವಿಜಯ ಮಹಾಂತೇಶ್ ದಾನಮ್ಮನವರ್ ಅವರು ನಾಲ್ವರು ಸಿಬ್ಬಂದಿಗೆ ಶೋಕಾಸ್ ನೋಟಿಸ್ ನೀಡಿದ್ದಾರೆ. ಅ.4ರಂದು ಶಿಗ್ಗಾವಿಯ ಮಾಮಲೇ ದೇಸಾಯಿ ಪದವಿಪೂರ್ವ ಕಾಲೇಜಿನಲ್ಲಿ ವಿಎಒ ಪರೀಕ್ಷೆ ನಡೆದಿದ್ದು, ಪರೀಕ್ಷಾ ಕೇಂದ್ರದ ಪ್ರಾಂಶುಪಾಲ, ಕೊಠಡಿ ಮೇಲ್ವಿಚಾರಕರು, ಚೆಕ್ಕಿಂಗ್ ಸಿಬ್ಬಂದಿ, ಡ್ರೆಸ್ ಕೋಡ್ ಆಫೀಸರ್‌ಗೆ ನೋಟಿಸ್ ನೀಡಿರುವುದಾಗಿ ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಗ್ರಾಮ ಲೆಕ್ಕಾಧಿಕಾರಿ ಪರೀಕ್ಷೆಯಲ್ಲಿ ಅಕ್ರಮ ಎಸಗಿ ಮೊದಲ ರ್‍ಯಾಂಕ್ ಗಳಿಸಿದ ಆರೋಪದ ಮೇಲೆ ಶಂಕರ್ ಬನ್ನೂರು ಎಂಬವರ ಮೇಲೆ ಶಿಗ್ಗಾಂವ್ ಪೊಲೀಸ್ ಠಾಣೆಯಲ್ಲಿ ಈಗಾಗಲೇ ಎಫ್‌ಐಆರ್ ದಾಖಲಿಸಲಾಗಿದ್ದು, ತನಿಖೆ ನಡೆಯುತ್ತಿದೆ. ಅಲ್ಲದೇ ಇಂತಹದ್ದೊಂದು ಅಕ್ರಮ ನಡೆದಾಗ ಪ್ರಕರಣದಲ್ಲಿ ವಿವಿಧ ಅಧಿಕಾರಿಗಳು ಕೂಡ ಜವಾಬ್ದಾರಿಯಾಗಿರುತ್ತಾರೆ. ಹಾಗಾಗಿ ಕರ್ತವ್ಯ ಲೋಪ ಆರೋಪ ಕೇಳಿ ಬಂದ ಹಿನ್ನೆಲೆಯಲ್ಲಿ ಪರೀಕ್ಷಾ ಕೇಂದ್ರದ ನಾಲ್ವರಿಗೆ ಶೋಕಾಸ್ ನೋಟಿಸ್ ನೀಡಲಾಗಿದೆ. ತನಿಖೆ ನಡೆಯುತ್ತಿದೆ. ಪರೀಕ್ಷೆಯಲ್ಲಿನ ಅಕ್ರಮದಲ್ಲಿ ಶಾಮೀಲಾಗಿದ್ದಾರಾ ಅಥವಾ ಇಲ್ಲವಾ ಎಂಬುದು ಪೊಲೀಸ್ ತನಿಖೆಯಿಂದ ಗೊತ್ತಾಗಲಿದೆ ಎಂದು ಜಿಲ್ಲಾಧಿಕಾರಿ ಹೇಳಿದ್ದಾರೆ.

ಕರುನಾಡು ಕನ್ನಡ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ಜಿ.ವಿ. ದೇವರಾಜ್ ನೇತೃತ್ವ

ಕೋಲಾರದಲ್ಲಿ 71ನೇ ಕನ್ನಡ ರಾಜ್ಯೋತ್ಸವ ಬೃಹತ್ ಬೈಕ್ ರ್‍ಯಾಲಿ, ಸಾಧಕರಿಗೆ ಸನ್ಮಾನ



ಕೋಲಾರ, ನ.9– ನವೆಂಬರ್ 15, 2026ನೇ ಭಾನುವಾರ ಮಧ್ಯಾಹ್ನ 12.10ಕ್ಕೆ ಕೋಲಾರ ಗಡಿಭಾಗದ ರಾಮಸಂದ್ರ ಗೇಟ್‌ನಿಂದ ರಾಲಿ ಆರಂಭವಾಗಿ ಸುಮಾರು 20 ಕಿ.ಮೀ. ಬೈಕ್ ರೈಡ್ ರಾಲಿ ಹಾಗೂ ಮೆರವಣಿಗೆ ನಡೆದು, ಅಂತರಗಂಗೆ ಬೆಟ್ಟದ ಮೇಲಿರುವ ತೇರಹಳ್ಳಿಯ ಗೌರಿ ಗಂಗಾಧರೇಶ್ವರ ದೇವಾಲಯದಲ್ಲಿ ಮುಕ್ತಾಯಗೊಳ್ಳಲಿದೆ. ಮಧ್ಯಾಹ್ನ 2.00 ಗಂಟೆಗೆ ಪ್ರಸಾದ ವಿನಿಯೋಗ ನಡೆಯಲಿದೆ.

ಕಾರ್ಯಕ್ರಮದಲ್ಲಿ ಐ.ಪಿ.ಎಸ್. ಕರ್ನಾಟಕ ಪೊಲೀಸ್ ಇಲಾಖೆ ಡಿ.ಐ.ಜಿ. ಸನ್ಮಾನ್ಯ ಶ್ರೀ ಡಿ. ದೇವರಾಜ್ ಅಣ್ಣನವರಿಗೆ ರಾಷ್ಟ್ರಕವಿ ಕುವೆಂಪು ಪ್ರಶಸ್ತಿ ಪ್ರದಾನ ಮಾಡಿ ಸನ್ಮಾನಿಸಲಾಗುವುದು.

ಕರುನಾಡು ಕನ್ನಡ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷರಾದ ಜಿ.ವಿ. ದೇವರಾಜ್ ನೇತೃತ್ವದಲ್ಲಿ ಕಾರ್ಯಕ್ರಮ ನಡೆಯಲಿದ್ದು, ನಾನು ಯಾವುದೇ ರಾಜಕೀಯ ಉದ್ದೇಶಕ್ಕೆ ಈ ಕಾರ್ಯಕ್ರಮ ಮಾಡುತ್ತಿಲ್ಲ. ನನ್ನ ಓಟು ಸಹ ಕೋಲಾರ ಜಿಲ್ಲೆಯಲ್ಲಿ ಇಲ್ಲ.ಜನ ಸಂಪರ್ಕದಲ್ಲಿ ಸದಾಕಾಲ ಇದ್ದು ಜನರ ಸೇವೆಯನ್ನು ನಮ್ಮ ಸಂಘಟನೆ ಮೂಲಕ ಮಾಡಲಾಗುವುದೆಂದು ತಿಳಿಸಿದ್ದಾರೆ.

ಎಲ್ಲಾ ಕನ್ನಡಾಭಿಮಾನಿಗಳಿಗೆ ಆತ್ಮೀಯ ಆಹ್ವಾನ ನೀಡಲಾಗಿದೆ. ಬೈಕ್ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸತಕ್ಕದ್ದು ಎಂದು ಸೂಚನೆ ನೀಡಲಾಗಿದೆ. ಕಾರ್ಯಕ್ರಮದಲ್ಲಿ ತೇರಹಳ್ಳಿಯ ಸತೀಶ್ ಕುಮಾರ್ ವಿ, ಬೈರಪ್ಪ ಟಿ.ಎಸ್,ಚೌಡಪ್ಪ, ರಾಜೇಂದ್ರ ಪ್ರಸಾದ್, ಎನ್,ಕೃಷ್ಣಪ್ಪ, ಚಂದನ್ ಎನ್, ಬಾಬು ಎಸ್, ಕೃಷ್ಣಪ್ಪ ಪಿ, ದಿಲೀಪ್ ಕೆ, ದರ್ಶನ್ ಎನ್,ಕುಪ್ಪಳ್ಳಿಯ ಮುನಿನಾರಾಯ'ಣಪ್ಪ,ರಾಮಚಂದ್ರಪ್ಪ , ಕೆ. ಎಂ. ರುದ್ರೇಶ್ ಸೋಮಶೇಖರ್ ಎಂ ನರಸಾಪುರ ಜಿಲ್ಲಾ ಪಂಚಾಯಿತಿ ಕ್ಷೇತ್ರದ ಎಲ್ಲಾ ಗ್ರಾಮಗಳ ಮುಖಂಡರು, ಯುವಪಡೆ ಹಾಗೂ ಕನ್ನಡಾಭಿಮಾನಿಗಳು ಕಾರ್ಯಕ್ರಮ ಆಯೋಜಿಸಿದ್ದು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಅರಮನೆ ಮಾಲೀಕತ್ವ ವಿವಾದ ನ್ಯಾಯಾಲಯದಲ್ಲಿದೆ, ಚರ್ಚೆ ಅನಗತ್ಯ: ಸಂಸದ ಯದುವೀರ್ ಒಡೆಯರ್ ತಾಕೀತು



ಮೈಸೂರು, ನ.10: ಮೈಸೂರು ಅರಮನೆ ರಾಜಮನೆತನಕ್ಕೆ ಸೇರಿದ್ದೇ ಅಥವಾ ಇಲ್ಲವೇ ಎಂಬ ಚರ್ಚೆ ಸದ್ಯದ ಹಂತದಲ್ಲಿ ಅಪ್ರಸ್ತುತವಾಗಿದೆ. ಅರಮನೆಯ ಮಾಲೀಕತ್ವದ ವಿವಾದ ನ್ಯಾಯಾಲಯದಲ್ಲಿದ್ದು, ಈ ಬಗ್ಗೆ ತೀರ್ಮಾನ ಕೈಗೊಳ್ಳುವುದು ನ್ಯಾಯಾಂಗಕ್ಕೆ ಬಿಟ್ಟ ವಿಚಾರ ಎಂದು ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅರಮನೆಯ ಮಾಲೀಕತ್ವದ ವಿವಾದ ನ್ಯಾಯಾಲಯದ ಮುಂದಿದೆ. ನ್ಯಾಯಾಲಯವೇ ಈ ಬಗ್ಗೆ ತೀರ್ಪು ನೀಡಲಿದೆ ಎಂದು ತಿಳಿಸಿದರು.

ಅರಮನೆ ವಿವಾದ ನ್ಯಾಯಾಲಯದಲ್ಲಿದ್ದು, ನ್ಯಾಯಾಲಯವೇ ನಿರ್ಧಾರ ಕೈಗೊಳ್ಳಲಿದೆ. ರಾಜಕಾರಣಿಯಾಗಿ ನಾನು ಹೇಳುವುದಾದರೆ, ಕಾರ್ಯಾಂಗ ಮತ್ತು ಶಾಸಕಾಂಗವನ್ನು ದುರುಪಯೋಗಪಡಿಸಿಕೊಳ್ಳಲಾಗಿದೆ. ನಮಗೆ ಸೇರಿದ್ದನ್ನು ರಕ್ಷಿಸಿಕೊಳ್ಳಲು ನಾವೇ ಹೋರಾಟ ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಹೇಳಿದರು.

ದಸರಾ ಆಚರಣೆಗೆ ಸಂಬಂಧಿಸಿದಂತೆ ಚಿನ್ನದ ಅಂಬಾರಿ, ರಾಜ ಸಿಂಹಾಸನ ಮತ್ತು ಅರಮನೆ ವಿಚಾರಗಳ ಕುರಿತು ಪ್ರತಿಕ್ರಿಯಿಸಿ, ತಮ್ಮ ತಾಯಿ ಪ್ರಮೋದಾದೇವಿ ಒಡೆಯರ್ ಅವರು ಈ ವಿಷಯಗಳಲ್ಲಿ ಅಂತಿಮ ನಿರ್ಧಾರ ಕೈಗೊಳ್ಳಲಿದ್ದಾರೆ ಎಂದು ತಿಳಿಸಿದರು. ಈ ವಿಚಾರಗಳಲ್ಲಿ ಅವರೇ ನಿರ್ಧಾರ ತೆಗೆದುಕೊಳ್ಳಲಿದ್ದಾರೆ. ಅದಕ್ಕೆ ಅನುಗುಣವಾಗಿ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಈ

ಅರಾಜಕತೆ ಅಳಿಸಿ ದೇಶ ಉಳಿಸಿ ಬಿಜೆಪಿ ಬೃಹತ್ ಪಾದಯಾತ್ರೆ



ರಾಯಚೂರು, ನ. 10: ಕಾಂಗ್ರೆಸ್ ಹಾಗೂ ಅದರ ಮಿತ್ರಪಕ್ಷಗಳು ಪ್ರಜಾಪ್ರಭುತ್ವದ ಹೆಸರಿನಲ್ಲಿ ದೇಶದಲ್ಲಿ ಅರಾಜಕತೆ ಸೃಷ್ಟಿಸಲು ಪ್ರಯತ್ನ ಮಾಡುತ್ತಿವೆ ಎಂದು ಆರೋಪಿಸಿರುವ ಬಿಜೆಪಿ ನಾಯಕರು, ನಗರದಲ್ಲಿ ಸುಮಾರು ಎರಡು ಕಿ.ಮೀ. ಪಾದಯಾತ್ರೆ ಮಾಡಿದರು.

ಅಧಿಕಾರದ ಆಸೆಯಿಂದಾಗಿ ಕಾಂಗ್ರೆಸ್ ಹೀಗೆ ಮಾಡುತ್ತಿದ್ದರೂ ಈ ಪ್ರಯತ್ನದಲ್ಲಿ ಯಶಸ್ಸು ಸಾಧ್ಯವೇ ಇಲ್ಲ. ರಾಹುಲ್ ಗಾಂಧಿ ಪಕ್ಷದಲ್ಲಿರುವ ತನಕ ಪಕ್ಷ ಅಧಿಕಾರಕ್ಕೆ ಬರಲು ಆಗುವುದಿಲ್ಲ ಎಂದು ಬಿಜೆಪಿ ನಾಯಕರು ಕುಟುಕಿದರು.

ಬಿರುಬಿಸಿಲಿನಲ್ಲಿಯೂ ಅಪಾರ ಸಂಖ್ಯೆಯಲ್ಲಿ ಸೇರಿದ್ದ ಬಿಜೆಪಿ ನಾಯಕರು ಹಾಗೂ ಕಾರ್ಯಕರ್ತರು ಶಿರಸಪ್ಪಯ್ಯನ ಮಠದಿಂದ ಅಶೋಕ ವೃತ್ತದ ತನಕ ಪಾದಯಾತ್ರೆ ಮೂಲಕ ಬಂದು ವೃತ್ತದ ಬಳಿಕ ಬಹಿರಂಗ ಸಭೆ ನಡೆಸಿದರು.

ಜಿಲ್ಲಾ ಬಿಜೆಪಿ ಹಮ್ಮಿಕೊಂಡಿದ್ದ ಬಳ್ಳಾರಿ ವಿಭಾಗ ಮಟ್ಟದ ಯಾತ್ರೆಯಲ್ಲಿ ರಾಯಚೂರು, ಕೊಪ್ಪಳ, ಬಳ್ಳಾರಿ, ವಿಜಯನಗರ ಜಿಲ್ಲೆಗಳ ಪ್ರಮುಖರು ಪಾಲ್ಗೊಂಡಿದ್ದರು.

ಸಂಸದ ಜಗದೀಶ ಶೆಟ್ಟರ್ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಅವರು ಯಾವುದೇ ಹಗರಣವಿಲ್ಲದೇ 12 ವರ್ಷ ಆಡಳಿತ ನೀಡಿದ್ದಾರೆ. 2014ರಲ್ಲಿ ದೇಶದಲ್ಲಿದ್ದ ಆರ್ಥಿಕ ಸ್ಥಿತಿಗೂ ಈಗಿನ ಸ್ಥಿತಿಗೂ ಸಾಕಷ್ಟು ಬದಲಾವಣೆಯಾಗಿದೆ. 2047ರಲ್ಲಿ ಜಗತ್ತಿನಲ್ಲಿ ಭಾರತ ಅಗ್ರ ಆರ್ಥಿಕ ರಾಷ್ಟ್ರವಾಗಿ ಅಭಿವೃದ್ಧಿ ಕಾಣಲಿದೆ. 2029ರ ಚುನಾವಣೆಯಲ್ಲಿಯೂ ಮೋದಿ ಮತ್ತೆ ಪ್ರಧಾನಿಯಾಗುವುದು ನಿಶ್ಚಿತ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎರಡೇ ವರ್ಷಗಳಲ್ಲಿ ತಮ್ಮ ವರ್ಚಸ್ಸು ಕಳೆದುಕೊಂಡಿದ್ದಾರೆ. ಆದರೆ ಮೋದಿ 12 ವರ್ಷಗಳಾದರೂ ಜಾಗತಿಕ ಮಟ್ಟದ ನಾಯಕರಾಗಿ ವರ್ಚಸ್ಸು ಹೆಚ್ಚಿಸಿಕೊಂಡಿದ್ದಾರೆ ಎಂದು ಹೇಳಿದರು.

ರಾಹುಲ್ ಗಾಂಧಿ ಅವರಿಗೆ ತುರ್ತಾಗಿ ಪ್ರಧಾನಿಯಾಗಬೇಕಾಗಿದೆ. ಅರಾಜಕತೆ ಮೂಲಕ ಅಧಿಕಾರ ಪಡೆಯಲು ಸಾಧ್ಯವಿಲ್ಲ. ಚುನಾವಣೆಯ ಮೂಲಕ ಮಾತ್ರ ಅಧಿಕಾರ ಪಡೆಯಬೇಕು. ಆದರೆ ರಾಹುಲ್ ಗಾಂಧಿ ಐದು ಸಾವಿರ ಜನರನ್ನು ಕರೆದುಕೊಂಡು ಬಂದು ಸಂಸತ್ತಿಗೆ ನುಗ್ಗಿಬಿಟ್ಟರೆ ಅಧಿಕಾರ ಸಿಗುತ್ತದೆ ಎನ್ನುವ ಭ್ರಮಾಲೋಕದಲ್ಲಿದ್ದಾರೆ ಎಂದು ಟೀಕಿಸಿದರು.

ಎನ್‌ಡಿಎ ಮೊದಲ ರ್‍ಯಾಂಕ್ ಪಡೆದ ಭದ್ರಾವತಿಯ ಶ್ರೇಯಾಗೌಡಗೆ ಸಂಸದ ಬಿ.ವೈ.ರಾಘವೇಂದ್ರ ಸನ್ಮಾನ



ಶಿವಮೊಗ್ಗ, ನ.10: ಇತ್ತೀಚೆಗೆ ನಡೆದ ಲೋಕಸೇವಾ ಆಯೋಗದ ರಾಷ್ಟ್ರೀಯ ರಕ್ಷಣಾ ಅಕಾಡೆಮಿಯ ಪರೀಕ್ಷೆಯಲ್ಲಿ ದೇಶಕ್ಕೆ ಪ್ರಥಮ ರ್‍ಯಾಂಕ್ ಪಡೆದ ಶ್ರೇಯಾ ಗೌಡ ಅವರ ಭದ್ರಾವತಿ ನಿವಾಸಕ್ಕೆ ಸಂಸದ ಬಿ.ವೈ. ರಾಘವೇಂದ್ರ ಭೇಟಿ ನೀಡಿ ಗೌರವಿಸಿದರು.

ಭದ್ರಾವತಿಯ ತಿಮ್ಲಾಪುರ ಗ್ರಾಮದ ಮನೆಗೆ ಇಂದು ಭೇಟಿ ನೀಡಿದ ಸಂಸದರು, ಶ್ರೇಯಾಗೆ ಹಾರ, ಶಾಲು, ಮೈಸೂರು ಪೇಟ ತೊಡಿಸಿ ಸನ್ಮಾನಿಸಿದರು. ಶ್ರೇಯಾ ಅವರ ಕುಟುಂಬದೊಂದಿಗೆ ಕೆಲಕಾಲ ಮಾತುಕಥೆ ನಡೆಸಿದ ಬಿ.ವೈ.ರಾಘವೇಂದ್ರ, ಶ್ರೇಯಾಳ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಸಂಸದರು, ಸಾಮಾನ್ಯ ಕುಟುಂಬಕ್ಕೆ ಸೇರಿದ ಶ್ರೇಯಾಳ ಸಾಧನೆ ಎಲ್ಲರಿಗೂ ಮಾದರಿ. ದೇಶಭಕ್ತರ ಪರವಾಗಿ ಅವರಿಗೆ ಹೃದಯಪೂರ್ವಕ ಅಭಿನಂದನೆ. ದೇವರು ಎಲ್ಲರಿಗೂ ಒಂದು ಶಕ್ತಿಯನ್ನು ನೀಡಿರುತ್ತಾನೆ. ಅದನ್ನು ಹೇಗೆ ಉಪಯೋಗಿಸಿಕೊಳ್ಳುತ್ತೇವೆ ಎಂಬುದು ಬಹಳ ಮುಖ್ಯ. ತಾನು ಮಾಡಿದ್ದೇ ಸರಿ ಅಂದುಕೊಳ್ಳುವ ಈ ಸಮಯದಲ್ಲಿ ಶ್ರೇಯಾ ಉತ್ತಮ ದಾರಿಯನ್ನು ಕಂಡುಕೊಂಡು ತನ್ನ ಕಣಕಣದಲ್ಲೂ ದೇಶಭಕ್ತಿಯನ್ನು ರೂಢಿಸಿಕೊಂಡಿದ್ದಾರೆ ಎಂದರು.

ಸತ್ಯಶುದ್ಧ ಕಾಯಕದಿಂದ ಉನ್ನತ ಸಾಧನೆ ಸಾಧ್ಯ: ಡಾ.ಬಸವಲಿಂಗ ಪಟ್ಟದ್ದೇವರು



ಬೀದರ್, ನ. 10: ಕಾಯಕನಿಷ್ಠೆ, ಸತ್ಯಶುದ್ಧ ನಡೆ ಮತ್ತು ನಿರಂತರ ಪರಿಶ್ರಮ ನಮ್ಮೆಲ್ಲರನ್ನು ಉನ್ನತ ಸಾಧನೆಯ ಶಿಖರಕ್ಕೆ ಕೊಂಡೊಯ್ಯುತ್ತವೆ ಎಂದು ಬಸವಕಲ್ಯಾಣ ಅನುಭವ ಮಂಟಪ ಟ್ರಸ್ಟ್ ಅಧ್ಯಕ್ಷ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಹೇಳಿದರು.

ಬಸವಣ್ಣನವರು ಹೇಳಿದಂತೆ ಸತ್ಯವ ನುಡಿಯುವುದೇ ದೇವಲೋಕ, ಮಿಥ್ಯವ ನುಡಿಯುವುದೇ ಮರ್ತ್ಯಲೋಕ ತಾವೆಲ್ಲರೂ ಸತ್ಯ ಮತ್ತು ಪ್ರಾಮಾಣಿಕತೆಯ ಹಾದಿಯಲ್ಲಿ ನಡೆದು ಇಡೀ ಸಮಾಜಕ್ಕೆ ಮಾದರಿಯಾಗಿದ್ದೀರಿ. ನಿಮ್ಮ ಈ ಸಾಧನೆಯು ಕೇವಲ ವೈಯಕ್ತಿಕ ಯಶಸ್ಸಲ್ಲ, ಅದು ಇಡೀ ಶರಣ ಸಂಕುಲಕ್ಕೆ ಮತ್ತು ನಾಡಿಗೆ ಸಂದ ಗೌರವವಾಗಿದೆ. ನಿಮ್ಮ ಜ್ಞಾನ ಮತ್ತು ಅನುಭವವು ಮುಂದಿನ ಪೀಳಿಗೆಯ ಯುವಕರಿಗೆ ದಾರಿದೀಪವಾಗಲಿ ಎಂದು ತಿಳಿಸಿದರು.

ಬೆಂಗಳೂರು ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಸಚಿವ ಡಾ.ಸಂದೀಪ ಹರ್ಷಂಗಿ ಮಾತನಾಡಿ, ಬಸವಲಿಂಗ ಪಟ್ಟದ್ದೇವರು ಗಡಿಭಾಗದಲ್ಲಿ ಮಾಡುತ್ತಿರುವ ಶೈಕ್ಷಣಿಕ ಸೇವೆ ಅನನ್ಯವಾಗಿದೆ. ಪೂಜ್ಯರು ಈ ಭಾಗದಲ್ಲಿ ಶಿಕ್ಷಣದ ದೊಡ್ಡ ಮರವನ್ನು ಬೆಳೆಸಿದ್ದಾರೆ. ಈ ನೆರಳಿನಲ್ಲಿ ಎಲ್ಲ ವಿದ್ಯಾರ್ಥಿಗಳು ತಮ್ಮ ಜೀವನ ರೂಪಿಸಿಕೊಳ್ಳಬೇಕು ಎಂದು ನುಡಿದರು.

ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಸಮ್ಮುಖ ವಹಿಸಿ ಮಾತನಾಡಿದರು. ಬೆಂಗಳೂರು ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಉಪಕುಲಸಚಿವ ಡಾ.ರೇವಣಸಿದ್ಧಪ್ಪ ಬಿ.ಪಾಟೀಲ ಮಾತನಾಡಿದರು.

ಗೌರವ ಸನ್ಮಾನ: ಇದೇ ವೇಳೆ ಶಿಕ್ಷಣ, ಆರೋಗ್ಯ, ಸಾಮಾಜಿಕ ಕ್ಷೇತ್ರ ಸೇರಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸಾಧಕರಿಗೆ ಸನ್ಮಾನಿಸ'ಲಾಯಿತು. ಡಾ.ಸಂದೀಪ ಹರ್ಷಂಗಿ, ಕುಲಸಚಿವ (ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು), ಡಾ.ರೇವಣಸಿದ್ದಪ್ಪ ಬಿ.ಪಾಟೀಲ ಉಪಕುಲಸಚಿವ, (ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು), ಜಗನ್ನಾಥ ಹಲ್ಕಂಡಗೆ ಸದಸ್ಯರು, ಚಂದ್ರಶೇಖರ ಭೀಮಣ್ಣಪ್ಪ ಸೋಮಶೆಟ್ಟಿ ಮತ್ತು ಶಾಂತಾಬಾಯಿ ಮೋಹನರಾವ ಕಾಂಬಳೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು, ಬೀದರ್ ಇವರನ್ನು ಸನ್ಮಾನಿಸಲಾಯಿತು.

11.36 ಲಕ್ಷ ಮೌಲ್ಯದ ಪಡಿತರ ಅಕ್ಕಿ, ಜೋಳ ಜಪ್ತಿ: ಪ್ರಕರಣ ದಾಖಲು



ಕಲಬುರಗಿ, ನ. 10: ಬಡವರು ಮತ್ತು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ತಲುಪಬೇಕಾದ ಪಡಿತರ ಧಾನ್ಯದ ಅಕ್ರಮ ದಾಸ್ತಾನು ಮತ್ತು ಕಾಳಸಂತೆ ಮಾರಾಟದ ಜಾಲದ ಪಾಲಾಗುತ್ತಿದೆಯೇ? ಜಿಲ್ಲೆಯ ಆಳಂದ ತಾಲ್ಲೂಕಿನಲ್ಲಿ ಪಡಿತರ ಅಕ್ಕಿಯನ್ನು ಕಾಸಂತೆಯಲ್ಲಿ ಮಾರಾಟ ಮಾಡಲು ಅಕ್ರಮವಾಗಿ ದಸ್ತಾನು ಮಾಡಿರುವವದು ವರದಿಯಾಗಿದೆ.

ಮಹಾರಾಷ್ಟ್ರ ಗಡಿಯಲ್ಲಿರುವ ಆಳಂದ ತಾಲ್ಲೂಕಿನ ಮಟಕಿ ರಸ್ತೆಯ ರಾಯಲ್‌ಪಾರ್ಕ್ ಬಡಾವಣೆಯ ಪತ್ರಾಸ್‌ಶೆಡ್‌ನಲ್ಲಿ ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದ 12,180 ಕೆ.ಜಿ. ಪಡಿತರ ಅಕ್ಕಿ ಹಾಗೂ 6 ಸಾವಿರ ಕೆ.ಜಿ. ಜೋಳವನ್ನು ಆಹಾರ ನಿರೀಕ್ಷಕರು ದಾಳಿ ನಡೆಸಿ ವಶಪಡಿಸಿಕೊಂಡಿದ್ದಾರೆ. ಸಾಗಣೆಗೆ ಬಳಸಿದ್ದ ಟಾಟಾ ಐಚರ್ ವಾಹನ ಸೇರಿ ಒಟ್ಟು 11.36 ಲಕ್ಷ ರೂ. ಮೌಲ್ಯದ ಸ್ವತ್ತು ಜಪ್ತಿ ಮಾಡಲಾಗಿದೆ.

ಈ ಸಂಬಂಧ ಆಳಂದ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ 207/2026ರ ಅಡಿಯಲ್ಲಿ ಅಗತ್ಯ ವಸ್ತುಗಳ ಕಾಯ್ದೆ 1955ರ ಕಲಂ 3 ಮತ್ತು 7ರ ಪ್ರಕಾರ ಪ್ರಕರಣ ದಾಖಲಾಗಿದ್ದು, ನಾಲ್ವರ ವಿರುದ್ಧ ತನಿಖೆ ಮುಂದುವರಿದಿದೆ.

ಖಚಿತ ಮಾಹಿತಿ ಮೇರೆಗೆ ದಾಳಿ: ರಾಯಲ್‌ಪಾರ್ಕ್ ಬಡಾವಣೆಯ ಪತ್ರಾಸ್‌ಶೆಡ್‌ನಲ್ಲಿ ಅಕ್ರಮವಾಗಿ ಪಡಿತರ ಅಕ್ಕಿ ಮತ್ತು ಜೋಳ ಸಂಗ್ರಹಿಸಿಡಲಾಗಿದೆ ಎಂಬ ಖಚಿತ ಮಾಹಿತಿ ಆಹಾರ ಇಲಾಖೆಗೆ ಲಭಿಸಿತ್ತು. ಈ ಹಿನ್ನೆಲೆಯಲ್ಲಿ ಆಹಾರ ನಿರೀಕ್ಷಕಿ ಶ್ರೀದೇವಿ ಮಠಪತಿ ಸಿಬ್ಬಂದಿ ಹಾಗೂ ಪಂಚರೊಂದಿಗೆ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದರು.

ಈ ವೇಳೆ ಶೆಡ್‌ಗೆ ಬೀಗ ಹಾಕಲಾಗಿತ್ತು. ಶೆಡ್ ಮುಂಭಾಗದಲ್ಲಿ ನಿಂತಿದ್ದ ಕೆಎ–32, ಡಿ–8644 ನೋಂದಣಿ ಸಂಖ್ಯೆಯ ಟಾಟಾ ಐಚರ್‌ವಾಹನದಲ್ಲಿ ಐದು ಪ್ಯಾಕೆಟ್ ಪಡಿತರ ಜೋಳ ಪತ್ತೆಯಾಗಿತ್ತು. ಬಳಿಕ ಶೆಡ್‌ನ ಬೀಗ ತೆರೆದು ಪರಿಶೀಲಿಸಿದಾಗ, ಅಕ್ಕಿ ಮತ್ತು ಜೋಳದ ಚೀಲಗಳನ್ನು ದೊಡ್ಡ ಪ್ರಮಾಣದಲ್ಲಿ ಸಂಗ್ರಹಿಸಿಟ್ಟಿರುವುದು ಬೆಳಕಿಗೆ ಬಂದಿದೆ.

ಪರಿಶೀಲನೆಯಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಪಡಿತರ ಅಕ್ಕಿ ಎಂದು ಗುರುತಿಸಲಾದ 12,180 ಕೆ.ಜಿ. ಅಕ್ಕಿ ಹಾಗೂ 6,000 ಕೆ.ಜಿ. ಜೋಳ ಪತ್ತೆಯಾಗಿದೆ. ಅಕ್ಕಿಯ ಅಂದಾಜು ಮೌಲ್ಯ 4.26 ಲಕ್ಷ ರೂ., ಜೋಳದ ಮೌಲ್ಯ 2.10 ಲಕ್ಷ ರೂ. ಹಾಗೂ ಧಾನ್ಯ ಸಾಗಾಟಕ್ಕೆ ಬಳಸಿದ್ದ ಟಾಟಾ ಐಶರ್‌ವಾಹನದ ಮೌಲ್ಯ 5 ಲಕ್ಷ ರೂ. ಸೇರಿ ಒಟ್ಟು 11.36 ಲಕ್ಷ ರೂ. ಮೌಲ್ಯದ ಸ್ವತ್ತನ್ನು ವಶಪಡಿಸಿಕೊಳ್ಳಲಾಗಿದೆ.

ಜಪ್ತಿ ಮಾಡಿದ ಧಾನ್ಯಗಳನ್ನು ತೂಕ ಮಾಡಿಸಿ ಕೆಎಫ್‌ಸಿಎಸ್‌ಸಿ ಉಗ್ರಾಣಕ್ಕೆ ಸಾಗಿಸಲಾಗಿದೆ. ಪಡಿತರ ಧಾನ್ಯವನ್ನು ಅಕ್ರಮವಾಗಿ ಸಂಗ್ರಹಿಸಿ ಹೆಚ್ಚಿನ ಬೆಲೆಗೆ ಬೇರೆ ರಾಜ್ಯಗಳಿಗೆ ಮಾರಾಟ ಮಾಡಲು ಸಾಗಾಟಕ್ಕೆ ಸಿದ್ಧಪಡಿಸಲಾಗಿತ್ತು ಎಂಬ ಅಂಶ ದೂರಿನಲ್ಲಿ ಉಲ್ಲೇಖವಾಗಿದೆ.

ಶೆಡ್‌ಮಾಲೀಕ, ಅಕ್ರಮವಾಗಿ ಧಾನ್ಯ ಸಂಗ್ರಹಿಸಿಟ್ಟ ವ್ಯಕ್ತಿ, ವಾಹನದ ಮಾಲೀಕ ಹಾಗೂ ಚಾಲಕ ಸೇರಿ ನಾಲ್ವರ ವಿರುದ್ಧ ಪ್ರಕರಣ ದಾಖಲಾಗಿದೆ.

ಜಾಲದ ಸೂತ್ರಧಾರರು ಯಾರು?


ಆಳಂದದಲ್ಲಿ ಪಡಿತರಧಾನ್ಯಗಳ ಅಕ್ರಮ ದಾಸ್ತಾನು ಪತ್ತೆಯಾಗಿ ಪ್ರಕರಣಗಳು ದಾಖಲಾಗುತ್ತಿರುವುದು ಸ್ವಾಗತಾರ್ಹ. ಆದರೆ, ಕೇವಲ ಧಾನ್ಯ ಸಂಗ್ರಹಿಸಿದ್ದ ಸ್ಥಳ, ವಾಹನದ ಮಾಲೀಕ ಅಥವಾ ಚಾಲಕರ ವಿರುದ್ಧ ಪ್ರಕರಣ ದಾಖಲಿಸುವುದರಿಂದ ಸಮಸ್ಯೆಗೆ ಶಾಶ್ವತ ಪರಿಹಾರ ಸಿಗುವುದಿಲ್ಲ. ಪಡಿತರ ಧಾನ್ಯವನ್ನು ಮೂಲದಲ್ಲಿ ಸಂಗ್ರಹಿಸುವವರು ಯಾರು? ಅದನ್ನು ಹಣಕಾಸು ಒದಗಿಸುವವರು ಮತ್ತು ಅಂತಿಮವಾಗಿ ಮಾರಾಟ ಮಾಡುವವರು ಯಾರು? ಎಂಬುದನ್ನು ತನಿಖಾ ಸಂಸ್ಥೆಗಳು ಪತ್ತೆಹಚ್ಚಬೇಕಿದೆ.

ಪಡಿತರ ವ್ಯವಸ್ಥೆಯಲ್ಲಿನ ಸೋರಿಕೆ, ನ್ಯಾಯಬೆಲೆ ಅಂಗಡಿಗಳ ಪಾತ್ರ, ಫಲಾನುಭವಿಗಳಿಂದ ಧಾನ್ಯ ಖರೀದಿಸುವ ವ್ಯವಸ್ಥೆ ಹಾಗೂ ಅಕ್ರಮ ಸಂಗ್ರಹದ ಹಿಂದೆ ಇರುವ ಜಾಲದ ಕುರಿತು ಆಹಾರ ಇಲಾಖೆ ಸಮಗ್ರ ತನಿಖೆ ನಡೆಸಬೇಕಿದೆ. ತಪ್ಪಿತಸ್ಥರು ಯಾರೇ ಆಗಿದ್ದರೂ ಕಾನೂನುಬದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂಬುದು ಸಾರ್ವಜನಿಕರ ಒತ್ತಾಯವಾಗಿದೆ.ಬಡವರ ಹಸಿವು ನೀಗಿಸಬೇಕಾದ ಪಡಿತರಧಾನ್ಯ ಕಾಳಸಂತೆಯ ಸರಕಾಗುತ್ತಿದ್ದರೆ ಅದಕ್ಕಿಂತ ದೊಡ್ಡ ದುರಂತ ಮತ್ತೊಂದಿಲ್ಲ. ಆಳಂದದಲ್ಲಿ ಸತತವಾಗಿ ಪ್ರಕರಣ ದಾಖಲಾಗುತ್ತಿರುವುದು ಅಕ್ರಮ ಜಾಲದ ಸಂಪೂರ್ಣ ಬಯಲಿಗೆ ಎಳೆಯುವ ಅಗತ್ಯವನ್ನು ಎತ್ತಿತೋರಿಸಿದೆ.

ಬಳ್ಳಾರಿ ಮೇಯರ್, ಉಪಮೇಯರ್ ಸ್ಥಾಯಿ ಸಮಿತಿ ಸ್ಥಾನಗಳಿಗೆ ನ.13 ರಂದು ಚುನಾವಣೆ

ಬಳ್ಳಾರಿ, ನ10: ಬಳ್ಳಾರಿ ಮಹಾನಗರ ಪಾಲಿಕೆಯ 25ನೇ ಅವಧಿಯ ಮೇಯರ್, ಉಪ ಮೇಯರ್ ಹಾಗೂ ವಿವಿಧ ಸ್ಥಾಯಿ ಸಮಿತಿ ಸ್ಥಾನಗಳಿಗೆ ನವೆಂಬರ್ 13 ರಂದು ಮಧ್ಯಾಹ್ನ 12.30 ಗಂಟೆಗೆ ಬಳ್ಳಾರಿ ಮಹಾನಗರ ಪಾಲಿಕೆಯ ಶ್ರೀ ಕೃಷ್ಣದೇವರಾಯ ಸಭಾಂಗಣದಲ್ಲಿ ಚುನಾವಣೆ ನಡೆಸಲು ದಿನಾಂಕ ನಿಗದಿಪಡಿಸಲಾಗಿದೆ. ಅಧ್ಯಕ್ಷಾಧಿಕಾರಿಗಳು ಹಾಗೂ ಕಲಬುರಗಿ ಪ್ರಾದೇಶಿಕ ಆಯುಕ್ತರ ಅಧ್ಯಕ್ಷತೆಯಲ್ಲಿ ಈ ಚುನಾವಣೆ ನಡೆಯಲಿದೆ ಎಂದು ಮಹಾನಗರ ಪಾಲಿಕೆಯ ಆಯುಕ್ತ ಪಿ.ಎಸ್. ಮಂಜುನಾಥ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ನಾಡಿನ ಸಮಸ್ತ ಜನತೆಗೆ
ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು
ಮಿನುಗುತ್ತಾ ಬರಲಿ ದೀಪಾವಳಿ, ಮಾಸಿದ ಬದುಕಿಗೆ ತರಲಿ ತಂಗಾಳಿ,
ಮರೆಯಾಗಲಿ ಹಣದುಬ್ಬರದ ಬಿರುಗಾಳಿ, ಲಕ್ಷ್ಮೀದೇವಿಯೇ ನೀ ಮಾಡದಿರು ಚಳುವಳಿ,
ಹರಸು ನೀ ನೀಡುತ್ತಾ ಸಂತಸದ ಬಳುವಳಿ, ದೂರವಾಗಿಸು ಬಡತನದ ಪಾತಳಿ,
ಮುದುಡಲಿ ಅಂಧಕಾರದ ಹಾವಳಿ, ಅರಳಲಿ ಬಾಳಲಿ ನಗೆಯ ಓಕಳಿ..
ದೀಪಾವಳಿ ಹಬ್ಬವು ನಾಡಿನ ಸಮಸ್ತ ಜನತೆಯ ಬಾಳಲ್ಲಿ ಸುಖ, ಶಾಂತಿ, ನೆಮ್ಮದಿ ತರಲೆಂದು ಶುಭ ಹಾರೈಕೆ.
ಶುಭ ಕೋರುವವರು
ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ
ಅಭಿವೃದ್ಧಿ ಬ್ಯಾಂಕ್ ನಿ., ಸಿರುಗುಪ್ಪ
ಡಿ. ಆರ್. ಚಂದ್ರಾರೆಡ್ಡಿ
ಉಪಾಧ್ಯಕ್ಷರು
ಪಿ. ತಿಮ್ಮಪ್ಪ ನಿರ್ದೇಶಕರು
ಹೆಚ್. ಶಾಂತನಗೌಡ ನಿರ್ದೇಶಕರು
ಬಿ.ಎಂ. ಜಡೆಸ್ವಾಮಿ ನಿರ್ದೇಶಕರು
ಶಿವರಾಮಗೌಡ ಹೆಚ್. ನಿರ್ದೇಶಕರು
ಪುರಗೈ ತಾಯಪ್ಪ ನಿರ್ದೇಶಕರು
ಮಲ್ಲಯ್ಯ ಕೆ. ನಿರ್ದೇಶಕರು
ತಿಮ್ಮನಗೌಡ ಎ. ನಿರ್ದೇಶಕರು
ಶ್ರೀಮತಿ ಸರಸ್ವತಿ ಹೆಚ್. ನಿರ್ದೇಶಕರು
ಶ್ರೀಮತಿ ರಾಧ ಎಂ. ನಿರ್ದೇಶಕರು
ಜಿ. ಮರೇಗೌಡ ನಿರ್ದೇಶಕರು
ಶಂಕ್ರಪ್ಪ ನಿರ್ದೇಶಕರು
ಜಿ. ನಾಗರಾಜ ನಿರ್ದೇಶಕರು
ಸುಳುವಾಯಿ ಮಲ್ಲಿಕಾರ್ಜುನ ವೃತ್ತಿಪರ ನಿರ್ದೇಶಕರು
ಗಿರೀಶ್ ಗೌಡ ವೃತ್ತಿಪರ ನಿರ್ದೇಶಕರು
ಬಿ.ಎಂ. ಬನಸೋಡೆ ವೃತ್ತಿಪರ ನಿರ್ದೇಶಕರು
ಶ್ರೀ ಚೊಕ್ಕಬಸವನಗೌಡರ
ಅಧ್ಯಕ್ಷರು, ಪಿಕಾರ್ಡ್ ಬ್ಯಾಂಕ್ ನಿ., ಸಿರುಗುಪ್ಪ
ಮಾಜಿ ಅಧ್ಯಕ್ಷರು, ಕಾಸ್ಕರ್ಡ್ ಬ್ಯಾಂಕ್ ನಿ., ಬೆಂಗಳೂರು
ಮಾಜಿ ಉಪಾಧ್ಯಕ್ಷರು : ಅಪೆಕ್ಸ್ ಬ್ಯಾಂಕ್ ನಿ., ಬೆಂಗಳೂರು


kirloskar
Ferrous
Wishing you a joyful Deepavali filled with peace, prosperity and exciting new opportunities.
Kirloskar Ferrous Industries Limited
A Kirloskar Group Company
Bevinahalli-583234, Tq. & Dist. Koppal


ನಾಡಿನ ಸಮಸ್ತ ಜನತೆಗೆ
ದೀಪಾವಳಿ ಹಬ್ಬದ ಹಾರ್ದಿಕ
ಶುಭಾಶಯಗಳು.
ಡಾ.ಸೈಯದ್ ನಾಸೀರ್ ಹುಸೇನ್
ರಾಜ್ಯಸಭಾ ಸದಸ್ಯರು, ಕಾಂಗ್ರೆಸ್ ಸಂಸದೀಯ ಪಕ್ಷದ ಸಚೇತಕರು (ರಾಜ್ಯಸಭೆ)
ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರು.
ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿಗಳು (ಜಮ್ಮು, ಕಾಶ್ಮೀರ ಮತ್ತು ಲಡಾಖ್)


ಪ್ರತಿಯೊಂದು ಕನಸೂ ತನ್ನದೇ ಆದ
ಸಾಧ್ಯತೆಯ ಬೆಳಕನ್ನು
ಕಂಡುಕೊಳ್ಳಲಿ.
BALDOTA
ನಿಮಗೂ ಮತ್ತು ನಿಮ್ಮ ಕುಟುಂಬಕ್ಕೂ
ದೀಪಾವಳಿ ಹಬ್ಬದ ಶುಭಾಶಯಗಳು.
MINING
PELLETIZATION
STEEL
RENEWABLES
ENVIRONMENTAL SOLUTIONS
GASES
AVIATION
SHIPPING
EXPLORATION


ಬೆಳಕಿನ ಹಬ್ಬ ದೀಪಾವಳಿ ಬದುಕಿನ ಕತ್ತಲೆಯನ್ನು ದೂರ ಮಾಡಿ, ಸುಖ, ಶಾಂತಿ,
ಸಮೃದ್ಧಿ ಹಾಗೂ ಸಂತೋಷದ ಬೆಳಕನ್ನು ಪ್ರತಿಯೊಬ್ಬರ ಮನದಲ್ಲಿ ಬೆಳಗಿಸಲಿ.
ಸಮಸ್ತ ನಾಡಿನ ಜನತೆಗೆ
ದೀಪಾವಳಿ
ಹಬ್ಬದ ಹಾರ್ದಿಕ ಶುಭಾಶಯಗಳು
HAPPY
Diwali
FESTIVAL OF LIGHTS
ಶ್ರೀ ಮುಂಡ್ರಿಗಿ ನಾಗರಾಜ್
ಅಧ್ಯಕ್ಷರು, ಅಡ್ಕರ್ ನಿಗಮ, ಕರ್ನಾಟಕ ಸರ್ಕಾರ ಬೆಂಗಳೂರು


ನಾವು ಅತ್ಯುತ್ತಮವಾದುದನ್ನು
ಇನ್ನಷ್ಟು ಉತ್ತಮಗೊಳಿಸುತ್ತೇವೆ
25 ಶತಕೋಟಿ ಅಮೆರಿಕನ್ ಡಾಲರ್ ಮೌಲ್ಯದ ಬಹು-ವ್ಯಾಪಾರ ಸಮೂಹವಾದ JSW,
ಪ್ರತಿದಿನವೂ ಉತ್ತಮ ಜಗತ್ತನ್ನು ನಿರ್ಮಿಸಲು ಅಗತ್ಯವಾದ ಪರಿವರ್ತನೆಯಲ್ಲಿ ನಂಬಿಕೆ ಹೊಂದಿದೆ.
ಭಾರತದ ಪ್ರಮುಖ ಉದ್ಯಮ ಸಮೂಹಗಳ ಸಾಲಿನಲ್ಲಿ ನಿಲ್ಲಲು ಅಚಲವಾದ ಸಂಕಲ್ಪಬಲದ ಅಗತ್ಯವಿರುತ್ತದೆ.
ಮಹತ್ವಾಕಾಂಕ್ಷೆ ಮತ್ತು ದೂರದೃಷ್ಟಿಯ ಕನಸುಗಳಿಂದ ಪ್ರೇರಿತವಾದ JSW ಸಮೂಹವು ಉಕ್ಕು, ಇಂಧನ,
ಸಿಮೆಂಟ್ ಮತ್ತು ಮೂಲಸೌಕರ್ಯಗಳಂತಹ ಪ್ರಮುಖ ವಲಯಗಳಲ್ಲಿ ಬಲವಾದ ಅಡಿಪಾಯವನ್ನು ನಿರ್ಮಿಸಿ,
ದಶಕಗಳಿಂದ ಭಾರತದ ಅಭಿವೃದ್ಧಿಗೆ ಜಾಲನೆ ನೀಡಿದೆ. ಹಸಿರು ಜಲನಶೀಲತೆ (Green Mobility), ಬಣ್ಣಗಳು,
B2B ಇ-ಕಾಮರ್ಸ್, ರಕ್ಷಣಾ ವಲಯ, ರಿಯಲ್ ಎಸ್ಟೇಟ್, ಕ್ರೀಡೆ ಮತ್ತು ಇತರ ಕ್ಷೇತ್ರಗಳಿಗೆ ವಿಸ್ತರಣೆಗೊಳ್ಳುವ
ಮೂಲಕ, ನಾವು ಉತ್ತಮ ಹಾಗೂ ಎಲ್ಲರನ್ನೂ ಒಳಗೊಂಡ ಭವಿಷ್ಯವನ್ನು ರೂಪಿಸಲು ನಾವೀನ್ಯತೆ ಮತ್ತು
ಸುಸ್ಥಿರತೆಯನ್ನು ಅಳವಡಿಸಿಕೊಳ್ಳುವುದನ್ನು ಮುಂದುವರಿಸಿದ್ದೇವೆ. ಸಮಾಜಕ್ಕೆ ಮರಳಿಕೊಡುವ ತತ್ವದಲ್ಲಿ
ಬೇರೂರಿರುವ ನಾವು, ಸಮುದಾಯಗಳನ್ನು ಸಬಲೀಕರಣಗೊಳಿಸಲು ಮತ್ತು ಶಾಶ್ವತವಾದ ಪರಂಪರೆಯನ್ನು
ಉಳಿಸಲು ಬದ್ಧರಾಗಿದ್ದೇವೆ.
JSW ಸಮೂಹದಲ್ಲಿ, #BetterEveryday (ಪ್ರತಿದಿನವೂ ಉತ್ತಮಗೊಳ್ಳುವುದು) ಎಂಬುದು ಕೇವಲ
ನಂಬಿಕೆಯಲ್ಲ; ಅದು ನಾವು ನಾಳೆಯನ್ನು ರೂಪಿಸುವ ವಿಧಾನವಾಗಿದೆ.
Steel | Energy | Infrastructure | Cement | Paints | Realty
Ventures | E-platforms | Mobility | Defence | Foundation | Sports
www.jsw.in
JSW
Better Everyday